# ಅಧ್ಯಾಯ 3

# ಕ್ರಿಸ್ತನು, ಮೋಶೆಗಿಂತ ಶ್ರೇಷ್ಠನು

ಯೆಹೂದ್ಯರು ಪ್ರವಾದಿಗಳಲ್ಲಿ (1:1) ಮತ್ತು ದೇವದೂತರ ಮೂಲಕ ಕೊಡಲ್ಪಟ್ಟಿದ್ದ ಧರ್ಮಶಾಸ್ತ್ರದ ಬಗ್ಗೆ ಹೆಚ್ಚಳಪಡುತ್ತಿದ್ದರು (2:2). ತಮಗೆ ಅತ್ಯಂಥ ಶ್ರೇಷ್ಠವಾದ ಧರ್ಮಶಾಸ್ತ್ರ ದಾಯಕನು – ಮೋಶೆ – ಅನುಗ್ರಹಿಸಲ್ಪಟ್ಟಿದ್ದಾನೆಂದು ನಂಬಿದ್ದರು. ಮೋಶೆಯ ನಂತರ, ಅವರ ನಂಬಿಕೆಯ ವ್ಯವಸ್ಥೆಯಲ್ಲಿ ಮಹಾಯಾಜಕನು ಅತ್ಯಂಥ ಪ್ರಾಮುಖ್ಯ ಅಧಿಕಾರಿಯಾಗಿದ್ದನು.

ಈ ಪತ್ರಿಕೆಯ ಗುರಿಗಳಲ್ಲೊಂದೆಂದರೆ ಯೆಹೂದಿ ದೇವಜನರನ್ನು ಪುನಃ ಯೆಹೂದಿಮತದ ಕಡೆಗೆ ತಿರುಗಿಕೊಳ್ಳದಂತೆ ತಡೆಯುವದಾಗಿತ್ತು. ಅವರು ಪ್ರವಾದಿಗಳು, ಧರ್ಮಶಾಸ್ತ್ರ, ಮತ್ತು ಮೋಶೆಯ ಕುರಿತು ಅಂತಹ ಅತ್ಯುನ್ನತವಾದ ಅಭಿಪ್ರಾಯವನ್ನು ಹೊಂದಿದ್ದರಾದ್ದರಿಂದ, ಕ್ರಿಸ್ತನು ಮೋಶೆ ಮತ್ತು ಮಹಾಯಾಜಕನಾದ ಆರೋನನಗಿಂತಲೂ ಶ್ರೇಷ್ಠನಾಗಿದ್ದೇನೆಂಬುದನ್ನು ತೋರಿಸಿ ಕೊಡುವದು ಲೇಖಕನಿಗೆ ಪ್ರಾಮುಖ್ಯವಾಗಿತ್ತು. ತತ್ಪರಿಣಾಮವಾಗಿ, ಇಬ್ರಿಯ 3:1–4:13ರ ಭಾಗವು ಮೋಶೆಗಿಂತಲೂ ಕ್ರಿಸ್ತನು ಶ್ರೇಷ್ಠನೆಂಬುದರ ಬಗ್ಗೆ ಮಾತಾಡುತ್ತದೆ.

## ಕ್ರಿಸ್ತನು, ಅಪೊಸ್ತಲ ಹಾಗೂ ಮಹಾಯಾಜಕನಾಗಿದ್ದಾನೆ (3:1-6)

**3:1-6**

**1ಆದದರಿಂದ ದೇವಜನರಾದ ಸಹೋದರರರೇ, ಪರಲೋಕಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ, ನಾವು ಪ್ರತಿಜ್ಞೆಮಾಡಿ ಒಪ್ಪಿಕೊಂಡಿರುವ ದೇವರಪ್ರೇಷಿತನೂ ಮಹಾಯಾಜಕನೂ ಆಗಿರುವ ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ.**

**2ಮೋಶೆಯು ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದಂತೆಯೇ ಯೇಸುವೂ ತನ್ನನ್ನು**
**ನೇಮಿಸಿದಾತನಿಗೆ ನಂಬಿಗಸ್ತನಾಗಿದ್ದಾನೆ. 3ಮನೆಗಿಂತ ಮನೆಕಟ್ಟಿದವನಿಗೆ ಹೆಚ್ಚಾದ**
**ಮಾನವಿರುವದರಿಂದ ಮೋಶೆಗಿಂತ ಯೇಸುವು ಹೆಚ್ಚಾದ ಮಾನಕ್ಕೆ**
**ಯೋಗ್ಯನೆಂದೆಣಿಸಲ್ಪಟ್ಟಿದ್ದಾನೆ. 4ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು;**
**ಸಮಸ್ತವನ್ನು ಕಟ್ಟಿದಾತನು ದೇವರೇ. 5ಮೋಶೆಯು ಸೇವಕನಾಗಿ ದೇವರ ಮನೆಯಲ್ಲೆಲ್ಲಾ**
**ನಂಬಿಗಸ್ತನಾಗಿದ್ದನು; ಅವನು ಮುಂದೆ ಪ್ರಕಟವಾಗಬೇಕಾಗಿದ್ದ ಸಂಗತಿಗಳಿಗೆ ಸಾಕ್ಷಿಯಾಗಿದ್ದನು.**
**6ಕ್ರಿಸ್ತನಾದರೋ ಗಮನಾಗಿ ದೇವರ ಮನೆಯ ಮೇಲೆ ಅಧಿಕಾರಿಯಾಗಿದ್ದಾನೆ; ನಾವು ನಮ್ಮ**
**ಧೈರ್ಯವನ್ನೂ ನಮ್ಮ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ದೃಢವಾಗಿ**
**ಹಿಡುಕೊಂಡವರಾದರೆ ನಾವೇ ದೇವರ ಮನೆಯವರು.**

1 ಮತ್ತು 2 ವಚನಗಳು ಲೇಖಕನ ಚರ್ಚೆಯ ಹೃದಯಭಾಗವನ್ನು ವ್ಯಕ್ತಪಡಿಸುವ ಇನ್ನೊಂದು ಪ್ರಬಂಧ ಹೇಳಿಕೆಯಾಗಿರುತ್ತದೆ. ಮೋಶೆಯು ಖಂಡಿತವಾಗಿಯೂ ಒಬ್ಬ ಪ್ರವಾದಿ ಮತ್ತು

ಮಧ್ಯಸ್ಥಿಕೆ ಪ್ರಾರ್ಥನೆಗಾರನಾಗಿದ್ದನು. ಅಲ್ಲದೆ ತನ್ನ ಸ್ಥಾನದಲ್ಲಿ ಮತ್ತೊಬ್ಬ ಪ್ರವಾದಿಯು ಬರುವನೆಂಬುದನ್ನು ಸಹ ಆತನು ಮುಂತಿಳಿಸಿದನು (ಧರ್ಮೋಪದೇಶಕಾಂಡ 18:15-18). ಈ ಹೊಸ "ಮೋಶೆ" ಮತ್ತು ಹೊಸ "ಅಪೊಸ್ತಲನು ಹಾಗೂ ಮಹಾಯಾಜಕ"ನು 2:17ರಲ್ಲಿ ಪರಿಚಯಿಸಲ್ಪಟ್ಟಂತೆ, "ಬಂದಿರುವ ಹೊಸತನವನ್ನು" ನಿಯೋಜಿಸಿದನು. ಮೋಶೆ ಮತ್ತು ಆರೋನರು ಹಳೆಯ ಒಡಂಬಡಿಕೆಯಡಿಯಲ್ಲಿ ಬೇರೆ ಬೇರೆಯಾಗಿ ಹೊಂದಿದ್ದ ಪಾತ್ರವನ್ನು ಯೇಸು ಹೊಸ ಒಡಂಬಡಿಕೆಯ ಅಡಿಯಲ್ಲಿ ಹೊಂದಿರುತ್ತಾನೆಂಬುದು ಸ್ಪಷ್ಟವಾಗಿರುತ್ತದೆ.[1]

**ವಚನ 1. ದೇವಜನರಾದ ಸಹೋದರರೇ** ಎಂಬ ಪದಗುಚ್ಛವು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಬಳಸಲ್ಪಟ್ಟಿರುತ್ತದೆ.[2] ಪೌಲನು ಇದನ್ನು ಹೋಲುವಂತಹ "ನಂಬಿಗಸ್ತರಾದ ಸಹೋದರರೇ" ಎಂಬ ಪದಗುಚ್ಛವನ್ನು ಕೊಲೊಸ್ಸೆ 1:2ರಲ್ಲಿ ಬಳಸುತ್ತಾನೆ, ಆದರೆ "ದೇವಜನರಾದ [ಪರಿಶುದ್ಧ] ಸಹೋದರರೇ" ಎಂಬುದು ವಿಶಿಷ್ಟವಾಗಿದೆ. ಅವರು ಕ್ರಿಸ್ತನೊಂದಿಗೆ ಹೊಂದಿರುವ ಸಂಬಂಧದ ಕಾರಣದಿಂದ "ಸಹೋದರರು" "ಪರಿಶುದ್ಧ"ರಾಗಿರಬೇಕೆಂದು ನಾವು ನಿರೀಕ್ಷಿಸತಕ್ಕದ್ದಾಗಿದೆ (ಗಲಾತ್ಯ 3:26, 27). "ಪರಿಶುದ್ಧ" ಮತ್ತು "ದೇವಜನರು" ಎಂಬವುಗಳು ಗ್ರೀಕ್ ಭಾಷೆಯಲ್ಲಿ ಒಂದೇ ಮೂಲಪದದಿಂದ ಬಂದವುಗಳಾಗಿವೆ: ἅγιος (*hagios*) ಎಂಬುದು ನಾಮಪದ, ಮತ್ತು ἁγιάζω (*hagiazō*) ಎಂಬುದು ಒಂದು ಕ್ರಿಯಾಪದವಾಗಿದೆ. ಈ ಪದದ ಅರ್ಥವು "ಪ್ರತ್ಯೇಕಿಸಲ್ಪಟ್ಟ," ದೇವರಿಗೆ ಸಮರ್ಪಿತವಾದ ಎಂದಾಗಿರುತ್ತದೆ. ಲೇಖಕನು ಹಳೆಯ ಒಡಂಬಡಿಕೆಯಲ್ಲಿದ್ದ "ಪರಿಶುದ್ಧ ಜನ" ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತಿದ್ದಾನೆಂದು ತೋರುತ್ತದೆ (ವಿಮೋಚನಕಾಂಡ 19:6; 1 ಪೇತ್ರ 2:9). ಹಳೆಯ ಒಡಂಬಡಿಕೆಯಲ್ಲಿ "ಪರಿಶುದ್ಧ ಜನ" ಎಂಬ ಬಿರುದು ಎಂಟು ಸಾರಿ ಬಳಸಲ್ಪಟ್ಟಿದೆ. ನಾವು ಮೊದಲ ಬಾರಿಗೆ ಅದನ್ನು ಧರ್ಮೋಪದೇಶಕಾಂಡ 7:6ರಲ್ಲಿ ಕಾಣುತ್ತೇವೆ ಮತ್ತು ಅದನ್ನು ಕಡೇ ಬಾರಿಗೆ ದಾನಿಯೇಲ 12:7ರಲ್ಲಿ ಕಾಣುತ್ತೇವೆ. ಕ್ರೈಸ್ತರು ನಿಜವಾಗಿಯೂ ದೇವರ "ಪರಿಶುದ್ಧರು," ಪ್ರತ್ಯೇಕಿಸಲ್ಪಟ್ಟ ಜನರಾಗಿದ್ದಾರೆ (ἅγιοι, *hagioi*).

**ನಾವು ಪರಲೋಕಸ್ವಾಸ್ಥ್ಯಕ್ಕಾಗಿ** [ಪಾಲುಗಾರರಾಗಿ] **ಕರೆಯಲ್ಪಟ್ಟವರು**, ನಾವು ಕ್ರಿಸ್ತನನ್ನು ಅಂಗೀಕರಿಸಿಕೊಂಡು "ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದ"ದ್ದರಲ್ಲಿ ಪ್ರಗತಿಯನ್ನು ಸಾಧಿಸುವದಕ್ಕಾರಂಭಿಸಿದಾಗ ನಾವು ಆ ರೀತಿಯಲ್ಲಿ ಪಾಲುಗಾರರಾದೆವು (ಫಿಲಿಪ್ಪಿ 3:14). ಇಲ್ಲಿ ಕಾಣಿಸಿಕೊಂಡದ್ದನ್ನು ಬಿಟ್ಟರೆ, "ಕರೆಯಲ್ಪಟ್ಟವರು" ಎಂಬ ಪದವು ಪೌಲನಿಂದ ಎಂಟು ಸಾರಿ ಮತ್ತು ಪೇತ್ರನಿಂದ ಒಂದು ಸಾರಿ ಬಳಸಲ್ಪಟ್ಟಿದೆ; ನಾವು ಹೊಸ ಒಡಂಬಡಿಕೆಯಲ್ಲಿ ಇದನ್ನು ಬೇರೆ ಎಲ್ಲಿಯೂ ಕಾಣುವದಿಲ್ಲ. ನಮ್ಮ ಕರೆಯುವಿಕೆಯು ಸ್ವಭಾವದಲ್ಲಿ "ಪರಲೋಕಿಕವಾಗಿದೆ." "ಪರಲೋಕಿಕ" ಎಂಬ ಗುಣವಾಚವು ಇಬ್ರಿಯರಿಗೆ ಪತ್ರಿಕೆಯನ್ನು ಆರು ಸಾರಿ ಕಾಣಿಸಿಕೊಳ್ಳುತ್ತದೆ (6:4; 8:5; 9:23; 11:16; 12:22). ಇದು ನಮ್ಮನ್ನು "ಪರಲೋಕದ ಯೆರೂಸಲೇಮಿ"ನೊಳಗೆ (12:22) ಮತ್ತು ಅಬ್ರಹಾಮನ ಕರೆಯು ಆತನನ್ನು ನಡಿಸಿದ ಪ್ರಕಾರವಾಗಿಯೇ, ನಮ್ಮನ್ನು ಪರಲೋಕದ ಸ್ವದೇಶದೊಳಕ್ಕೆ (11:16) ನಡಿಸುವದರಿಂದ ಅದನ್ನು ನಮ್ಮ "ಕರೆಯಲ್ಪಡುವಿಕೆ" ಸಂಬಂಧದಲ್ಲಿ ಬಳಸಲ್ಪಟ್ಟಿದೆ.

**ಯೇಸು** ಎಂಬ ಹೆಸರು ಇಬ್ರಿಯ 3:1ರಲ್ಲಿ ಎರಡನೆಯ ಸಾರಿ ಪ್ರಸ್ತಾಪಿಸಲ್ಪಟ್ಟಿದೆ. ಆತನ ಹೆಸರು ಲೇಖಕನಿಗೆ ಒಂದು ಮುಖ್ಯವಾದ ಪದವಾಗಿತ್ತು; ಅದು ಪತ್ರಿಕೆಯಲ್ಲಿ ಹದಿನಾಲ್ಕು ಸಾರಿ ಕಂಡು ಬರುತ್ತದೆ. ಅದು ಇಲ್ಲಿ ಕಾಣಿಸಿಕೊಳ್ಳುವಿಕೆಯು ಆತನು ಶರೀರದಲ್ಲಿ ಅವರೊಳಗೆ ಒಬ್ಬನಂತಿದ್ದನೆಂಬುದನ್ನು ಅವರು ಪೂರ್ಣವಾಗಿ ತಿಳುಕೊಳ್ಳುವಂತಾಗುವ ಹಾಗೆ ಇಬ್ರಿಯರಿಗೆ ಆತನ ಮಾನವ ಬದಿಯನ್ನು ಒತ್ತಿ ಹೇಳುವದಕ್ಕಾಗಿ ಆಗಿತ್ತು.

**ಅಪೊಸ್ತಲನು** ಎಂಬುದಕ್ಕೆ ಗ್ರೀಕ್ ಪದವು ἀπόστολος (*apostolos*), ಇದರರ್ಥವು "ಕಳುಹಿಸಲ್ಪಟ್ಟವನು" ಎಂಬುದು. ವಿಶೇಷವಾಗಿ ಹೊಸ ಒಡಂಬಡಿಕೆಯಲ್ಲಿ, ಅದು "ದೇವರ ನಿಯೋಗಿಗಳಾಗಿ ಒಂದು ವಿಶೇಷವಾದ ಕೆಲಸವನ್ನು [ಹೊಂದಿರುವ] ಅತ್ಯಂತ ಸನ್ಮಾನಿಸಲ್ಪಟ್ಟಂಥ ವಿಶ್ವಾಸಿಗಳ ಗುಂಪನ್ನು" ಸೂಚಿಸುತ್ತದೆ.[3] ಹೊಸ ಒಡಂಬಡಿಕೆಯಲ್ಲಿ ಈ ಪದವು ಅನೇಕ ಸಾರಿ ಬಳಸಲ್ಪಟ್ಟಿರುತ್ತಾದರೂ, ಬೇರೆ ಎಲ್ಲಿಯೂ ಕ್ರಿಸ್ತನು "ಅಪೊಸ್ತಲನು" ಎಂದು ಕರೆಯಲ್ಪಟ್ಟಿರುವದಿಲ್ಲ.

Ἀποστέλλω (*apostellō*) ಎಂಬ ಕ್ರಿಯಾಪದವು ಅನೇಕ ಸಾರಿ ಯೇಸುವಿಗೆ ಅನ್ವಯಿಸಲ್ಪಟ್ಟಿರುತ್ತದೆ. ಇದೊಂದು ಸಾಮಾನ್ಯವಾದ ಪದವಾಗಿದ್ದು ಹೊಸ ಒಡಂಬಡಿಕೆಯಲ್ಲಿ ನೂರಕ್ಕೂ ಹೆಚ್ಚು ಸಾರಿ ಕಂಡು ಬರುತ್ತದೆ. *Apostellō* ಎಂಬುದು ಮೊದಲಿಗೆ ಮತ್ತಾಯ 15:24ರಲ್ಲಿ ಕ್ರಿಸ್ತನಿಗೆ ಬಳಸಲ್ಪಟ್ಟಿತು.

ಮೋಶೆ ಮತ್ತು ಯೇಸು ಇಬ್ಬರೂ ದೇವರಿಂದ ಒಂದು ವಿಶೇಷ ನಿಯೋಗಗಳಿಗಾಗಿ ಕಳುಹಿಸಲ್ಪಟ್ಟರು (ವಿಮೋಚನಕಾಂಡ 3:10), ಅದ್ದರಿಂದ ಇಬ್ಬರೂ ದೇವರ ಅಪೊಸ್ತಲರು ಎಂದು ಕರೆಯಲ್ಪಟ್ಟಿದ್ದಾರೆ.[4] ಯೋಹಾನನ ಸುವಾರ್ತೆಯ ಬರವಣಿಗೆಯು ಸ್ನಾನಿಕನಾದ ಯೋಹಾನ ಮತ್ತು ಯೇಸು ದೇವರಿಂದ "ಕಳುಹಿಸಲ್ಪಟ್ಟವರು" ಎಂಬುದನ್ನು ಒತ್ತಿ ಹೇಳುತ್ತದೆ (3:34; 5:24, 36, 37; 6:29; 10:36; 11:42; 17:3; ನೋಡಿರಿ 1 ಯೋಹಾನ 4:10). ಕ್ರಿಸ್ತನು ದೇವರಿಂದ ಕಳುಹಿಸಲ್ಪಟ್ಟ ಪ್ರಕಾರವೇ ಅಪೊಸ್ತಲರು ಕ್ರಿಸ್ತನಿಂದ ಕಳುಹಿಸಲ್ಪಟ್ಟಿದ್ದರು (ಯೋಹಾನ 17:18; 20:21).

"ಅಪೊಸ್ತಲ" ಎಂಬುದರ ಮೂಲಭೂತ ಅರ್ಥ "ಸಂದೇಶಕನು." ಯೇಸು ನಿಶ್ಚಯವಾಗಿ ಮನಗೆ ದೇವರಿಂದ ಬಂದ ಸಂದೇಶಕನಾಗಿದ್ದನು. *Apostolos* ಎಂಬುದು 2 ಕೊರಿಂಥ 8:23ರಲ್ಲಿ ಮತ್ತು ಫಿಲಿಪ್ಪಿ 2:25ರಲ್ಲಿ ಸಭೆಯ ಸಂದೇಶಕರು ಎಂಬುದನ್ನು ಸೂಚಿಸುತ್ತದೆ. ಈ ಪದದ ಯೋಚನೆಯು ಸರ್ಕಾರವೊಂದನ್ನು ಪ್ರತಿನಿಧಿಸುವ ಮತ್ತು ಅದರ ಪರವಾಗಿ ಕಾರ್ಯ ಮಾಡುವ ಅಧಿಕಾರವುಳ್ಳ ಒಬ್ಬ "ನಿಯೋಗಿ" ಎಂದಾಗಿರುತ್ತದೆ. ಮೂಲ ಯೋಚನೆಯು ಮಿಶನರಿ – ಒಂದು ಧ್ಯೇಯದೊಂದಿಗೆ ಕಳುಹಿಸಲ್ಪಟ್ಟವನು – ಎಂಬುದರಲ್ಲಿ ಅಡಕವಾಗಿರುವ ಯೋಚನೆಯೊಂದಿಗೆ ನಿಕಟವಾಗಿರುತ್ತದೆ. ಶಾಸ್ತ್ರೀಯ ಗ್ರೀಕ್ ಭಾಷೆಯಲ್ಲಿ, ಯುದ್ಧಕ್ಕೆ ಹೋಗುವದಕ್ಕೆ ಆರಿಸಿಕೊಳ್ಳಲ್ಪಟ್ಟ ನೌಕಾಸೇನೆ ಅಥವಾ ಹಡಗುಪಡೆಯನ್ನು ನಡಿಸುವದಕ್ಕೆ ಮುಖ್ಯಸ್ಥನಾಗಿರುವ ನೌಕಾಧಿಪತಿಯನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು.

ಈ ಪದವು ಹೊಸ ಒಡಂಬಡಿಕೆಯಲ್ಲಿ ಪ್ರಾಥಮಿಕವಾಗಿ ಹನ್ನೆರಡು ಶಿಷ್ಯರಿಗೆ ಬಳಸಲ್ಪಟ್ಟಿರುತ್ತದೆ (ಮತ್ತಾಯ 10:2-5), ಆದರೆ ಅದು ಸಭೆಯಿಂದ ಆರಿಸಿಕೊಳ್ಳಲ್ಪಟ್ಟ ಬಾರ್ನಬನಂತಹ ಸಂದೇಶಕರನ್ನು ಅಥವಾ ಮಿಶನರಿಗಳನ್ನು ಸಹ ಸೂಚಿಸುವದಕ್ಕೆ ಬಳಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 14:4, 14). ಈ ಪದವು "ಆದೇಶವನ್ನು ಹೊಂದಿರುವ ಒಬ್ಬನು" ಎಂಬ ಯೋಚನೆಯನ್ನು ಒಳಗೊಂಡಿರುತ್ತದೆ.

ಅಪೊಸ್ತಲರ ಕೃತ್ಯಗಳು 2:1-4ರಲ್ಲಿ ಅವರ ಮೇಲೆ ಪವಿತ್ರಾತ್ಮನು ಸುರಿಸಲ್ಪಟ್ಟ ವೇಳೆಯಲ್ಲಿ ಹನ್ನೆರಡು ಮಂದಿ ಶಿಷ್ಯರ ಪೂರ್ಣ ಆದೇಶಿಸುವಿಕೆ ಬಂದಿತು. ಈ ಕಾರಣಕ್ಕಾಗಿ, ಅವರಿಗೆ ಪವಿತ್ರಾತ್ಮನಿಗೋಸ್ಕರ ಕಾಯಬೇಕೆಂದು ಆಜ್ಞಾಪಿಸಲಾಗಿತ್ತು (ಲೂಕ 24:49; ಅಪೊಸ್ತಲರ ಕೃತ್ಯಗಳು 1:8). ಪವಿತ್ರಾತ್ಮನ ದೀಕ್ಷಾಸ್ನಾನವನ್ನು, ಅದರ ಅದ್ಭುತಕರವಾದ ಶಕ್ತಿಯ ಸಮೇತವಾಗಿ ಹೊಂದಿದ ಮೇಲೆ, ಅವರು ಸಾರುವದಕ್ಕೆ ಪೂರ್ಣವಾಗಿ ಅರ್ಹರಾದರು. ಅವರ ಅನನೀಯ ಮತ್ತು ಸಪ್ಫೈರಳ ಮರಣದ ಮೂಲಕವಾಗಿ ಅಧಿಕಾರವು ಯೆರೂಸಲೇಮಿನ

ಜನಸಂಖ್ಯೆಯ ಮೇಲೆ ಮತ್ತು ಸಭೆಯ ಮೇಲೆ – ನಮ್ಮ ವಾಚನದ ಮೂಲಕವಾಗಿರುವಂತೆ – ಅಂತಿಮವಾಗಿಯೂ ಸಂಪೂರ್ಣವಾಗಿಯೂ ಛಾಪು ಮೂಡಿಸಿತ್ತು (ಅಪೊಸ್ತಲರ ಕೃತ್ಯಗಳು 5:1-11). ಆ ಆಘಾತಕರವಾದ ಘಟನೆಯು ಅಪೊಸ್ತಲರಿಗೆ ಕೊಡಲು ಹಣವನ್ನು ತೆಗೆದುಕೊಂಡು ಹೋದ ವೇಳೆ ಆರಾಧನೆಯ ಸಮಯದಲ್ಲಿ ಸಂಭವಿಸಿತ್ತು. ಈ ಸಂಭವವು, ಇನ್ನು ಕೆಲವು ಅದ್ಭುತಗಳ ಜೊತೆಯಲ್ಲಿ (ಅಪೊಸ್ತಲರ ಕೃತ್ಯಗಳು 5:12), ಕೆಲವು ಜನರ ಹೃದಯಗಳಲ್ಲಿ ಭಯವನ್ನು ಉಂಟು ಮಾಡಿತ್ತು, ಅಪೊಸ್ತಲರ ಸಂಗಡ ನಿಕಟವಾದ ಸಹವಾಸವನ್ನು ಇಟ್ಟುಕೊಳ್ಳುವದಕ್ಕೆ ಹಿಂಜರಿಕೆಯನ್ನು ಸಹ ಉಂಟು ಮಾಡಿತ್ತು. ಹೇಗೂ, ಈ ಭಯ (5:13) ಸಭೆಯ ಬೆಳವಣಿಗೆಗೆ ಯಾವದೇ ಅಭ್ಯಂತರವನ್ನು ಉಂಟು ಮಾಡಲಿಲ್ಲ (5:14). ಅದಕ್ಕೆ ತದ್ವಿರುದ್ಧವಾಗಿ, ಅಪೊಸ್ತಲರಿಗೆ ಮತ್ತು ಅವರ ಅಧಿಕಾರಕ್ಕೆ ಒಂದು ಯಥಾರ್ಥವಾದ ಗೌರವನ್ನು ಕೊಡುವದು ನಿಜವಾದ ಸಭೆಯ ಬೆಳವಣಿಗೆಗೆ ಬಹು ಮುಖ್ಯವಾಗಿರುತ್ತದೆಂಬುದು ನಮಗೆ ಸಾಭಿತಾಗತಕ್ಕದ್ದು.

ಇಂದು ಯಾವ ಹೊಸ ಅಪೊಸ್ತಲರೂ ಇರುವದಿಲ್ಲ, ಯಾಕೆಂದರೆ ಈಗಲೂ ನಮ್ಮೊಂದಿಗೆ ಅದೇ ಅಪೊಸ್ತಲರು ಪ್ರೇರಿತ ವಾಕ್ಯಗಳ ಮೂಲಕವಾಗಿ ಮಾತಾಡುತ್ತಿದ್ದಾರೆ. ಹನ್ನೆರಡು ಮಂದಿಗೆ ವಾಗ್ದಾನ ಮಾಡಿದ್ದ ಸಹಾಯವು ಅವರಿಗೆ ಪವಿತ್ರಾತ್ಮನ ಮೂಲಕ ಕೊಡಲ್ಪಡಬೇಕಾಗಿತ್ತು, ಅದು ಯೋಹಾನ 14-17 ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿದೆ. ಆ ವಾಗ್ದಾನಗಳು (ಸತ್ಯದ ಪ್ರಕಟನೆಗಳನ್ನು ಪಡೆದುಕೊಳ್ಳುವದು, ಯೇಸುವು ಕಲಿಸಿದ ಎಲ್ಲವನ್ನೂ ಜ್ಞಾಪಕದಲ್ಲಿಟ್ಟುಕೊಳ್ಳುವದು, ಮತ್ತು ಭವಿಷ್ಯದ ಘಟನೆಗಳ ಕುರಿತ ಜ್ಞಾನವನ್ನು ಸಂಪಾದಿಸಿಕೊಳ್ಳುವದು; ಯೋಹಾನ 14:26; 16:13) ಈಗಲೂ ನಮಗೋಸ್ಕರ ಚಾಲನೆಯಲ್ಲಿರುತ್ತವೆಂದು ಕೆಲವರು ಹೇಳಿಕೊಳ್ಳುತ್ತಾರೆ. ಹೇಗೂ, ಅಂಥ ಶಕ್ತಿಗಳು ಇಂದು ಕ್ರೈಸ್ತರಿಗೆ ವಾಗ್ದಾನ ಮಾಡಲ್ಪಟ್ಟಿರುವದಿಲ್ಲ. ಒಂದು ಅವುಗಳು ವಾಗ್ದಾನ ಮಾಡಲ್ಪಟ್ಟಿದ್ದರೆ, ನಾವು ಶಾಸ್ತ್ರಗಳಿಗೆ ಹೊಸ ಸೇರ್ಪಡೆಗಳನ್ನು ಬರೆಯುವದಕ್ಕೆ ಸಾಧ್ಯವಿರುತ್ತಿತ್ತು.

ಯೇಸುವು ದೇವರ ಚಿತ್ತವನ್ನು ನೆರವೇರಿಸುವದಕ್ಕೆ ಮತ್ತು ಯೇಸುವಿನ ಹೊಸ ಕೂಟವನ್ನು, ಸಭೆಯನ್ನು ಸ್ಥಾಪಿಸುವದಕ್ಕೆ ಮನುಷ್ಯರಿಗಾಗಿ ದೇವರ "ಸಂದೇಶಕ" ನಾಗಿದ್ದಾನೆ. ಆತನು ಇದನ್ನು ಅಪೊಸ್ತಲರ ಮೂಲಕ ಮಾಡಿದನು, ಅವರು ಪವಿತ್ರಾತ್ಮನಿಂದ ಪ್ರೇರಿಸಲ್ಪಟ್ಟಿದ್ದರು. ಈ ವಾಸ್ತವಾಂಶಗಳ ಬೆಳಕಿನಲ್ಲಿ, ಆತನು ಮೋಶೆ ಅಥವಾ ಬೇರೆ ಯಾವನಿಗಿಂತಲೂ ಶ್ರೇಷ್ಠನಾದ ಅಪೊಸ್ತಲನಾಗಿದ್ದಾನೆ.

ಲೇಖಕನು **ಪ್ರತಿಜ್ಞೆ** ಎಂದು ಬರೆಯುತ್ತಾನೆ. "ಪ್ರತಿಜ್ಞೆ" (ὁμολογία, *homología*) ಎಂಬುದು ಒಂದು ನಿಶ್ಚಿತ ನಂಬಿಕೆಯ ಹೇಳಿಕೆಯನ್ನು ಸೂಚಿಸಬಹುದಾಗಿದೆ. ಹಳೆಯ ಒಡಂಬಡಿಕೆಯಲ್ಲಿ, ಈ ಪದದ ಅರ್ಥವು ಧರ್ಮಶಾಸ್ತ್ರಕ್ಕೆ ನಿಷ್ಠೆಯನ್ನು ಅರಿಕೆ ಮಾಡುವದನ್ನು ಸೂಚಿಸುವದಾಗಿತ್ತು (ವಿಮೋಚನಕಾಂಡ 24:3; LXX). ಹೊಸ ಒಡಂಬಡಿಕೆಯಲ್ಲಿ, ನಾವು "ಒಳ್ಳೇ ಪ್ರತಿಜ್ಞೆ" ಒಪ್ಪಿಕೊಳ್ಳುತ್ತೇವೆ, ಅದು "ಅನೇಕ ಸಾಕ್ಷಿಗಳು ಮುಂದೆ" ತಿಮೊಥೆಯನು ಮಾಡಿದ ಪ್ರತಿಜ್ಞೆಯಾಗಿತ್ತು (1 ತಿಮೊಥೆ 6:12). ಪೌಲನು "ಪ್ರತಿಜ್ಞೆ"ಯನ್ನು ಯೇಸು ಪಿಲಾತನ ಮುಂದೆ ಮಾಡಿದ ಪ್ರತಿಜ್ಞೆಯೊಂದಿಗೆ ಗುರುತಿಸುತ್ತಾನೆ (1 ತಿಮೊಥೆ 6:13). ಕರ್ತನು ವಿಗ್ರಹಾರಾಧಕ ಜನಾಂಗದ ದೇಶಾಧಿಪತಿಯ ಮುಂದೆ ತಾನು ಒಬ್ಬ ಅರಸನು ಮತ್ತು ಆತನ ಆಳ್ವಿಕೆಯು ಸತ್ಯದ ಆತ್ಮೀಕ ಮಂಡಲದಲ್ಲಿ ಎಂಬದಾಗಿ ಪ್ರತಿಜ್ಞೆ ಮಾಡಿದನು (ಯೋಹಾನ 18:36, 37). ತಿಮೊಥೆಯನು ಮಾಡಿದ್ದ ಪ್ರಕಾರವೇ ಸಾಕ್ಷಿಕರಿಸುವದೆಂದರೆ, ಪ್ರತಿಜ್ಞೆ ಮಾಡುವವನ ಜೀವನದ ಮೇಲೆ ಯೇಸುವು ಕರ್ತನಾಗಿದ್ದಾನೆಂದು ಘೋಷಿಸುವಂತಹ ಒಂದು "ಪ್ರತಿಜ್ಞೆ" ಮಾಡುವದು

ಎಂದಾಗಿರುತ್ತದೆ. "ಯೇಸು ಕ್ರಿಸ್ತನನ್ನು ದೇವಕುಮಾರನೆಂದು ನಂಬುತ್ತೇನೆ" (ಅಪೊಸ್ತಲರ ಕೃತ್ಯಗಳು 8:37) ಎಂದು ಹೇಳುವದೆಂದರೆ ಆ ವಾಸ್ತವಾಂಶವನ್ನು ಅಂಗೀಕರಿಸಿಕೊಳ್ಳುವದು ಎಂದರ್ಥವಾಗಿದೆ. ಅದು "ಯೇಸುವೇ ಕರ್ತನು" (ರೋಮಾ 10:9, 10) ಎಂದು ಹೇಳುವಂತಿರುತ್ತದೆ. ಅಂಥ ಪುದಗುಚ್ಛವೊಂದನ್ನು ಯಥಾರ್ಥವಾದ ನಂಬಿಕೆಯಿಂದ ಉಚ್ಛರಿಸುವದೆಂದರೆ "ಒಳ್ಳೇ ಪ್ರತಿಜ್ಞೆ" ಮಾಡಿದಂತಾಗುವದು; ಈ ಸತ್ಯವನ್ನು ತಿರಸ್ಕರಿಸುವದೆಂದರೆ ಕ್ರಿಸ್ತನನ್ನು ಅಲ್ಲಗಳೆದಂತಾಗುವದು, ಇದರ ಫಲಿತವಾಗಿ ಆತನು ನಮ್ಮನ್ನು ತನ್ನವರಲ್ಲವೆಂದು ಹೇಳುವಂತಾಗಬಹುದು (ಮತ್ತಾಯ 10:32, 33).

"ಪ್ರತಿಜ್ಞೆ" ಎಂಬುದಕ್ಕಿರುವ ಅದೇ ಪದವು 1 ತಿಮೊಥೆ 6:12ರಲ್ಲಿ ಸಿಕ್ಕುತ್ತದೆ, ಆದರೆ ಈ ಸ್ಥಳದಲ್ಲಿ ಅದು ಗುಣವಾಚಿಯನ್ನು ಹೊಂದಿದೆ ಮತ್ತು ಅದು ಆಂಗ್ಲದಲ್ಲಿ "*the* good confession" ಎಂದು ಇರುತ್ತದೆ. ನಾವು ಕ್ರಿಸ್ತನನ್ನು ನಮ್ಮ ಕರ್ತನು ಎಂದು ಒಪ್ಪಿಕೊಳ್ಳುವಾಗ, ಆತನು ನಮ್ಮ **ಮಹಾಯಾಜಕ** ಆಗುವನು. ಕ್ರಿಸ್ತನವರಾಗಿ ಆಗುವ ಒಂದು ಪರಿವರ್ತನೆಯು ಒಂದು "ಪ್ರತಿಜ್ಞೆ" ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಅದು ಒಬ್ಬನ ಕ್ರೈಸ್ತ ನಡೆಯನ್ನು ಆರಂಭಿಸುವದಕ್ಕೆ ಮೊದಲ ಸಾರಭೂತವಾದ ಹೆಜ್ಜೆಯಾಗಿರುತ್ತದೆ. ಮೊದಲ ತಿಮೊಥೆ 6:12, 13 ವಚನಗಳು ಮತ್ತು ಮತ್ತಾಯ 16:16-18 ವಚನಗಳು "ಒಳ್ಳೇ ಪ್ರತಿಜ್ಞೆ" ಮಾಡಲ್ಪಡುವದರ ಉತ್ತಮ ಉದಾಹರಣೆಗಳನ್ನು ಕೊಡುತ್ತವೆ. ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ, ರಕ್ಷಣೆಯನ್ನು ಪಡೆದುಕೊಳ್ಳುವದಕ್ಕೆ ಅಂಥ ಅರಿಕೆಯು ಅವಶ್ಯಕವೆಂಬುದನ್ನು ಪೌಲನು ಹೇಳುತ್ತಾನೆ (10:9, 10). ನಾವು ಯೇಸುವನ್ನು ಕರ್ತನೆಂದು, ದೇವಕುಮಾರನೆಂದು ಅಂಗೀಕರಿಸಿಕೊಳ್ಳಬೇಕು. ಒಬ್ಬನು ನಂಬಿಕೆಯಿಂದ ಮಾತ್ರವೇ ರಕ್ಷಿಸಲ್ಪಡುವದಕ್ಕೆ ಸಾಧ್ಯವಿದ್ದರೆ, ಯಾವ ಪ್ರತಿಜ್ಞೆಯು ಅವಶ್ಯಕವಾಗುವದಿಲ್ಲ.

ಮತ್ತಾಯ 10:32ರ "ಪ್ರತಿಜ್ಞೆ" ಯು ಒಂದು ನಿರಂತರವಾದ ಕ್ರಿಯೆಯಾಗಿದೆ, ಆದ್ದರಿಂದ ಅದು ಒಬ್ಬನು ಸುವಾರ್ತೆಗೆ ವಿಧೇಯನಾಗುವವನಾಗಿ ಮಾಡುವ ನಂಬಿಕೆಯ ಅರಿಕೆಯನ್ನು ಮಾತ್ರವೇ ಸೂಚಿಸುವದಿಲ್ಲ. ಪ್ರತಿಯೊಬ್ಬ ಕ್ರೈಸ್ತನು ಒಂದು "ಪ್ರತಿಜ್ಞೆ ಮಾಡುವ" ಜೀವಿತದ ಮೂಲಕ ತಾನು ದೇವರ ಮಗುವೆಂದು ತೋರಿಸುವದನ್ನು ಮುಂದುವರೆಸಬೇಕು. ಇಬ್ರಿಯ 4:14 ಮತ್ತು 10:23 ಕ್ರಿಸ್ತನನ್ನು ಕರ್ತನೆಂದು ಪ್ರತಿಜ್ಞೆ ಮಾಡುವ ಒಂದೇ ಬಾರಿಯ ಮತ್ತು ನಿರಂತರವಾದ ಪ್ರತಿಜ್ಞೆ ಎರಡನ್ನೂ ನೆನಪಿಗೆ ತರುತ್ತವೆ. ಎರಡನೆಯ ಕೊರಿಂಥ 9:13ನೇ ವಚನವು "ನೀವು ಮಾಡಿದ ಪ್ರತಿಜ್ಞೆಗೆ ಸರಿಯಾಗಿ ಅನುಸರಿಸುವದು" ಎಂಬುದರ ಬಗ್ಗೆ ಮಾತಾಡುತ್ತದೆ, ಅದು ನಾವು ಹೇಳಿಕೊಳ್ಳುವ ನಂಬಿಕೆಯೊಂದಿಗೆ ಸಾಮರಸ್ಯದಿಂದ ಜೀವಿಸಬೇಕು ಎಂಬುದನ್ನು ಸೂಚಿಸುತ್ತದೆ. ಮಕೆದೋನ್ಯದವರು ಇದನ್ನು ಮಾಡಿದ್ದರು (2 ಕೊರಿಂಥ 8:1-5), ಮತ್ತು ಕಷ್ಟದಲ್ಲಿರುವವರಿಗೆ ದಾರಾಳವಾಗಿ ಕೊಡುವ ಮೂಲಕ ಅವರು ಇದನ್ನೇ ಮಾಡಬೇಕೆಂದು ಕೊರಿಂಥದವರಿಗೆ ಬೇಡಿಕೊಳ್ಳಲಾಯಿತು.

**ವಚನ 2.** NASBಯು ಯೇಸು **ನಂಬಿಗಸ್ತನಾಗಿದ್ದನು** ಎಂದು ಹೇಳುತ್ತದೆ; ಆದರೆ ಮೂಲ ಗ್ರೀಕ್ ವಾಕ್ಯವು ವರ್ತಮಾನಕಾಲರೂಪವನ್ನು ಬಳಸುತ್ತದೆ, ಅಂದರೆ "ಯೇಸುವು ನಂಬಿಗಸ್ತನಾಗಿದ್ದಾನೆ." "ನಂಬಿಗಸ್ತ" ಎಂಬ ಪದವು ಇನ್ನೊಂದು ಮುಖ್ಯ ಪದವಾಗಿದ್ದು ಇಬ್ರಿಯರಿಗೆ ಪತ್ರಿಕೆಯಲ್ಲಿ ಆರು ಸಾರಿ ಮತ್ತು ಪೌಲನ ಬರಹಗಳಲ್ಲಿ ಹದಿಮೂರು ಸಾರಿ ಬಳಸಲ್ಪಟ್ಟಿರುತ್ತದೆ. ಯೆಹೂದಿ ರಬ್ಬಿಗಳು **ಮೋಶೆಯ** ನಿಷ್ಠಾವಂತಿಕೆಗೆ ಪುರಾವೆಯಾಗಿ ಅರಣ್ಯಕಾಂಡ 12:7ನ್ನು (LXX) ಉಲ್ಲೇಖಿಸಿದರು.[5] ಐಗುಪ್ತಕ್ಕೆ ಹಿಂದಿರುಗಲು ಬಯಸಿದ್ದ ಇಸ್ರಾಯೇಲ್ಯರಿಂದ ಚಿನ್ನದ ಬಸವನ ವಿಷಯದಲ್ಲಿ ಆರೋನನು ಸಹ ದಾರಿ ತಪ್ಪಿಸಲ್ಪಟ್ಟಿದ್ದಾಗ

ಸಹ ಮೋಶೆಯು ನಂಬಿಗಸ್ತನಾಗಿದ್ದನು (ವಿಮೋಚನಕಾಂಡ 32:1-20).

ಯೇಸುವಿನ **ಮನೆಯು** ದೇವರ ಕುಟುಂಬವಾಗಿದೆ ಮತ್ತು ಕ್ರಿಸ್ತನು ಆಳ್ವಿಕೆ ಮಾಡುವಂತಹ ಸಭೆಯೆಂದು ಬಣ್ಣಿಸಲ್ಪಟ್ಟಿದೆ (1 ತಿಮೊಥೆ 3:15). ಮೋಶೆಗೆ ಸಂಬಂಧಪಟ್ಟಂತೆ, "ಮನೆ" ಎಂಬುದು ಯೆಹೂದಿ ವ್ಯವಸ್ಥೆಯನ್ನು ಸೂಚಿಸುತ್ತದೆ. ಮೋಶೆಯು ಅದನ್ನು ನಿರ್ಮಿಸುವದಕ್ಕೆ ದೇವರ ನಿರ್ದೇಶನಗಳನ್ನು ಅನುಸರಿಸಿದನು.

ಹಾಗಾದರೆ, ಈ ಎರಡು ವಚನಗಳಲ್ಲಿ ಪ್ರಬಲವಾಗಿರುವ ಯೋಚನೆಯು ಯಾವದು? ನಿಶ್ಚಯವಾಗಿಯೂ, ಅದು ಇದುವೇ ಆಗಿದೆ: ಯೇಸು ದೇವರ ಅಪೊಸ್ತಲನಾಗಿ, ನಮ್ಮ ಪ್ರತಿಜ್ಞೆಯ ಮಹಾಯಾಜಕ, ಮತ್ತು ತನ್ನನ್ನು ನೇಮಿಸಿದಾತನಿಗೆ ನಂಬಿಗಸ್ತನಾಗಿರುವ ಇರುವಷ್ಟರ ಮಟ್ಟಿಗೆ, ಅತಿ ಹೆಚ್ಚು ಪ್ರಾಮುಖ್ಯತೆ ಪಡೆಯುವ ಮುಕ್ತಾಯವೆಂದರೆ ಆತನು ಮೋಶೆಗಿಂತಲೂ ಶ್ರೇಷ್ಠನಾದ ಅಪೊಸ್ತಲನು ಎಂಬುದೆ.

**ವಚನಗಳು 3, 4.** ಕ್ರಿಸ್ತನು **ಮೋಶೆಗಿಂತ ಹೆಚ್ಚಾದ ಮಾನಕ್ಕೆ ಯೋಗ್ಯನೆಂದೆಣಿ ಸಲ್ಪಟ್ಟಿದ್ದಾನೆ** (ವ. 3). **ಮನೆಯಲ್ಲಿ** ಕೇವಲ ಸೇವಕನಾಗಿರುವವನಿಗಿಂತಲೂ ಮನೆಕಟ್ಟಿದವನಿಗೆ ಹೆಚ್ಚಾದ ಮಾನವಿರುವದು. Michelangeloನು (1475-1564) Sistine Chapelನ ಒಳಮಾಳಿಗೆಯ ಮೇಲಿನ ತನ್ನ ಕಲಾಕೃತಿಗಳಿಗಿಂತ ಹೆಚ್ಚು ಮಾನಕ್ಕೆ ಯೋಗ್ಯನು. "ಆಧುನಿಕ ಖಗೋಳಶಾಸ್ತ್ರದ ಪಿತಾಮಹ"ನಾಗಿರುವ Galileoನು ತಾನು ಅನೇಕ ತೀರ್ಮಾನಗಳನ್ನು ಮುಂದಿಡುವದಕ್ಕೆ ಬಳಸಿದ ದೂರದರ್ಶಕಕ್ಕಿಂತಲೂ ಹೆಚ್ಚು ಸನ್ಮಾನಕ್ಕೆ ಯೋಗ್ಯನಾಗಿದ್ದಾನೆ.

ಮೋಶೆಯು ಮರಣಿಸಿ 1500 ವರ್ಷಗಳ ತನಕ ಹುಟ್ಟಿರಲಿಲ್ಲವಾದ್ದರಿಂದ, ಮೋಶೆಯು ಸದಸ್ಯನಾಗಿರಬಲ್ಲಂತಹ ಮನೆಯನ್ನು ಯೇಸು ಹೇಗೆ ಕಟ್ಟಿರುವದಕ್ಕೆ ಸಾಧ್ಯ? ಇದು ಕ್ರಿಸ್ತನ ನಿತ್ಯಸ್ವಭಾವದ ಕುರಿತು ಇಬ್ರಿಯರಿಗೆ ಪತ್ರಿಕೆಯಲ್ಲಿ ಇನ್ನೊಂದು ಸ್ಪಷ್ಟವಾದ ಸೂಚ್ಯಾರ್ಥವಾಗಿರುತ್ತದೆ. ಆತನು ತನ್ನ ನರಾವತಾರಕ್ಕೆ ಮುಂಚೆ ದೇವರ ಸಂಗಡ ಅಸ್ತಿತ್ವದಲ್ಲಿದ್ದ ವೇಳೆ ತಂದೆಯೊಂದಿಗೆ ತಾನು ಮಾಡುವ ಕೆಲಸದ ಒಂದು ಭಾಗವಾಗಿ ಇದನ್ನು ಮಾಡಿದನು. ಈ ವಾಸ್ತವಾಂಶವು ಇಬ್ರಿಯ 1:2ರಲ್ಲಿ ಪರೋಕ್ಷವಾಗಿಯೂ ಯೋಹಾನ 1:1-3ರಲ್ಲಿ ಸ್ಪಷ್ಟವಾಗಿಯೂ ಸೂಚಿಸಲ್ಪಟ್ಟಿದೆ. ಇಬ್ರಿಯ 13:8ನೇ ವಚನವು "ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" ಎಂದು ಹೇಳುವ ಮೂಲಕ ಒಂದು ಉದಾತ್ತವಾದ ಮುಕ್ತಾಯವನ್ನು ತಲುಪುತ್ತದೆ.

ಲೇಖಕನು ಮೋಶೆಯನ್ನು ಕಡಿಮೆಗೊಳಿಸಿ ಮಾತಾಡುತ್ತಿಲ್ಲ. ಆತನು ಈ ಮಹಾನ್ ಮೂಲಪಿತೃವಿನ ನಂಬಿಗಸ್ತಿಕೆಯನ್ನು ಒಪ್ಪಿಕೊಳ್ಳುತ್ತಾನೆ, ಆದರೆ ಯೇಸುವು "ಮನೆಕಟ್ಟಿದವನು" ಆಗಿದ್ದು ಅದರಲ್ಲಿ ಮೋಶೆಯು ಕೇವಲ ಒಬ್ಬ ಸೇವಕನಾಗಿದ್ದನು ಎಂಬುದನ್ನು ತೋರಿಸಿ ಕೊಡುತ್ತಾನೆ. ಮೋಶೆಯು ಹಳೆಯ ಒಡಂಬಡಿಕೆಯ ದೇವರ ಕುಟುಂಬದಲ್ಲಿ ಒಬ್ಬ ನಂಬಿಗಸ್ತ ಸೇವಕನಾಗಿದ್ದನು (ಅರಣ್ಯಕಾಂಡ 12:7). ಸ್ತೇಫನು ಹಿರೀ ಸಭೆಯ ಎದುರಿನಲ್ಲಿ ಮಾಡಿದ ಪ್ರಸಂಗದಲ್ಲಿ ಮೋಶೆಯು "ಅರಣ್ಯದಲ್ಲಿ ಸಭೆಯ ಮಧ್ಯಸ್ಥನಾಗಿದ್ದನು" ಎಂದು ಪ್ರಸ್ತಾಪಿಸಿದನು (ಅಪೊಸ್ತಲರ ಕೃತ್ಯಗಳು 7:38).

ತನ್ನ ಮನೆಯಾದ, ಸಭೆಯನ್ನು ಕಟ್ಟಿದವನಾಗಿ (ಮತ್ತಾಯ 16:18), ಯೇಸು ಮನೆಗಿಂತ ಮತ್ತು ಅದರಲ್ಲಿರುವ ಯಾವದೇ ಸೇವಕನಿಗಿಂತ ಶ್ರೇಷ್ಠನಾಗಿದ್ದಾನೆ. ಒಂದು ಚಿತ್ರವನ್ನು ಬಿಡಿಸುವವನು, ಒಂದು ಆಕಾರವನ್ನು ಕೆತ್ತುವವನು, ಅಥವಾ ಕಟ್ಟಡವೊಂದನ್ನು ವಿನ್ಯಾಸಗೊಳಿಸುವವನು ನಿರ್ಮಿಸಲ್ಪಟ್ಟ ವಸ್ತುವಿಗಿಂತ ಹೆಚ್ಚು ಸನ್ಮಾನಕ್ಕೆ ಯೋಗ್ಯನು.

ಯೇಸುವು "ಮನೆಯನ್ನು" ಕಟ್ಟುವ ಯೋಚನೆಯು ಜೆಕರ್ಯ 6:12, 13ರಿಂದ

ತೆಗೆದುಕೊಂಡಿರುವಂತೆ ತೋರುತ್ತದೆ. ದಾವೀದನ ಒಬ್ಬ ಕುಮಾರನು ನನಗೆ ಮನೆಯನ್ನು ಕಟ್ಟುವನೆಂದು ದೇವರು ಹೇಳುತ್ತಾನೆ: "ಅವನು ನನಗಾಗಿ ಒಂದು ಮನೆಯನ್ನು ಕಟ್ಟುವನು; ನಾನು ಅವನ ಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು" (1 ಪೂರ್ವಕಾಲವೃತ್ತಾಂತ 17:12). ಹೀಗೆ ಹಳೆಯ ಒಡಂಬಡಿಕೆಯ "ಮನೆಯನ್ನು" ಹೊಸ ಒಡಂಬಡಿಕೆಯಲ್ಲಿರುವದರೊಂದಿಗೆ ಒಂದುಗೂಡಿಸುವಿಕೆಯು ಇರುವಂತೆ ತೋರುತ್ತದೆ, ಯಾಕೆಂದರೆ ಎಲ್ಲಾ ಯುಗಗಳಲ್ಲಿನ ದೇವರ ನೀತಿವಂತರಾದ ದೇವಜನರು ಆ ಮನೆಯಲ್ಲಿರುತ್ತಾರೆ. ಈ ಸತ್ಯವು ಇಬ್ರಿಯ 12:23ರಲ್ಲಿ ಒತ್ತಿ ಹೇಳಲ್ಪಟ್ಟಿದೆ, ಅಲ್ಲಿ "ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳು" ಎಂಬ ಉಲ್ಲೇಖದಲ್ಲಿ ಇದುವರೆಗೂ ಜೀವಿಸಿದ ಅಂತಹ ಎಲ್ಲರೂ ಸೇರಿರತಕ್ಕದ್ದು.

**ವಚನಗಳು 5, 6. ಮೋಶೆಯು ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದನು**, ಆದರೆ ಆತನು ಕೇವಲ ಒಬ್ಬ **ಸೇವಕನಾಗಿದ್ದನು**,[6] ಆದರೆ ಯೇಸುವು ಮನೆಯ ಮೇಲೆ ಅಧಿಕಾರಿಯಾಗಿದ್ದಾನೆ. ಅದೇ ರೀತಿಯಲ್ಲಿ, ಮೋಶೆಯ "ಮನೆಯು" ಕ್ರಿಸ್ತನಿಂದ ಕಟ್ಟಲ್ಪಟ್ಟ ಮನೆಗಿಂತ ಕಡಿಮೆಯಾದದ್ದಾಗಿತ್ತು. ಮೋಶೆಯ ಮನೆಯು ಕ್ರಿಸ್ತನ ಮನೆಯ "ತತ್ವರೂಪ"ದ (ಪ್ರತಿರೂಪ) ನೆರಳು (ಛಾಯೆ) ಆಗಿತ್ತು. ಕೊಲೊಸ್ಸೆ 2:17 ಮತ್ತು ಇಬ್ರಿಯ 10:1 ಇದೇ ಯೋಚನೆಯನ್ನು ಮುಂದಿಡುತ್ತವೆ.

ಮೋಶೆಯ ಧರ್ಮಶಾಸ್ತ್ರವು ಇಸ್ರಾಯೇಲ್ಯರ ಧಾರ್ಮಿಕ ಮತ್ತು ನಾಗರಿಕ ಸರ್ಕಾರಕ್ಕೆ ಕಟ್ಟಳೆಗಳ ಒಂದು ವಿಧಿಯಾಗಿ ಕಾರ್ಯ ಮಾಡಿತ್ತು. ಮೊದಲನೆಯ ತಿಮೊಥೆ 1:9ನೇ ವಚನವು ಧರ್ಮಶಾಸ್ತ್ರವು ಭಕ್ತಿಹೀನರು ಮತ್ತು ಪಾಪಿಷ್ಠರಿಗಾಗಿ ಮಾಡಲ್ಪಟ್ಟಿತೆಂದು ಸೂಚಿಸುತ್ತದೆ; ಅದು ಅವರಿಗೆ ಅವರ ಪಾಪವನ್ನು ತೋರಿಸಿ ಕೊಟ್ಟು ಜೀವನ ಮತ್ತು ನಡವಳಿಕೆಗೆ ಇನ್ನಷ್ಟು ಹೆಚ್ಚು ಉದಾರವಾಗ ವ್ಯವಸ್ಥೆಯ ಅಗತ್ಯವಿದೆಯೆಂಬುದನ್ನು ತೋರ್ಪಡಿಸುವದಕ್ಕಾಗಿ ಆಗಿತ್ತು (ಗಲಾತ್ಯ 3:19; ರೋಮಾ 7:7). ಅದು ಪಾಪವನ್ನು ನಿಗ್ರಹಿಸಿ ಕ್ರಿಸ್ತನ ಬರೋಣದ ತನಕ ವಿಗ್ರಹಾರಾಧನೆಯು ತನ್ನ ಸಹವರ್ತಿಯಾದ ಅನೈತಿಕತೆಯೊಂದಿಗೆ ಸಾರ್ವತ್ರಿಕವಾಗಿ ಹಬ್ಬುವದನ್ನು ತಡೆಗಟ್ಟುದಕ್ಕಾಗಿ ಆಗಿತ್ತು (ಗಲಾತ್ಯ 3:19).

ಅಷ್ಟುಮಾತ್ರವಲ್ಲದೆ, ಹಳೆಯ ಒಡಂಬಡಿಕೆಯ ಒಂದು ಪ್ರಧಾನ ರಚನೆಯು ಕ್ರಿಸ್ತನ ಸಭೆಗೆ ಒಂದು ಮಾದರಿಯನ್ನು ಒದಗಿಸುವದಕ್ಕಾಗಿ ಆಗಿತ್ತು (ನೋಡಿರಿ ಇಬ್ರಿಯ 8:4, 5). ಕ್ರಿಸ್ತನು ತನ್ನ ಮನೆಯ ಮೇಲೆ ಅಧಿಕಾರಿಯಾಗಿರುವದು ಮಾತ್ರವೇ ಅಲ್ಲ, ಆದರೆ ಆತನು ತನ್ನ ಹೊಸ ಆತ್ಮೀಕ ಕುಟುಂಬವನ್ನು ಕಟ್ಟುವವನು ಸಹ ಆಗಿದ್ದಾನೆ (ಮತ್ತಾಯ 16:18; 1 ಪೇತ್ರ 2:5, 9). ಮೋಶೆಯು ಆ ಹಳೆಯ ಒಡಂಬಡಿಕೆಯ ವ್ಯವಸ್ಥೆಯು ಸಭೆಯ ಒಂದು ಪರಿಪೂರ್ಣವಾದ ಮಾದರಿ ಆಗಿರುವಂತಾಗಬೇಕೆಂಬುದಕ್ಕಾಗಿ ಅದರ ವಿಷಯದಲ್ಲಿ ದೇವರ ಆಜ್ಞೆಗಳಲ್ಲಿ ಪ್ರತಿಯೊಂದು ವಿವರಗಳನ್ನು ಅನುಸರಿಸುವದರಲ್ಲಿ ಜಾಗ್ರತೆಯಿಂದಿದ್ದನು.

**ನಾವೇ ದೇವರ ಮನೆಯವರು** ಎಂದು ಲೇಖಕನು ಮುಂದುವರೆದು ಹೇಳುತ್ತಾನೆ. ದೇವರು ತನ್ನ ಜನರಿಗಾಗಿ ಬಯಸಿದ ವ್ಯವಸ್ಥೆಗೆ ನಾವು ವಿಧೇಯರಾದಾಗ ಮತ್ತು ಸ್ವಂತವಾಗಿಸಿಕೊಳ್ಳುವಾಗ ನಾವು ನಿಜವಾದ "ಇಸ್ರಾಯೇಲ್ಯರು" ಆಗುತ್ತೇವೆ. ಗಲಾತ್ಯ 3:26-29 ಮತ್ತು 6:16 ವಾಕ್ಯಭಾಗಗಳು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು, ನಂಬಿಕೆಯ ಮೂಲಕ ಕ್ರಿಸ್ತನಲ್ಲಿ ಭಾಗವಾಗುತ್ತಾನೆ ಮತ್ತು ಅಬ್ರಹಾಮನ "ಸಂತತಿ"ಯಲ್ಲಿ ಭಾಗವಾಗುತ್ತಾನೆ.

**ನಾವು ನಮ್ಮ ಧೈರ್ಯವನ್ನೂ ನಮ್ಮ ನಿರೀಕ್ಷೆರಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ದೃಢವಾಗಿ ಹಿಡಿದುಕೊಂಡವರಾದರೆ** ನಾವು ಹೊಸ ಒಡಂಬಡಿಕೆಯ ಇಸ್ರಾಯೇಲ್ಯರು ಆಗುತ್ತೇವೆ. ಈ ಬುದ್ಧಿವಾದವು ಮತಭ್ರಷ್ಟರಾಗದಂತೆ ವಾಚಕರನ್ನು ತಡೆಯುವದಕ್ಕೆ ಅವರಿಗೆ

ಇನ್ನೊಂದು ಜ್ಞಾಪಕ ಕೊಡುವಿಕೆಯಾಗಿರುತ್ತದೆ (3:12, 13). ಕ್ರಿಸ್ತನ ವಾಕ್ಯದಲ್ಲಿ ಮುಂದುವರೆಯುವದರಿಂದ ನಾವು ನಿಜವಾಗಿಯೂ ಆತನ ಶಿಷ್ಯರಾಗಬಲ್ಲೆವು (ಯೋಹಾನ 8:31). ನಮ್ಮ ನಿರೀಕ್ಷೆಯು "ಧೈರ್ಯವಾದ ಭರವಸ"ದ (MSG) ಮೇಲಿರುತ್ತದೆ. ಅಂಥ "ಧೈರ್ಯ [ದೃಢವಿಶ್ವಾಸ]" (παρρησία, *parrēsia*) ಎಂಬುದರ ಅರ್ಥವು ಯಾವದೋ ಒಂದರಲ್ಲಿ ಅಥವಾ ಕುರಿತು "ಹೆಚ್ಚಳಪಡುವದು" ಎಂದಾಗಿರುತ್ತದೆ. "ಹೆಚ್ಚಳಪಡು," καύχημα (*kauchēma*), ಎಂಬುದರ ಅರ್ಥವು ಕರ್ತನಲ್ಲಿ ಆರಾಧನಾಪೂರ್ವಕ ಭರವಸೆಯುಳ್ಳವರಾಗಿ "ಧೈರ್ಯಕರವಾದ ಹರ್ಷ" ಪಡುವದು ಎಂದಾಗಿರಬಲ್ಲದು.[7] ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿತೋ ಆ ಕ್ರೈಸ್ತರು ಕರ್ತನಲ್ಲಿ ತಮ್ಮ ಧೈರ್ಯಕರವಾದ ನಿರೀಕ್ಷೆಯನ್ನು ಕಳಕೊಳ್ಳುವ ಅಪಾಯದಲ್ಲಿದ್ದರು.[8]

ಖಂಡಿತವಾಗಿಯೂ, ಜೀವನವು ಅಂತ್ಯಗೊಂಡಾಗ, ನಾವು ನಮ್ಮ ನಂಬಿಕೆಯನ್ನು "ಕಡೇ ತನಕ ದೃಢವಾಗಿ ಹಿಡಿದುಕೊಂಡವರಾದರೆ" ನಿತ್ಯಜೀವದ ವಾಗ್ದಾನವನ್ನು ಮಾತ್ರವೇ ಅಲ್ಲದೆ, ವಾಸ್ತವಿಕತೆಯನ್ನು ಪಡೆಯುವೆವು. ಕರ್ತನ ಮನೆಯಲ್ಲಿ ಭಾಗವಾಗಿರಬೇಕಾದರೆ, ನಾವು ಆ ಮನೆಯಲ್ಲಿ ನಿಜವಾದ ಸೇವಕರಾಗಿ ಉಳಿಯತಕ್ಕದ್ದು. ನಾವು ಕ್ರಿಸ್ತನಲ್ಲಿ ಸುರಕ್ಷಿತರಾಗಿದ್ದೇವೆ, ಆದರೆ ನಮ್ಮ ವಿಧೇಯತೆಯುಳ್ಳ ನಂಬಿಕೆಯೇ ನಮ್ಮನ್ನು ಭದ್ರವಾಗಿ ನೆಲೆಗೊಳಿಸುವದು (1 ಪೇತ್ರ 1:4, 5).

ನಂಬಿಕೆಯು ನಮ್ಮ ಕಡೆಯಿಂದ ಒಂದು ವಿಧೇಯತೆಯ ಕ್ರಿಯೆಯಾಗಿರುತ್ತದೆ ಮತ್ತು ಅದು ದೇವರಿಂದ ದೊರಕುವ ನೇರವಾದ ವರವಾಗಿರುವದಿಲ್ಲ. ಎಫೆಸ 2:8ರಲ್ಲಿ ಉಲ್ಲೇಖಿಸಲಾಗಿರುವ "ವರ"ವು ನಂಬಿಕೆಯಲ್ಲ ಆದರೆ ರಕ್ಷಣೆ ಆಗಿರುತ್ತದೆ, ರೋಮಾ 6:23 ದೃಢಪಡಿಸುವ ಪ್ರಕಾರವೇ. ಬೈಬಲ್‌ನ್ನು ಜಾಗ್ರತೆಯಿಂದ ಓದುವವರು KJV, NKJV, ಮತ್ತು NASBಗಳೊಳಗೆ ಎಫೆಸ 2:8ರಲ್ಲಿ "ಆ" ಎಂಬುದು ಇಟಾಲಿಕ್‌ಗೊಳಿಸಲ್ಪಟ್ಟಿದೆ, ಅಂದರೆ ಆ ಪದವು ಮೂಲವಾಕ್ಯದಲ್ಲಿ ಇರಲಿಲ್ಲ ಎಂದು ಅದರರ್ಥವಾಗಿದೆ. ಕೆಲವು ಆವೃತ್ತಿಗಳು "ವರ" ವು ನಂಬಿಕೆಯಾಗಿದೆ ಎಂಬ ಅನಿಸಿಕೆಯನ್ನುಂಟು ಮಾಡುತ್ತವೆ, ಅದಕ್ಕೆ ಗ್ರೀಕ್ ವಾಕ್ಯವು ಅನುಮತಿಸುವದಿಲ್ಲ. ದೇವರು ನಮಗೆ ಕೊಟ್ಟಿರುವ ಪ್ರಕಟನೆಯ ಮೂಲಕವಾಗಿ ನಂಬಿಕೆಯು ಒಂದು ಪರೋಕ್ಷವಾದ ವರವಾಗಿರುತ್ತದೆ (ರೋಮಾ 10:17). ಆತನು ಒಂದು ರಕ್ಷಣೆಯ ವ್ಯವಸ್ಥೆಯನ್ನು ಏರ್ಪಡಿಸಿದ್ದು ಅದರ ಬಳಿಗೆ ನಮ್ಮ ನಂಬಿಕೆಯು ನಮ್ಮನ್ನು ಕರೆ ತರುತ್ತದೆ. ಪೇತ್ರನು ಪಂಚಾಶತ್ತಮ ದಿನದಂದು ತನ್ನ ಶ್ರೋತೃಗಳಿಗೆ ಅವರು ತಮ್ಮನ್ನು ರಕ್ಷಿಸಿಕೊಳ್ಳಬೇಕಿದೆ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:40; KJV). ಅಷ್ಟುಮಾತ್ರವಲ್ಲದೆ, ನಾವು "ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಬೇಕು" ಎಂದು ಪೌಲನು ಹೇಳಿದನು (ಫಿಲಿಪ್ಪಿ 2:12). ಖಂಡಿತವಾಗಿಯೂ, ನಮ್ಮ ರಕ್ಷಣೆಯಲ್ಲಿ ದೇವರ ಪಾತ್ರವು ಆರಂಭಗೊಳಿಸುವ ಮತ್ತು ಮುಂದುವರೆಸಿಕೊಂಡು ಹೋಗುವ ಕಾರಣಾಂಶವಾಗಿರುತ್ತದೆ. ನಾವು ವಿಧೇಯತೆಯಲ್ಲಿ ಮಾಡುವ ಯಾವದೂ ವಾಸ್ತವದಲ್ಲಿ ನಮಗೆ ನಮ್ಮ ವಿಮೋಚನೆಯನ್ನು ಸಂಪಾದಿಸಿ ಕೊಡುವದಿಲ್ಲ ಅಥವಾ ಅರ್ಹರನ್ನಾಗಿಸುವದಿಲ್ಲ. ಹಾಗಿದ್ದರೂ, ನಂಬಿಕೆಯ ಕೃತ್ಯಗಳು ಅವಶ್ಯಕವಾಗಿರುತ್ತವೆ. ಸ್ವತಃ ನಂಬಿಕೆಯೇ ನಾವು ಮಾಡಬೇಕೆಂದು ದೇವರು ನಮಗಾಗಿ ನೇಮಕಗೊಳಿಸಿದ ಒಂದು "ಕೆಲಸ" ಆಗಿರುತ್ತದೆ (ಯೋಹಾನ 6:29).

ನಾವು 3:6ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಪ್ರಕಾರ, ನ್ಯಾಯಯುತವಾಗಿ ನಮ್ಮ "ನಿರೀಕ್ಷೆಯುಂದುಂಟಾಗುವ ಉತ್ಸಾಹವನ್ನು" ದೃಢವಾಗಿ ಹಿಡಿದುಕೊಂಡಿರಲು ಸಾಧ್ಯವೋ? NRSVಯಲ್ಲಿ "ನಾವು ನಿರೀಕ್ಷೆಗೆ ಸೇರಿರುವ ದೃಢವಿಶ್ವಾಸ ಮತ್ತು ಹೆಚ್ಚಳವನ್ನು ಗಟ್ಟಿಯಾಗಿ

ಹಿಡಿದುಕೊಳ್ಳುವದಾದರೆ" ಎಂದಿರುತ್ತದೆ. "ದೃಢವಿಶ್ವಾಸ" ಎಂಬುದನ್ನು ಅನುವಾದಿಸಿರುವ ನಾಮಪದದ ಅರ್ಥವು "ಖಂಡಿತವಾದಿತ್ವ," "ಧೈರ್ಯ," "ನಿಷ್ಕಪಟತೆ," ಮತ್ತು "ಭರವಸ" ಎಂದಾಗಿರುತ್ತದೆ. ರಾಜ್ಯದಲ್ಲಿ ಹೆಚ್ಚಳಕ್ಕೆ ಒಂದು ಸ್ಥಾನವಿರುತ್ತದೋ? ಹಾಗಿರುತ್ತದೆಂದು ತೋರುತ್ತದೆ, ಆದರೆ ಈ ಹೆಚ್ಚಳ ಅಥವಾ ಹೆಮ್ಮೆಯ ಲಕ್ಷ್ಯವು ಏನಾಗಿರತಕ್ಕದ್ದು? ಅದು ನಾವು ನಮ್ಮ ನಂಬಿಕೆಯನ್ನು ದೃಢವಾಗಿಯೂ ಧೈರ್ಯವಾಗಿಯೂ ಹಿಡಿದು ಕೊಂಡಿದ್ದೇವೆಂದು ತಿಳಿದವರಾಗಿರುವಾಗಿ ರಾಜ್ಯವು ಕೆಲಸಗಳ ವಿಷಯದಲ್ಲಿ ಉತ್ಸಾಹ ವಾಗಿರಬಹುದು. ಕರ್ತನಲ್ಲಿ ಹೆಚ್ಚಳ ಮತ್ತು ಆತನು ನಮಗೋಸ್ಕರ ಮಾಡುವ ಕಾರ್ಯದಲ್ಲಿ ಹೆಚ್ಚಳಪಡುವದು ನಮ್ಮ ಸ್ವಂತ ಸಾಧನೆಗಳ ವಿಷಯದಲ್ಲಿ ಅತಿಯಾಗಿ ಉಬ್ಬಿಕೊಂಡ ಹೆಚ್ಚಿಸಿಕೊಳ್ಳುವಿಕೆಯಿಲ್ಲದೆ ಇರಬಲ್ಲದ್ದಾಗಿದೆ.

ನಮ್ಮ ನಿರೀಕ್ಷೆ ಮತ್ತು ಹೆಚ್ಚಳಗಳು ಯೇಸುವಿನಲ್ಲಿಯೇ ಇರುತ್ತವೆ. ನಮ್ಮ ಸ್ವಕಲ್ಪನೆಯ ಆತ್ಮೀಕ ಮಟ್ಟದಲ್ಲಿ ಹೆಚ್ಚಳವನ್ನು ಹೊಂದಿರುವದು ನಮ್ಮನ್ನು ಫರಿಸಾಯನೊಂದಿಗೆ ಸೇರಿಸುತ್ತದೆ, ಅವನ ಹೆಚ್ಚಳವು ಆತನ ಪ್ರಾರ್ಥನೆಯನ್ನು ದೇವಾಲಯದ ಗೋಪುರವನ್ನು ಸಹ ದಾಟಿ ಹೋಗದಂತೆ ಮಾಡಿತ್ತು (ಲೂಕ 18:10-14). ಆ ವಿಧವಾದ ಹೆಚ್ಚಳವು (ಗರ್ವವು) "ಭಂಗ"ಕ್ಕೆ ನಡಿಸುವದು (ಜ್ಞಾನೋಕ್ತಿ 16:18). ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರೊಳಗೆ ಸರಿಯಾದ ವಿಧವಾದ ನಿರೀಕ್ಷೆ ಮತ್ತು ಹೆಚ್ಚಳವನ್ನು ನಿರ್ಮಿಸುವ ಅಗತ್ಯವಿತ್ತು ಯಾಕೆಂದರೆ ಅವರು ತಮ್ಮ ನಿರೀಕ್ಷೆಯಲ್ಲಿನ ಭರವಸವನ್ನು ಕಳಕೊಳ್ಳುತ್ತಲಿದ್ದರು.

ನಮ್ಮ ಹೆಚ್ಚಳದ ತಳಹದಿಯು ನಮ್ಮ ನಿರೀಕ್ಷೆಯ ಮೇಲೆ ನಿಂತಿರುತ್ತದೆ – ಅದು ಮೋಶೆ ಮತ್ತು ಧರ್ಮಶಾಸ್ತ್ರದಿಂದ ಕೊಡಲ್ಪಟ್ಟ ಯಾವದಕ್ಕಿಂತಲೂ ಎಷ್ಟೋ ಶ್ರೇಷ್ಠವಾದದ್ದಾಗಿತ್ತು. ಹೀಗೆ ಹೆಮ್ಮೆಯಿಂದಿದ್ದ ಯೆಹೂದ್ಯರು ಮತ್ತು ರಬ್ಬಿಗಳಿಂದ ಕೊಡಲ್ಪಟ್ಟದ್ದೆಂದು ತೋರುವ ಇನ್ನೊಂದು ಟೀಕೆಯು ಕನಿಷ್ಠಕ್ಕೆ ತರಲ್ಪಟ್ಟಿತು, ಯಾಕೆಂದರೆ ಇಸ್ರಾಯೇಲ್ಯರ ನಿರೀಕ್ಷೆಯು ಮೋಶೆಯಲ್ಲಿ ಇರಲಿಲ್ಲ. ಇಬ್ರಿಯ 7:18, 19ರಲ್ಲಿನ "ಉತ್ತಮವಾದ ನಿರೀಕ್ಷೆ"ಯು ಹೆಸರಿಸಲ್ಪಟ್ಟಿದೆ, ಮತ್ತು ಅದು ಹೊಸ ಒಡಂಬಡಿಕೆಯಲ್ಲಿ ಸಿಕ್ಕುವದಾಗಿದ್ದು ಅವರ ಮೂಲಕ ನಾವು "ದೇವರ ಸನ್ನಿಧಿಗೆ ಸೇರುವಂಥ"ವರಾಗುತ್ತೇವೆ.

ಯೇಸು ಖಂಡಿತವಾಗಿಯೂ ಮೋಶೆಗಿಂತ ಶ್ರೇಷ್ಠನು. ಆತನು ಮಹಾನ್ ಅಪೊಸ್ತಲನು, ಮಹಾನ್ ನಿರ್ಮಾಣಿಕನು, ಮತ್ತು ಮಗನಾಗಿದ್ದಾನೆ, ಹೊರತು ಒಬ್ಬ ಸೇವಕನಲ್ಲ. ಆತನು ಮೋಶೆಗಿಂತ ಮಹಾನ್ ಆಗಿದ್ದನು ಮಾತ್ರವೇ ಅಲ್ಲ, ಆದರೆ ಆತನು ಮಹಾಯಾಜಕನಾದ ಆರೋನನಿಗಿಂತ ಮಹಾನ್ ಆಗಿದ್ದಾನೆ. ಯೇಸು ನಿತ್ಯವಾದ ಮನೆಯನ್ನು ಕಟ್ಟಿದನು ಮತ್ತು ಅದರಲ್ಲಿ ಮಹಾಯಾಜಕನಾಗಿ ಸೇವೆ ಮಾಡಿದನು!

## ಕ್ರಿಸ್ತನ ವಿಶ್ರಾಂತಿ (3:7-4:13)

### ಒಂದು ಕಠಿಣವಾದ ಹೃದಯದ ವಿರುದ್ಧ ಎಚ್ಚರಿಕೆ (3:7-19)

ಶಾಸ್ತ್ರಗಳ ಪುರಾವೆ (3:7-11)

**7ಆದದರಿಂದ ಪವಿತ್ರಾತ್ಮನು ಹೇಳುವ ಪ್ರಕಾರ –**
**ನೀವು ಈ ಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ**
**8ನಿಮ್ಮ ಹಿರಿಯರು ದೇವರ ಕೋಪವನ್ನೆಬ್ಬಿ ಸಿದ ಸ್ಥಳದಲ್ಲಿ**
**ಅರಣ್ಯದೊಳಗೆ ದೇವರನ್ನು ಪರೀಕ್ಷಿಸಿದ ದಿನ ದಲ್ಲಿ ಮಾಡಿದಂತೆ**

**ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳ ಬೇಡಿರಿ.**
**[9]ಅವರು ಅರಣ್ಯದಲ್ಲಿ ನನ್ನನ್ನು ಪರೀಕ್ಷಿಸಿ ಶೋಧಿಸಿ**
**ನಾಲ್ವತ್ತು ವರುಷ ನಾನು ನಡಿಸುತ್ತಿದ್ದ ಕೃತ್ಯ ಗಳನ್ನು ನೋಡಿದರು.**
**[10]ಆದದರಿಂದ ನಾನು ಆ ಸಂತತಿಯವರ ಮೇಲೆ ಬಹಳವಾಗಿ ಕೋಪಿಸಿಕೊಂಡು –**
**ಅವರು ಯಾವಾಗಲೂ ಹೃದಯದಲ್ಲಿ ತಪ್ಪಿ ಹೋಗುವವರು ಎಂದು ಹೇಳಿದೆನು.**
**ಆದರೆ ಅವರು ನನ್ನ ಮಾರ್ಗವನ್ನು ತಿಳು ಕೊಳ್ಳಲಿಲ್ಲ.**
**[11]ಹೀಗಿರಲು ಇವರು ನನ್ನ ವಿಶ್ರಾಂತಿಯಲ್ಲಿ ಸೇರು ವದೇ ಇಲ್ಲವೆಂದು**
**ಕೋಪಗೊಂಡು ಪ್ರಮಾಣಮಾಡಿದೆನು.**

ನಾವು 3:1-6ರಲ್ಲಿ ಕಲಿತಿರುವದರ ಬೆಳಕಿನಲ್ಲಿ, ಒಂದು ಸಾಮ್ಯತೆಯನ್ನು ಮಾಡಬಹುದು: ದೇವರ ಹೊಸ ಒಡಂಬಡಿಕೆಯ ಜನರಾಗಿ, ನಾವು ನಮ್ಮ ವಾಗ್ದಾನ ದೇಶದ ಕಡೆಗೆ ಪ್ರಯಾಣವನ್ನು ಬೆಳೆಸಿರುವವರಾಗಿದ್ದು ನಮ್ಮ ಅರಣ್ಯದಲ್ಲಿನ ಅಲೆದಾಟವನ್ನು ಮುಂದುವರೆಸಿರುತ್ತೇವೆ. ಮೋಶೆಗಿಂತಲೂ ಶ್ರೇಷ್ಠನಾಗಿರುವ ಕ್ರಿಸ್ತನು ನಮ್ಮ ನಾಯಕನು, ಮತ್ತು ಹಳೆಯ ಒಡಂಬಡಿಕೆಯಲ್ಲಿ ಕೊಡಲ್ಪಟ್ಟದ್ದಕ್ಕಿಂತಲೂ ಉತ್ತಮವಾಗಿರುವಂತಹ ವಾಗ್ದಾನ ದೇಶಕ್ಕೆ ಹೋಗಲು ನಾವು ಆತನನ್ನು ಹಿಂಬಾಲಿಸುತ್ತಿದ್ದೇವೆ.[9] ಹೀಗೆ ಹಳೆಯ ಒಡಂಬಡಿಕೆಯಲ್ಲಿದ್ದ ಜನರಿಗೆ ನೀಡಿದ ಎಚ್ಚರಿಕೆಯು ಹೊಸ ಒಡಂಬಡಿಕೆಯಲ್ಲಿರುವವರಿಗೆ ಸಹ ಅಷ್ಟೇ ಅನ್ವಯವಾಗುತ್ತದೆ.

ಲೇಖಕನು ತನ್ನ ವಾಚಕರಿಗೆ ನೀಡುವ ಪ್ರಬೋಧನೆಯು ಸ್ವಾಭಾವಿಕವಾಗಿ "ಆದದರಿಂದ" ಎಂಬ ಮಾತಿನಿಂದ ವಿಭಜಿಸಲ್ಪಟ್ಟಿರುತ್ತದೆ. ಈ ಪದವು ಎರಡು ಸಾರಿ ಕಾಣಿಸಿಕೊಳ್ಳುತ್ತೆದ (ವಚನಗಳು 7, 10), ಮತ್ತು ಮೂರನೆಯ ಸಾರಿ ಪರೋಕ್ಷವಾಗಿ ಸೂಚಿಸಲ್ಪಟ್ಟಿರುತ್ತದೆ (ವ. 11).

**ವಚನ 7. ಪವಿತ್ರಾತ್ಮನು ಹೇಳುವ ಪ್ರಕಾರ** ಎಂಬ ಪದಗುಚ್ಛವು ತೋರಿಸುವದೇನೆಂದರೆ ಕೀರ್ತನೆ 95 LXXನಿಂದ ಉಲ್ಲೇಖಿಸಲ್ಪಟ್ಟಿದ್ದಾಗ್ಯೂ ಲೇಖಕನು ಅದನ್ನು ದೇವರಿಂದ ನೇರವಾಗಿ ಪ್ರೇರಿತವಾದದ್ದೆಂದು ಪರಿಗಣಿಸಿದ್ದನು ಎಂಬದೆ. ಅಷ್ಟುಮಾತ್ರವಲ್ಲದೆ, "ಹೇಳುವ" ಎಂಬ ಪದವು ವರ್ತಮಾನಕಾಲರೂಪದಲ್ಲಿರುತ್ತದೆ, ದೇವರು ಅಂದು ಮಾತಾಡಿದಂತೆಯೇ ಇಂದು ಸಹ ಶಾಸ್ತ್ರಗಳ ಮೂಲಕವಾಗಿ ಮಾನವರೊಂದಿಗೆ ಮಾತಾಡುತ್ತಾನೆ ಎಂಬುದನ್ನು ತೋರಿಸುತ್ತದೆ (2 ಪೇತ್ರ 1:20, 21). ಪಾಪ ಮತ್ತು ಮತಭ್ರಷ್ಟತೆಯ ವಿರುದ್ಧವಾಗಿ ಹಳೆಯ ಒಡಂಬಡಿಕೆಯು ನೀಡುವ ಎಚ್ಚರಿಕೆಯು ಆ ಕಾರಣದಿಂದ ಹೊಸ ಒಡಂಬಡಿಕೆಯಲ್ಲಿ ಮಾತ್ರವೇ ಸಿಕ್ಕುವ ಎಚ್ಚರಿಕೆಗಳಂತೆಯೇ ನಮಗೆ ಅನ್ವಯವಾಗುತ್ತವೆ.

ಲೇಖಕನು ಕೀರ್ತನೆ 95:7-11ರಿಂದ ಉಲ್ಲೇಖಿಸುತ್ತಾನೆ. ಈ ವಾಕ್ಯಭಾಗವು ಅರಣ್ಯದಲ್ಲಿನ ಇಸ್ರಾಯೇಲ್ಯರ ಕಥೆಯಿಂದ ಎರಡು ಘಟನೆಗಳನ್ನು ಜೋಡನೆ ಮಾಡುತ್ತದೆ. ಒಂದು ಸಂದರ್ಭದಲ್ಲಿ, ಇಸ್ರಾಯೇಲ್ಯರು ನೀರಿನ ಕೊರತೆಯಿಂದ ಹತಾಶೆಗೊಂಡಿದ್ದರು ಮತ್ತು ಮೋಶೆಯ ವಿರುದ್ಧ ಗುಣಗುಟ್ಟಿದರು (ವಿಮೋಚನಕಾಂಡ 17:1-7). ಅನಂತರ, ಗೂಢಾಚಾರರು ನೀಡಿದ ಅಸಂತುಷ್ಟಕರವಾದ ವರದಿಯಿಂದ ಅನೇಕರು ತಕ್ಷಣವೇ ವಾಗ್ದಾನ ದೇಶವನ್ನು ಆಕ್ರಮಣ ಮಾಡುವದಕ್ಕೆ ನಿರಾಕರಿಸುವಂತಾಯಿತು (ಅರಣ್ಯಕಾಂಡ 13:25-14:4). ಈ ಎರಡು ಪ್ರಕರಣಗಳು ಅರಣ್ಯದಲ್ಲಿ ಅಲೆದಾಡುವ ವೇಳೆಯಲ್ಲಿ ಇಸ್ರಾಯೇಲ್ಯರಿಗಿದ್ದ ನಂಬಿಕೆಯ ಕೊರತೆಯನ್ನು ತೋರಿಸುತ್ತವೆ; ಎರಡೂ ಸಂಭವಗಳು ದೇವರಲ್ಲಿ ವಿಶ್ವಾಸವಿಲ್ಲದಿರುವಿಕೆಯಿಂದ ಪುಟಿದವುಗಳಾಗಿದ್ದವು. ದೇವರ ಜನರೆಂದು ಹೇಳಿಕೊಳ್ಳುವದು ಬೇರೆ, ಆದರೆ ತನಗೆ ಉತ್ತಮವೆಂದು ತೋಚುವ ಪ್ರಕಾರ ನಿಮಗೋಸ್ಕರ ಒದಗಿಸುವನೆಂದು ಆತನಲ್ಲಿ ವಿಶ್ವಾಸವಿಡುವದೇ ಬೇರೆಯಾಗಿರುತ್ತದೆ.

**ವಚನಗಳು 8-10.** ದೇವರು **ಕೋಪಿಸಿಕೊಂಡನು**, ಆದರೆ ಆತನು ದುಃಖಗೊಂಡದ್ದು ಅಷ್ಟೆ ಆಗಿರಲಿಲ್ಲ; ಆದರೆ ಆತನು ಆ ಸಂತತಿಯ "ಕೆರಳಿದ್ದನು"![10] Raymond Brown ಪ್ರಕಾರ, ದೇವರು "ಆ ಸಂತತಿಯ ಮೇಲೆ ಜಿಗುಪ್ಸೆಗೊಂಡನು."[11] ಆತನು ನ್ಯಾಯವಾಗಿ ಕೋಪಗೊಂಡಿದ್ದನು ಯಾಕೆಂದರೆ ಆತನು ಅವರಿಗೆ ಕೃಪೆಯನ್ನು ತೋರಿದಾಗ್ಯೂ ಜನರು ನಿರಂತರವಾಗಿ ಆತನಿಗೆ ಅವಿಧೇಯರಾಗುತ್ತಿದ್ದರು. ನಿಶ್ಚಯವಾಗಿಯೂ, **ನಾಲ್ವತ್ತು ವರುಷ** ಆತನಿಗೆ ಅವಿಧೇಯನಾಗಿ ಜೀವಿಸುವವನು ಈ ದಿನ ಸಹ ದೇವರಿಗೆ ಕೋಪವನ್ನೆಬ್ಬಿಸುವವನಾಗಿದ್ದಾನೆ. ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಅದೇ ಬುದ್ಧಿವಾದವು ನಮಗೆ ಅಗತ್ಯವಿರುತ್ತದೆ. ಅವರು ಮಾಡಿದಂತೆಯೇ ನಾವು ದೇವರಿಗೆ ದುಃಖವನ್ನುಂಟು ಮಾಡಬಲ್ಲೆವು.

ಈ ವಿಷಯಕ್ಕೆ ನಾವು ತಕ್ಷಣವೇ ಗಮನವನ್ನು ಕೊಡಬೇಕು. ದೇವರು ಎಲ್ಲಿಯೂ ನಮಗೆ ಇನ್ನೊಂದು ದಿನವು ಸಿಕ್ಕುವದೆಂದು ಭರವಸೆಯನ್ನು ನೀಡುವದಿಲ್ಲ, ಆದ್ದರಿಂದ ನಮ್ಮ ಕರ್ತವ್ಯವನ್ನು **ಈ ಹೊತ್ತು** ಮಾಡತಕ್ಕದ್ದು. ಈ ವಾಸ್ತವಾಂಶವು ಸತ್ಯವಾದದ್ದು, ಅದನ್ನು ನಾವು ಸುವಾರ್ತೆಗೆ ನಾವು ತೋರುವ ಪ್ರಾಥಮಿಕ ವಿಧೇಯತೆಗೆ ಅನ್ವಯಿಸಿಕೊಂಡರೂ ಸರಿಯೆ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38) ಅಥವಾ ನಂಬಿಗಸ್ತಿಕೆಯಲ್ಲಿ ನಿರಂತರವಾಗಿ ಬೆಳೆಯುವ ಅಗತ್ಯತೆಗೆ ಹೋಲಿಸಿದರೂ ಸರಿಯೇ ಇದು ಸತ್ಯವಾದದ್ದು (2 ಪೇತ್ರ 1:5-11).

ಇಬ್ರಿಯರಿಗೆ ಪತ್ರಿಕೆಯ ಮೊದಲ ವಾಚಕರು ತಪ್ಪಿಹೋಗುವ ತೀಕ್ಷ್ಣವಾದ ಅಪಾಯವನ್ನು ಎದುರಿಸಿದರು ಮತ್ತು ಅವರಿಗೆ ಒಂದು ವಿಶೇಷ ಬುದ್ಧಿವಾದದ ಅಗತ್ಯವಿತ್ತು. ಅವರಿಗೆ ಕೊಡಲ್ಪಟ್ಟಿತು ಮತ್ತು ಅವರಿಗೆ ಹೀಗೆ ಹೇಳಲಾಯಿತು, **ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ** . . . (ವ. 8). ನಾವು ಸಹ, ಸುವಾರ್ತೆಯ ಬುದ್ಧಿವಾದಗಳನ್ನು ತಿರಸ್ಕರಿಸುವದಾದರೆ ನಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬಹುದಾಗಿದೆ. ತಮ್ಮ ಹೃದಯಗಳನ್ನು ದೇವರ ವಾಕ್ಯಕ್ಕೆ ಅವಿಧೇಯವಾಗುವಂತೆ ಉದ್ದೇಶಪೂರ್ವಕವಾಗಿ ಕಠಿಣ ಮಾಡಿಕೊಳ್ಳುವವರೆ ಅತ್ಯಂಥ ದಯಣೀಯವಾದವರು.

ಲೇಖಕನು ಹೀಗೆ ಬರೆದನು, ದೇವರಿಗೆ **ಕೋಪವನ್ನೆಬ್ಬಿಸಿದ ದಿನದಲ್ಲಿ ಅರಣ್ಯದಲ್ಲಿ ದೇವರನ್ನು ಪರೀಕ್ಷಿಸಿದ ದಿನದಲ್ಲಿ ಮಾಡಿದಂತೆ** (ವ. 8). KJVಯಲ್ಲಿ "ಅರಣ್ಯದಲ್ಲಿದ್ದಾಗ ಶೋಧನೆಯ ದಿನದಲ್ಲಿ ದೇವರಿಗೆ ಕೋಪವನ್ನೆಬ್ಬಿಸಿದಂತೆ" ಎಂದು ಇರುತ್ತದೆ. ದೃಷ್ಟಾಂತವು ಮೆರೀಬದಲ್ಲಿ ನಡೆದ ಘಟನೆಗಳನ್ನು ಸೂಚಿಸುತ್ತದೆ. ಕೀರ್ತನೆಯ ಉಲ್ಲೇಖವು ವಾಸ್ತವದಲ್ಲಿ ಹೀಗೆ ಹೇಳುತ್ತದೆ, "ನಿಮ್ಮ ಹಿರಿಯರು ಅರಣ್ಯದಲ್ಲಿರುವ ಮೆರೀಬದಲ್ಲಿ ಮಸ್ಸಾದಿನದಲ್ಲಿ ಮಾಡಿದಂತೆ ನೀವು ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ" (ಕೀರ್ತನೆ 95:8). ಮೆರೀಬವು ನೀರಿನ ಕೊರತೆಯ ನಿಮಿತ್ತ ಇಸ್ರಾಯೇಲ್ಯರು ಗುಣಗುಟ್ಟಿದ ಸ್ಥಳವಾಗಿತ್ತು (ವಿಮೋಚನಕಾಂಡ 17:1-7). ವಿಮೋಚನಕಾಂಡ 17:7ರಲ್ಲಿ "ಮೆರೀಬ" ಮತ್ತು "ಮಸ್ಸಾ" ಎಂಬ ಪದಗಳು ಅದೇ ಸ್ಥಳಗಳಿಗೆ ಅನ್ವಯಿಸಲ್ಪಟ್ಟಿವೆ.

ಈ ಹೆಸರುಗಳಿಗೆ ಅನುವಾದವನ್ನು ಕೊಡುವ ಮೂಲಕ, ಇಬ್ರಿಯರಿಗೆ ಪತ್ರಿಕೆಯ ಲೇಖಕನು LXXನಲ್ಲಿರುವ ಪದಗಳನ್ನು ಅನುಸರಿಸಿದನು. ಆತನು LXXನ್ನು ನಿರಂತರವಾಗಿ ಬಳಸಿದನು, ಆದಾಗ್ಯೂ ಆತನು ಆಗಾಗ್ಗೆ ಅದರ ಭಾವಾನುವಾದವನ್ನು ಬಳಸಿರಬಹುದಾಗಿದೆ. ಕೀರ್ತನೆ 95:8ರ ಇಬ್ರಿಯ ವಾಕ್ಯದ ಅಕ್ಷರಶಃ ಅರ್ಥವು "ಅರಣ್ಯದೊಳಗೆ ಮೆರೀಬದ ದಿನದಲ್ಲಿ, ಮಸ್ಸಾದ ದಿನದಲ್ಲಿ ನಡೆದ ಹಾಗೆ ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ." LXXನಲ್ಲಿ ಹೀಗಿರುತ್ತದೆ, "ಅರಣ್ಯದಲ್ಲಿ *ಕೋಪವನ್ನೆಬ್ಬಿಸಿದಂತೆ, ರೇಗಿಸುವಿಕೆಯ* ಪ್ರಕಾರ, ನಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ" (ಒತ್ತಿ ಹೇಳಿದ್ದು ನನ್ನದು). "ಕೋಪವನ್ನೆಬ್ಬಿಸುವಿಕೆ"

ಅಥವಾ "ಅವಿಧೇಯತೆ" ಎಂಬುದು παραπικρασμός (*parapikrasmos*) ರಿಂದ ಅನುವಾದಿಸಲ್ಪಟ್ಟಿದೆ, ಇದು "ಮೆರೀಬ" ಎಂಬುದಕ್ಕೆ ಗ್ರೀಕ್ ಸಮಾನ ಪದವಾಗಿದೆ.[12] ಈ "ಮೆರೀಬ" ಎಂಬ ಸ್ಥಳಕ್ಕಿರುವ ಇನ್ನೊಂದು ಹೆಸರು "ಘರ್ಷಣೆ" ಎಂದಾಗಿದ್ದು, ಇದು ಗ್ರೀಕ್‌ನ "ಸಂಕಷ್ಟ" (πειρασμός, *peirasmos*) ಎಂಬುದಕ್ಕೆ ಸಮಾನವಾಗಿದೆ.

ಇಸ್ರಾಯೇಲ್ಯರು ತಮ್ಮ ಗುಣಗುಟ್ಟುವಿಕೆಯ ಮೂಲಕ ದೇವರ ತಾಳ್ಮೆಯನ್ನು **ಪರೀಕ್ಷಿಸಿದ**[ರು] ಎಂದು ಲೇಖಕನು ಹೇಳುತ್ತಾನೆ (ವ. 9). ಅವರು ಐಗುಪ್ತದಲ್ಲಿ ಅದ್ಭುತಗಳನ್ನು ಕಣ್ಣಾರೆ ನೋಡಿದ ಬಳಿಕವೂ, ಒಂದು ಬಂಡೆಯೊಳಗಿಂದ ನೀರಿನ ಆಶ್ಚರ್ಯಕರವಾದ ವರವು ಹರಿಯುವದನ್ನು ನೋಡಿದ ಬಳಿಕವೂ, ದೇವರ ಕೃಪೆಯಿಂದ ಲಾವಕ್ಕಿ ಹಾಗೂ ಮನ್ನಾಗಳು ಅರಣ್ಯದಲ್ಲಿ ಒದಗಿಸಲ್ಪಟ್ಟ ಬಳಿಕವೂ, ಮತ್ತು ಮೇಘ ಮತ್ತು ಅಗ್ನಿಸ್ತಂಭಗಳ ಮೂಲಕ ದೇವರಿಂದ ನಡಿಸಲ್ಪಟ್ಟ ಬಳಿಕವೂ ಅವರು ಹೇಗೆ ಇಂತಹ ಒಂದು ಮನೋಭಾವವನ್ನು ತೋರ್ಪಡಿಸುವದಕ್ಕೆ ಸಾಧ್ಯ? ನಾವು ಸಹ, ದೇವರ ಕನಿಕರದ ಕಾರ್ಯಗಳನ್ನು ನೋಡುತ್ತೇವೆ ಮತ್ತು ಆದಾಗ್ಯೂ ನಾವು ಅಸಡ್ಡೆ ಮತ್ತು ಅವಿಧೇಯತೆಯ ಮೂಲಕ ಆತನ ತಾಳ್ಮೆಯನ್ನು ಪರೀಕ್ಷಿಸುವವರಾಗಬಹುದಾಗಿದೆ.

"ನಾಲ್ವತ್ತು ವರುಷ" (ವ. 9) ಎಂಬುದು ದೇವರು ನೇಮಿಸಿದ ದಂಡನೆಯ ಕಾಲಾವಧಿಯಾಗಿತ್ತು. ಅದು ಇಸ್ರಾಯೆಲ್ಯರನ್ನು ನೆಲೆಸಿ ಅಲೆದಾಡುವಂತೆ ಮಾಡುವಂತೆ ಒತ್ತಾಯಿಸುವ ಮೂಲಕ ವಾಗ್ದಾನ ದೇಶಕ್ಕೆ ಪ್ರಯಾಣಿಸುವದನ್ನು ದೇವರು ವಿಳಂಬಗೊಳಿಸಿದ ಕಾಲವಾಗಿತ್ತು. ಈ "ನಾಲ್ವತ್ತು ವರುಷ" ಎಂಬುದನ್ನು ಪ್ರಸ್ತಾಪಿಸುವದರಲ್ಲಿ ಮೆಸ್ಸೀಯನಿಗೆ ಸಂಬಂಧಿಸಿದ ಪ್ರವಾದನೆಯ ಸುಳಿವು ಇರಬಲ್ಲದೋ? ಇಸ್ರಾಯೇಲ್ಯರು ತಮ್ಮ ನಂಬಿಕೆಯ ಕೊರತೆಯ ಕಾರಣದಿಂದ ಅರಣ್ಯದಲ್ಲಿ ಕಳೆದ ಸಮಯವು ಯೇಸುವಿನ ತಿರಸ್ಕಾರ ಮತ್ತು ಶಿಲುಬೆಗೇರಿಸಲ್ಪಡುವಿಕೆ ಹಾಗೂ ಯೆಹೂದಿ ದೇಶದ ನಾಶನದ ನಡುವಿನ ಸಮಯದ ಅಂತರದೊಂದಿಗೆ ಸಮಾನತೆಯನ್ನು ಹೊಂದಿರುತ್ತದೆ.

ಯೆರೂಸಲೇಮಿನ ಪತನವು ಮತ್ತು ಅನೇಕರು ಕೊಲ್ಲಲ್ಪಟ್ಟಿದ್ದು ಕ್ರಿ.ಶ. 70ರಲ್ಲಿ ಸಂಭವಿಸಿತು. ಹಳೆಯ ವ್ಯವಸ್ಥೆಗೆ ಅಂತ್ಯವು ಸಮೀಪವಾಗಿದೆ ಎಂಬದನ್ನು ಪರೋಕ್ಷವಾಗಿ ಸೂಚಿಸಿದನು (ನೋಡಿರಿ 8:13). ಆಗ ದೇವಾಲವು ಇನ್ನು ಮೇಲೆ ಇರುವದೇ ಇಲ್ಲ, ಮತ್ತು ಯಜ್ಞಗಳು ನಿಂತು ಹೋಗುವವು. ನಿಸ್ಸಂಶಯವಾಗಿ, ಲೇಖಕನು ಮತ್ತಾಯ 24, ಮಾರ್ಕ 13, ಮತ್ತು ಲೂಕ 21ರಲ್ಲಿ ಕರ್ತನು ಮುಂತಿಳಿಸಿದ ಸಂಗತಿಗಳಿಂದ ಮಾರ್ಗದರ್ಶಿಸಲ್ಪಟ್ಟನು. ಅನಂತರದ ಪ್ರವಾದನೆಗಳು (ಬರೆಯಲ್ಪಡದ) ಈ ಬರಲಿದ್ದ ನಾಶನದ ಕುರಿತು ದೇವಜನರಿಗೆ ಕೊಡಲ್ಪಟ್ಟವೆಂದು ನಾವು ಕೇವಲ ಊಹಾ ಕಲ್ಪನೆಗಳನ್ನಷ್ಟೆ ಮಾಡಬಹುದಾಗಿದೆ.

**ಅವರು ನನ್ನ ಮಾರ್ಗವನ್ನು ತಿಳುಕೊಳ್ಳಲಿಲ್ಲ** (ವ. 10) ಎಂದು ಕರ್ತನು ಹೇಳುತ್ತಾನೆ. ಅವರು ಸತತವಾಗಿ ದೇವರ ದೈವಿಕ ಶಕ್ತಿಯನ್ನು ನೋಡಿದ್ದರು, ಆದರೆ ಅವರು ಆತನ "ಮಾರ್ಗಗಳನ್ನು" ತಿಳುಕೊಳ್ಳಲಿಲ್ಲ (ನೋಡಿರಿ ಯೆಶಾಯ 55:9). ವಾಸ್ತವಿಕತೆಯಲ್ಲಿ, ದೇವರಲ್ಲಿ ಸಕ್ರಿಯವಾದ, ಭರವಸವುಳ್ಳ ನಂಬಿಕೆಯನ್ನು ಹೊಂದದೆ ಇರುವದು ಎಷ್ಟೊಂದು ಅಸಹ್ಯಕರವೆಂಬ ಸರಳ ಸತ್ಯವನ್ನು ಅವರು ತಿಳುಕೊಳ್ಳಲಿಲ್ಲ. ಅಬ್ರಹಾಮನಾದರೋ ಕಾಣದೆಯೇ "ನೋಡಿದ್ದನು" (ಇಬ್ರಿಯ 11:13), ಆದರೆ ಇವರು ದೇವರ ಶಕ್ತಿಯು ತೋರಿಸಲ್ಪಡುವದನ್ನು ನೋಡಿದ್ದರು ಮತ್ತು ಅವರ ಶುದ್ಧೀಕರಣ ಮತ್ತು ಪರಿಶುದ್ಧತೆಗೆ ಸಂಬಂಧಿಸಿದಂತೆ ದೇವರ ಚಿತ್ತವನ್ನು ಗ್ರಹಿಸಿಕೊಳ್ಳುವಿಕೆಯ ಅರ್ಥದಲ್ಲಿ ಅದನ್ನು "ನೋಡಲಿಲ್ಲ." ಹೋಶೇಯನು ದೇವರ ಕುರಿತ ತಿಳುವಳಿಕೆಯಿಲ್ಲದ ನಿಮಿತ್ತವಾಗಿರುವ ಇಸ್ರಾಯೇಲ್ಯರ

ಪಾಪಗಳನ್ನು ಖಂಡಿಸುತ್ತಾನೆ – ಮತ್ತು ಆ ಕಾರಣದಿಂದಾಗಿ ಅವರ ನಾಶನವನ್ನು ಉಚ್ಛರಿಸುತ್ತಾನೆ (ಹೋಶೇಯ 4:1-6).

**ವಚನ 11.** "ಆದದರಿಂದ" ಎಂಬ ಪದವು ಬಳಸಲ್ಪಟ್ಟಿಲ್ಲ ಆದರೆ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ. ನಾವು ಹೀಗೆ ಹೇಳಬಹುದು, "ಆದದರಿಂದ, ದೇವರು 'ಪ್ರಮಾಣಮಾಡಿದನು.'" **ಇಸ್ರಾಯೇಲ್ಯರು ಕಾನಾನ್ ದೇಶದ ವಿಶ್ರಾಂತಿಯಲ್ಲಿ ಸೇರುವದೇ ಇಲ್ಲವೆಂದು ಕೋಪಗೊಂಡು ಪ್ರಮಾಣಮಾಡಿದನು** (ನೋಡಿರಿ ಅರಣ್ಯಕಾಂಡ 14:22-30). ದೇವರು ತನ್ನ ಕೋಪದಲ್ಲಿ ನ್ಯಾಯವಾಗಿರಬಲ್ಲನು, ಯಾಕೆಂದರೆ ಅದು ಚಂಚಲಚಿತ್ತದಿಂದ ಬರುವ ಕೋಪವಲ್ಲ, ಆದರೆ ಅದು ಒಂದು ಕಾನೂನಾತ್ಮಕ ಕೋಪವಾಗಿರುತ್ತದೆ. ಆತನು ಅವರ ಪಾಪಗಳಿಗೋಸ್ಕರ ಅವರನ್ನು ದಂಡಿಸಿದಂತೆಯೇ, ಆತನ ನ್ಯಾಯತೀರ್ಪು ನೀತಿ, ನ್ಯಾಯವಾದದ್ದು, ಮತ್ತು ನೀತಿಯ ಕುರಿತ ಆತನ ದೈವಿಕ ಮಾನದಂಡಕ್ಕನುಗುಣವಾದದ್ದೆಂದು ನಾವು ಖಚಿತವಾಗಿರಬಹುದಾಗಿದೆ. ಅವರ ಪಾಪದ ಪರಿಣಾಮಗಳನ್ನು ಎತ್ತಿ ತೋರಿಸುವದಕ್ಕಾಗಿ ಆತನು ಅವರ ತನ್ನ ವಿಶ್ರಾಂತಿಯಲ್ಲಿ ಸೇರುವದೇ ಇಲ್ಲವೆಂದು "ಪ್ರಮಾಣಮಾಡಿದನು."

ಇಸ್ರಾಯೇಲ್ಯರ ಅವಿಧೇಯತೆಯ ಕುರಿತು ದೇವರು ಕೋಪಗೊಂಡಿದ್ದನು, ಸ್ಪಷ್ಟವಾಗಿರುವ ಪ್ರಕಾರ ಅದು ಅವರು ನಾಲ್ವತ್ತು ವರುಷಗಳ ತನಕ ಅರಣ್ಯದಲ್ಲಿ ಅಲೆದಾಡಿದಷ್ಟು ಕಾಲದುದ್ದಕ್ಕೂ ಮುಂದುವರೆದಿತ್ತು.[13] ಒಬ್ಬನಿಗೆ ಅಥವಾ ದೇಶಕ್ಕೆ ಪಾಪದಿಂದ ತಪ್ಪಿಸಿಕೊಳ್ಳುವದಕ್ಕೆ ಅವಕಾಶವು ಇದ್ದರೂ ಅವಿಧೇಯತೆಯಲ್ಲಿ ಜೀವಿಸಿದ ಆ ವ್ಯಕ್ತಿ ಅಥವಾ ದೇಶವನ್ನು ದಂಡಿಸುವಾಗ, ದೇವರು ತಪ್ಪು ಮಾಡಿದನೆಂದು ಯಾವನೂ ದೋಷಾರೋಪ ಮಾಡುವದಕ್ಕೆ ಸಾಧ್ಯವಿಲ್ಲ. ಇಸ್ರಾಯೇಲ್ಯರು ಪುನಃ ಐಗುಪ್ತದಲ್ಲಿ ಗುಲಾಮರಾಗಿ ಹಿಂದಿರುಗಬೇಕೆಂದು ಇಚ್ಛಿಸಿದ್ದು ಮೂರ್ಖತನವಾಗಿತ್ತು, ಯಾಕೆಂದರೆ ಅವರು ಅರಣ್ಯದಲ್ಲಿ ದೇವರನ್ನು ಸೇವಿಸುವದಕ್ಕೆ ಸ್ವತಂತ್ರರಾಗಿದ್ದರು. ಅಬ್ರಹಾಮನ ಮಕ್ಕಳ ಹಾಗೆಯೇ, ನಾವು ದೇವರ ಬೋಧನೆಗೆ ಕಿವಿಗೊಡದೆ ನಮ್ಮ ಹೃದಯಗಳನ್ನು ಕಠಿಣಮಾಡಿಕೊಂಡರೆ, ನಾವು ಆತನಿಗೆ ಕೋಪವನ್ನೆಬ್ಬಿಸುತ್ತೇವೆ ಮತ್ತು ಆತನ ನ್ಯಾಯತೀರ್ಪನ್ನು ಎದುರಿಸುವೆವು.

## ಇಸ್ರಾಯೇಲಿನ ವಿಫಲತೆಗೆ ಕಾರಣ (3:12-19)

**12ಸಹೋದರರೇ, ನೋಡಿಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ
ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು. 13ನಿಮ್ಮಲ್ಲಿ
ಒಬ್ಬರಾದರೂ ಪಾಪದಿಂದ ಮೋಸಹೋಗಿ ಕಠಿಣರಾಗದಂತೆ ಈಹೊತ್ತು ಎಂಬ ಕಾಲವು ಇರುವ
ತನಕ ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಿರಿ. 14ಮೊದಲಿಂದಿರುವ ಭರವಸವನ್ನು
ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವಲ್ಲಾ!**

**15ನೀವು ಈಹೊತ್ತು ದೇವರ ಶಬ್ದಕ್ಕೆ ಕಿವಿ ಗೊಟ್ಟರೆ,**
**ನಿಮ್ಮ ಹಿರಿಯರು ದೇವರ ಕೋಪವನ್ನೆಬ್ಬಿಸಿದ ಸ್ಥಳದಲ್ಲಿ ಮಾಡಿದಂತೆ**
**ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳ ಬೇಡಿರಿ**

**16ಎಂಬದರಲ್ಲಿ ಕೇಳಿ ಕೋಪವನ್ನೆಬ್ಬಿಸಿದವರು ಯಾರು? ಮೋಶೆಯ ಕೈಕೆಳಗಿದ್ದ
ಐಗುಪ್ತದೊಳಗಿಂದ ಹೊರಟುಬಂದವರೆಲ್ಲರೂ ಅಲ್ಲವೇ. 17ಮತ್ತು ನಾಲ್ವತ್ತು ವರುಷ ಆತನು ಯಾರ
ಮೇಲೆ ಬಹಳವಾಗಿ ಕೋಪಿಸಿಕೊಂಡನು? ಪಾಪಮಾಡಿದವರ ಮೇಲೆ ಅಲ್ಲವೇ/ 18ಅವರ ಶವಗಳು
ಅರಣ್ಯದಲ್ಲಿ ಬಿದ್ದವಲ್ಲಾ. ನನ್ನ ವಿಶ್ರಾಂತಿಯಲ್ಲಿ ನೀವು ಸೇರುವದೇ ಇಲ್ಲವೆಂದು ಯಾರನ್ನು ಕುರಿತು
ಪ್ರಮಾಣಮಾಡಿದನು? ಅವಿಧೇಯರನ್ನು ಕುರಿತಲ್ಲವೇ. 19ಅವರು ಸೇರಿಲಾರದೆ ಹೋದದ್ದು**

**ಅಪನಂಬಿಕೆಯಿಂದಲೇ ಎಂದು ತಿಳಿದುಕೊಳ್ಳುತ್ತೇವೆ.**

ಲೇಖಕನು ತನ್ನ ಪ್ರಬೋಧನೆಗಳನ್ನು ಮುಂದುವರೆಸಿದಂತೆ, ಆತನು ಈ ಕ್ರೈಸ್ತರಿಗೆ ತಮ್ಮ ನಂಬಿಕೆಯನ್ನು ಹುರುಪುಳ್ಳದ್ದಾಗಿಯೂ ಸದೃಢವುಳ್ಳದ್ದಾಗಿಯೂ ಕಾಪಾಡಿಕೊ ಳ್ಳಬೇಕೆಂದು ಬೇಡಿಕೊಳ್ಳುತ್ತಾನೆ. ನಂಬಿಕೆಯ ಒಂದು ವಿಫಲತೆಯು ನಾಶನಕ್ಕೆ ನಡಿಸಬಲ್ಲದೆಂಬುದಾಗಿ ಆತನು ಅವರನ್ನು ಎಚ್ಚರಿಸಿದನು.

3:12-19ರಲ್ಲಿ ಆತನ ಒಟ್ಟಾರೆಯಾದ ಸಂದೇಶವನ್ನು ನಾಲ್ಕು ಚಿಕ್ಕ ಚಿಕ್ಕ ಪ್ರಬೋಧನೆಗಳಾಗಿ ವಿಭಜಿಸಬಹುದು. ಆತನು ಬೇಡಿಕೊಳ್ಳುತ್ತಿದ್ದಾನೆ, ಪ್ರೋತ್ಸಾಹಿಸುತ್ತಿದ್ದಾನೆ, ಮತ್ತು ಪಾಪದ ಕಂದಕಗಳಿಂದ ದೂರವಿರಬೇಕೆಂದು ತನ್ನ ವಾಚಕರಿಗೆ ಮನವರಿಕೆಯನ್ನು ಮಾಡುತ್ತಿದ್ದಾನೆ.

**ವಚನ 12.** ಮೊದಲು ಆತನು ಹೀಗೆ ಹೇಳುತ್ತಾನೆ, **ನೋಡಿಕೊಳ್ಳಿರಿ** (βλέπω, *blepō*). "ನೋಡಿಕೊಳ್ಳಿರಿ" ಅಥವಾ "ಎಚ್ಚರದಿಂದಿರಿ" (NKJV) ಎಂಬ ಆತನ ಬೇಡಿಕೊಳ್ಳುವಿಕೆಯು ಈ ಪತ್ರಿಕೆ ಒಂದು ದೈವಶಾಸ್ತ್ರೀಕವಾದ ಪ್ರಕರಣಗ್ರಂಥಕ್ಕಿಂತಲೂ ಹೆಚ್ಚಿನದ್ದಾಗಿದೆ ಎಂಬುದನ್ನು ತೋರಿಸಿ ಕೊಡುತ್ತದೆ; ಇದೊಂದು ತುರ್ತು ಪ್ರಸಂಗವಾಗಿರುತ್ತದೆ. ತಿಳಿಸಲ್ಪಟಿರುವ ಪ್ರತಿಯೊಂದು ಸಿದ್ಧಾಂತಿಕ ಚರ್ಚೆಯ ವಿಷಯವು ಒಂದು ಬುದ್ಧಿವಾದದೊಂದಿಗೆ ಸಮತೋಲನಗೊಳಿಸಲ್ಪಟ್ಟಿದೆ. ಈ ಸಂದರ್ಭದಲ್ಲಿ ಆಜ್ಞಾರ್ಥಕರೂಪವು ಆತನ ಆಜ್ಞಾಪಣೆಯ ನಿರ್ಣಾಯಕ ಸ್ವಭಾವವನ್ನು ತೋರಿಸುತ್ತದೆ.

ವಾಗ್ದಾನ ದೇಶವನ್ನು ನೋಡಿಕೊಂಡು ಗೂಢಾಚಾರರು ಹಿಂದಿರುಗಿ ಬಂದಾಗ ಕಾದೇಶ್‌ಬರ್ನೇಯದಲ್ಲಿ ನಡೆದ ಘಟನೆಗಳನ್ನು (ಅರಣ್ಯಕಾಂಡ 14:28-30) ಕುರಿತು ಪವಿತ್ರಾತ್ಮನು ಕೀರ್ತನೆ 95:7-11ರಲ್ಲಿ ಉಲ್ಲೇಖ ಮಾಡುತ್ತಾನೆ (ಇಬ್ರಿಯ 3:7-11). ಈ ಘಟನೆಯಲ್ಲಿ ನಾವು ಇಂದು ಕಿವಿಗೊಟ್ಟು ಅನ್ವಯಮಾಡಿಕೊಳ್ಳಬೇಕಾಗಿರುವ ಹಲವಾರು ಎಚ್ಚರಿಕೆಗಳನ್ನು ನೋಡುತ್ತೇವೆ. ಮೊದಲನೆಯದಾಗಿ, ಕ್ರೈಸ್ತರು ಮತಭ್ರಷ್ಟತೆಯ ಅಪಾಯದಲ್ಲಿದ್ದಾರೆ – ನಾವು ಕೃಪೆಯಿಂದ ಬಿದ್ದು ಹೋಗಬಲ್ಲೆವು. ಎರಡನೆಯದಾಗಿ, ಈ ಅಪಾಯವು ಅಪನಂಬಿಕೆಯಿಂದ ಉದ್ಭವವಾಗುತ್ತದೆ. ಮತಭ್ರಷ್ಟತೆಯಲ್ಲು ಮುಳುಗಿ ಹೋಗುವದು ಕೇವಲ ಮಾನಸಿಕವಾಗಿ ಕೆಲವೊಂದು ವಾಸ್ತವಾಂಶಗಳನ್ನು ತಿರಸ್ಕರಿಸುವದರಿಂದ ಮಾತ್ರವೇ ಸಂಭವಿಸುವದಿಲ್ಲ. ಸ್ಪಷ್ಟವಾಗಿರುವಂತೆ, ಒಬ್ಬನು ನಂಬಿಕೆಯ ಒಂದು ಅಂಶವನ್ನು ಉಳಿಸಿಕೊಂಡಿರಬಲ್ಲನು ಮತ್ತು ಹಾಗಿದ್ದರೂ ಮತಭ್ರಷ್ಟತೆಯಿಂದ ದೂರವಿರುವಷ್ಟರ ಮಟ್ಟಿಗೆ ಬಲವಾಗಿ ಇರದಿರಬಹುದಾಗಿದೆ.

ಇಬ್ರಿಯರಿಗೆ ಪತ್ರಿಕೆಯಲ್ಲಿ "ನಂಬಿಕೆ" ಎಂಬುದು ದೇವರ ವಾಗ್ದಾನಗಳ ನೆರವೇರಿಕೆಗಾಗಿ ಎದುರುನೋಡುವಿಕೆಯೊಂದಿಗೆ ಕಾಯುವದನ್ನು ಸೂಚಿಸುತ್ತದೆ (11:13). ಈ ನಂಬಿಕೆಯು ಒತ್ತಡದ ಕೆಳಗೆ "ಹಿಂದಕ್ಕೆ ಮುದುರಿಕೊಳ್ಳುವದಿಲ್ಲ" (ನೋಡಿರಿ ಇಬ್ರಿಯ 10:38). ಅದರಲ್ಲಿ ಹೃದಯದ ಭಾವಗಳು ಮತ್ತು ಬುದ್ಧಿಯಿಂದ ಸತ್ಯವನ್ನು ಅಂಗೀಕರಿಸಿಕೊಳ್ಳುವದನ್ನು ಒಳಗೊಂಡಿರುತ್ತದೆ (11:1). 12ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಅಪನಂಬಿಕೆಯು ಇಚ್ಛಾಪೂರ್ವಕವಾಗಿ ನಂಬುವದಕ್ಕೆ ನಿರಾಕರಿಸುವಿಕೆ ಆಗಿರುತ್ತದೆ.[14]

ಅಪನಂಬಿಕೆಯು ಕಠಿಣ ಹೃದಯಕ್ಕೆ ನಡಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ **ಹೃದಯವು** ಆಲೋಚನೆಗಳನ್ನು, ಚಿತ್ತ, ಮತ್ತು ಭಾವನಾತ್ಮಕ ಉದ್ವೇಗಗಳನ್ನು ಒಳಗೊಂಡಿರುತ್ತದೆ (ನೋಡಿರಿ ಮತ್ತಾಯ 22:34-40). ಹೃದಯವನ್ನು ಕಾಪಾಡಿಕೊಳ್ಳಿರಿ ಎಂದು ಲೇಖಕನು ಮನವಿ ಮಾಡಿಕೊಳ್ಳುವದು 3:1ರಲ್ಲಿ "ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ," ಅಥವಾ ಆತನ ಬಗ್ಗೆ

ಗಂಭೀರವಾಗಿ ಯೋಚಿಸಿರಿ ಎಂದು ತುರ್ತು ಕರೆಯನ್ನು ಕೊಡುವ ಮೂಲಕ ಆರಂಭವಾಯಿತು.

ಅಪನಂಬಿಕೆಯು ಒಂದು **ಕೆಟ್ಟ** ಹೃದಯದಿಂದ ಬರುತ್ತದೆ. ಅವಿಶ್ವಾಸಿಯು ಕೇವಲ ಹೀನನು ಮಾತ್ರವೇ ಅಲ್ಲ; ಆತನು "ಕೆಟ್ಟ"ವನು (πονηρός, *ponēros*). ಒಬ್ಬನು ಕೆಟ್ಟದ್ದನ್ನು ಮಾಡುವದಕ್ಕೆ ಬಯಸುತ್ತಾನಾದ್ದರಿಂದ, ಆತನ ಹೃದಯವು ಪಾಪದಿಂದ ವ್ಯಾದಿಗ್ರಸ್ಥವಾಗಿದೆ, ಮತ್ತು ಅಪನಂಬಿಕೆಯು ಹೆಚ್ಚಾಗುತ್ತದೆ. ಆತನು ಕೆಟ್ಟವನಾಗಿ ಹುಟ್ಟಿದವನು ಮತ್ತು ಆತನ ಜನ್ಮವು ಸಂಪೂರ್ಣ ಭ್ರಷ್ಟತೆಯಲ್ಲಿ ಆರಂಭಗೊಂಡದ್ದರಿಂದ ಕೆಳಕ್ಕೆ ಸಾಗುತ್ತಲೇ ಹೋಗುತ್ತಾನೆಂಬುದಕ್ಕಾಗಿ ಹೀಗೆ ಸಂಭವಿಸುವದಿಲ್ಲ. ಕ್ಯಾಲ್ವಿನ್‌ವಾದವು ಹೀಗೆ ಹೇಳುತ್ತದೆ, "ಮಾನವನು ಪಾಪಿಯಾಗಿ ಹುಟ್ಟಿದ್ದರಿಂದ ಆತನು ಪಾಪ ಮಾಡುತ್ತಾನೆ." 12ನೇ ವಚನವು ಒಬ್ಬ ವ್ಯಕ್ತಿಯು ತನ್ನ ಅಪನಂಬಿಕೆಯ ಕಾರಣದಿಂದ ಕೆಟ್ಟದ್ದನ್ನು ಆರಿಸಿಕೊಳ್ಳುತ್ತಾನೆ ಮತ್ತು ಆತನು ನಂಬಿಕೆಯಿಲ್ಲದ ಮನೋಭಾವದಲ್ಲಿ ಉಳಿದು ಹೋಗುವದರಿಂದ ಆತನು ಹೆಚ್ಚು ಕೆಟ್ಟವನಾಗುತ್ತಾನೆ ಎಂಬದಾಗಿ ಹೇಳುತ್ತದೆ.

ನಮಗೆ ಇದು ಸಂಭವಿಸುವಂತೆ ಅವಕಾಶ ಕೊಡದಂತೆ "ನೋಡಿಕೊಳ್ಳಿರಿ" ಎಂದು ಎಚ್ಚರಿಸಲಾಗಿರುತ್ತದೆ. ನಾವು ನಮಗೆ ಸಹಾಯ ಮಾಡಿಕೊಳ್ಳಲು ಸಾಧ್ಯವಿಲ್ಲದ ಅವಿಶ್ವಾಸಿಗಳಾಗಿ ಜನಿಸಿರುವದಿಲ್ಲ. ಜಾಗ್ರತೆಯಿಲ್ಲವಾದರೆ, ಕ್ರೈಸ್ತನು ಸಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬಲ್ಲನು ಮತ್ತು **ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಹೃದಯವನ್ನು** ಹೊಂದಿಕೊಳ್ಳಬಲ್ಲನು. "ಬಿಟ್ಟುಹೋಗುವ" ಎಂಬುದನ್ನು ಅನುವಾದಿಸಿರುವ ಅದೇ ಗ್ರೀಕ್ ಪದವು ರೋಮಾ 11:20, 23ರಲ್ಲಿ ಬಳಸಲ್ಪಟ್ಟಿದೆ, ಅಲ್ಲಿ ಪೌಲನು ಇಸ್ರಾಯೇಲ್ಯರ ಮತಭ್ರಷ್ಟತೆ ಮತ್ತು ನಂಬುವದಕ್ಕೆ ನಿರಾಕರಿಸುವಿಕೆಯನ್ನು ಉಲ್ಲೇಖಿಸುತ್ತಾನೆ.

**ವಚನ 13.** ಬಿಟ್ಟು ಹೋಗುವಿಕೆಯ ವಿನಾಶಕರವಾದ ಅಂತ್ಯಾವಸ್ಥೆಯಿಂದ ದೂರವಿರಬೇಕೆಂದರೆ, ಕ್ರೈಸ್ತರು **ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಬೇಕು** (ಪ್ರೋತ್ಸಾಹಿಸಿರಿ). ಈ ವಚನವು ಇಬ್ರಿಯ 10:25ಕ್ಕೆ ಒಂದು ವ್ಯಾಖ್ಯಾನವಾಗುತ್ತದೆ. ಅಲ್ಲಿ ಚರ್ಚಿಸಲಾಗಿರುವ ಪ್ರೋತ್ಸಾಹವು ತಪ್ಪಿಹೋಗುತ್ತಿರಬಹುದಾದವರಿಗೆ ಪ್ರತಿನಿತ್ಯವೂ ಅಗತ್ಯವಿರುತ್ತದೆ, ಆದರೆ ಅದು ನಮ್ಮೆಲ್ಲರಿಗೂ ಸಹಾಯಕರವಾಗಿರುತ್ತದೆ. ನಮಗೆ ಸದವಕಾಶವು ಇರುವ ಪ್ರಕಾರ ನಾವು ಒಬ್ಬರನ್ನೊಬ್ಬರು ಪ್ರೋತ್ಸಾಹಿಸಬೇಕು, ಯಾಕೆಂದರೆ ಅದರಲ್ಲಿ ನಂಬಿಗಸ್ತರಾಗಿರುವಂತೆ ಒಬ್ಬರೊಬ್ಬರಿಗೆ ಸಹಾಯ ಮಾಡುವದು ಸಹ ಸೇರಿರುತ್ತದೆ. ನಾವು ಮುಂದೆ ನೋಡಲಿರುವ ಪ್ರಕಾರ, 10:25ರ ಅರ್ಥವು "ಹೆಚ್ಚು ಹೆಚ್ಚು ಕೂಡಿ ಬರುವಂತೆ ಪ್ರೋತ್ಸಾಹಿಸುವದು" ಎಂಬುದರ ಬದಲಾಗಿ ಅದು "ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸಲು ಕೂಡಿ ಬರುವಿಕೆ" ಎಂದಾಗಿರುತ್ತದೆ.

ಅಪಾಯವು ಹೆಚ್ಚು ಘೋರವಾಗುವಾಗ, ಹೆಚ್ಚು ಪ್ರೋತ್ಸಾಹವು ಕೊಡಲ್ಪಡತಕ್ಕದ್ದು. **ಈಹೊತ್ತು ಎಂಬ ಕಾಲವು ಇರುವ ತನಕ** ಎಂಬುದರ ಮೂಲಕ ಅದರ ಅವಸರವನ್ನು ಒತ್ತಿ ಹೇಳಲಾಗಿರುತ್ತದೆ. ಇಂದು ನೀವು ಏನು ಮಾಡುವಿರೆಂಬುದರ ಮೇಲೆ ಒಂದು ಆತ್ಮದ ಅಂತ್ಯಾವಸ್ಥೆಯು ಅವಲಂಭಿತವಾಗಿರಬಲ್ಲದು. ಯೆಹೂದ್ಯ ಕ್ರೈಸ್ತರಿಗೆ ನಂಬಿಕೆಯಿಂದ ಹೊರಗಿದ್ದ ಯೆಹೂದ್ಯರಿಂದಾದ ಒತ್ತಡವು ಒಂದು ಬಲೆಗೆ ಬೀಳಿಸುವಂತಹ ಆಕರ್ಷಣೆಯುಳ್ಳದ್ದು ಆಗಿರಬಹುದು, ಕ್ರಿಸ್ತನನ್ನು ತೊರೆದು ಯೆಹೂದಿಮತದ ಸೇವಿಸುವಿಕೆಯನ್ನು ಆರಂಭಿಸುವಂತೆ ಶೋಧನೆಯನ್ನು ತಂದಿರಬಹುದು.

ಆದದರಿಂದ, ಗಲಾತ್ಯ 6:1, 2ರಲ್ಲಿ ಪೌಲನು ಬೇಡಿಕೊಂಡ ಪ್ರಕಾರ, ನಾವು "ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಬೇಕು." ತಪ್ಪು ಮಾಡಿದ ಒಬ್ಬ ಸಹೋದರನನ್ನು

ಸನ್ಮಾರ್ಗಕ್ಕೆ ತಂದರೆ ಆತನ "ಪ್ರಾಣವನ್ನು ಮರಣಕ್ಕೆ ತಪ್ಪಿಸಿ"ದಂತಾಗುವದು ಎಂಬುದನ್ನು ಯಾಕೋಬನು ನಮಗೆ ಜ್ಞಾಪಿಸುತ್ತಾನೆ (ಯಾಕೋಬ 5:19, 20), ಅದು ಅತ್ಯಂಥ ಖಚಿತವಾಗಿ ಆತನ ಶಾರೀರಿಕ ಜೀವವನ್ನು ಸಮಾಧಿಗೆ ಹೋಗದಂತೆ ರಕ್ಷಿಸುವದು ಎಂಬ ಅರ್ಥವಾಗಿರುವದಿಲ್ಲ. ಬದಲಾಗಿ, ಲೇಖಕನು ನಿತ್ಯವಾದ ನಷ್ಟವನ್ನೊಳಗೊಂಡ ಮರಣದ ಬಗ್ಗೆ ಮಾತಾಡುತ್ತಿದ್ದಾನೆ. ನಾವು ಈ ವಿಧದಲ್ಲಿ ಸಹಾಯವನ್ನು ಒದಗಿಸುವದಕ್ಕೆ ವಿಫಲರಾಗುವದಾದರೆ, ಕ್ರಿಸ್ತನಲ್ಲಿರುವ ಒಬ್ಬ ಸಹೋದರನು **ಪಾಪದಿಂದ ಮೋಸಹೋಗಿ ಕಠಿಣನಾಗಬಹುದು**.

ಪಾಪವು ಮೋಸಕರವಾದದ್ದು ಯಾಕೆಂದರೆ ಅದು ಸುಖದಾಯಕವಾಗಿರುವ ವೇಷಧರಿಸಿಕೊಂಡು ಬರುತ್ತದೆ. ಪಾಪವು ತನ್ನಿಂದ ಕೊಡುವದಕ್ಕೆ ಸಾಧ್ಯವಿರುವದಕ್ಕಿಂತಲೂ ಅತ್ಯಧಿಕವಾದದ್ದನ್ನು ವಾಗ್ದಾನ ಮಾಡುವ ಸಾಮರ್ಥ್ಯ ಹೊಂದಿದೆ. ಇದು ತನ್ನ ಇಚ್ಛೆ ಪೂರೈಸಿಕೊಳ್ಳುವ ಚಟುವಟಿಕೆಗಳಿಂದಾಗುವ ಫಲಿತಗಳ ಬಗ್ಗೆ ಜಾಗ್ರತೆಯಿಂದ ಯೋಚಿಸುವದಕ್ಕೆ ಅವನಿಗೆ ಸಮಯವನ್ನು ತೆಗೆದುಕೊಳ್ಳದಂತಹ ಕುಡುಕನಲ್ಲಿ, ವ್ಯಸನಿ, ಅಥವಾ ಭೋಗಾಸಕ್ತನಲ್ಲಿ ಪೂರ್ಣವಾಗಿ ತೋರಿ ಬರುತ್ತದೆ. ಕ್ರಿಸ್ತನ ಹೊರಗಡೆಯಲ್ಲಿ ಯಾವದೇ ಶಾಶ್ವತವಾದ ಸುಖವು ಇರುವದಕ್ಕೆ ಸಾಧ್ಯವಿಲ್ಲ. ಪಾಪವು ಕೊಡುವ ಸಂಬಳ ಮರಣ ಮಾತ್ರವೇ ಅಲ್ಲ, ಆದರೆ ಒಬ್ಬನು ತನ್ನ ಇಚ್ಛೆಗಳನ್ನು ತಣಿಸಿಕೊಳ್ಳಲು ತೊಡಗಿಸಿಕೊಳ್ಳುವ ಕಾರ್ಯಗಳಿಗೆ ವ್ಯಸನಿಯಾಗುವದು ಸಹ ಸೇರಿರುತ್ತದೆ.

12ನೇ ವಚನದಲ್ಲಿ ಮುಂದಿಡಲಾಗಿರುವ ಅಪಾಯವು ಏನೆಂದರೆ "ಜೀವಸ್ವರೂಪನಾದ ದೇವರನ್ನು" ಬಿಟ್ಟು ಹೋಗುವದು. ಕ್ರಿಸ್ತನಿಂದ ಮತ್ತು ಆತನ ಅಪೊಸ್ತಲರಿಂದ ಪ್ರತಿಪಾದಿಸಲ್ಪಟ್ಟಿರುವ ತತ್ವಗಳನ್ನು ಬಿಟ್ಟು ಹೋಗುವದು ಕ್ರಿಸ್ತನನ್ನು ತೊರೆಯುವದಷ್ಟೆ ಅಲ್ಲ, ಆದರೆ ದೇವರಿಂದ ದೂರವಾಗಿ ಹೋಗುವದು ಸಹ ಆಗಿರುತ್ತದೆ. ಆದಕಾರಣ, ಕ್ರಿಸ್ತನಲ್ಲಿನ ಜೀವನವು ಒಬ್ಬನು ತನ್ನ ಭಕ್ತಿಯುಳ್ಳ ಜೀವನಶೈಲಿಗೆ ಅಗತ್ಯವಿರುವವಗಳ ಬಗ್ಗೆ ಏನು ನಂಬುತ್ತಾನೆಂಬುದರೊಂದಿಗೆ ಸಂಬಂಧ ಹೊಂದಿರುತ್ತದೆ. ತಮ್ಮ "ಭೋಗಾಸಕ್ತಿ ಯಲ್ಲಿ" ಮುಳುಗಿ ಕಠಿಣ ಹೃದಯಿಗಳಾಗಿರುವವರಿಗೆ, ಪೌಲನು "ನೀವಾದರೋ ಕ್ರಿಸ್ತನ ಧರ್ಮವು ಅಂಥದೆಂದು ಕಲಿತುಕೊಳ್ಳಲಿಲ್ಲ" ಎಂದು ಹೇಳುತ್ತಾನೆ (ಎಫೆಸ 4:19, 20). ಒಬ್ಬನು "ಕ್ರಿಸ್ತನನ್ನು ಕಲಿತುಕೊಳ್ಳ[ವಾಗ]," ಆತನು ಜೀವಿಸಬೇಕು ಮತ್ತು ತನ್ನನ್ನು ಭೋಗಾಸಕ್ತಿಗೆ ಬಿಟ್ಟು ಕೊಡುವವನಾಗಬಾರದು ಎಂಬುದನ್ನು ಕಲಿತುಕೊಳ್ಳುವನು, ಅದು ಎಫೆಸ 4ರಲ್ಲಿನ ಸನ್ನಿವೇಶದಿಂದ ಸ್ಪಷ್ಟವಾಗಿರುತ್ತದೆ. ಹೀಗೆ ನಾವು ಕ್ರಿಸ್ತನ ಕುರಿತು ಏನು ಕಲಿತುಕೊಳ್ಳುವೆವೆಂಬುದು ನಾವು ಹೇಗೆ ಜೀವಿಸುತ್ತೇವೆಂಬುದನ್ನು ನಿರ್ಧರಿಸುತ್ತದೆ.

ಕೆಲವರು ಹೀಗೆ ಹೇಳಿರುತ್ತಾರೆ, "ನೀವು ಏನು ಮಾಡುವಿರಿ ಎಂಬುದಲ್ಲ, ಆದರೆ ಕೇವಲ ಕ್ರಿಸ್ತನೊಂದಿಗಿರುವ ನಿಮ್ಮ ಸಂಬಂಧವು ಜೀವಧಾರಕವಾದದ್ದು"; "ನೀವು ಯೇಸುವಿನ ಸಂಗಡ ವೈಯಕ್ತಿಕ ಸಂಬಂಧವನ್ನು ಹೊಂದಿರುವಷ್ಟು ಕಾಲ ನಿಮ್ಮ ಕೃತ್ಯಗಳು ಮಹತ್ವವೇ ಅಲ್ಲ"; ಅಥವಾ "ನೀವು ಏನು ಮಾಡುವಿರೆಂಬುದಲ್ಲ, ಆದರೆ ನೀವು ಏನಾಗಿರುವಿರಿ ಎಂಬುದು ಲೆಕ್ಕಕ್ಕೆ ಬರುತ್ತದೆ." ನಮ್ಮ ಸಂಭಾಷಣೆಯು ನಮ್ಮ ನಿಜವಾದ ಆಂತರ್ಯವನ್ನು ತೋರಿಸಿ ಕೊಡುವ ರೀತಿಯಲ್ಲಿಯೇ, ನಾವು ಏನು ಮಾಡುತ್ತೇವೆಂಬುದು ನಮ್ಮ ಹೃದಯಗಳಲ್ಲಿ ಏನಿದೆ ಎಂಬುದಕ್ಕೆ ಬಲವಾದ ಸೂಚನೆ ಆಗಿರುತ್ತದೆ. ನಾವು ಏಕೆ "ಸುಮ್ಮನೆ ಆಡುವ ಪ್ರತಿಯೊಂದು ಮಾತಿಗೂ" ಲೆಕ್ಕ ಕೊಡಬೇಕಾಗುತ್ತದೆಂಬುದನ್ನ ಇದು ವಿವರಿಸುವದಾಗಿದೆ (ಮತ್ತಾಯ 12:36, 37). ನಾವು ಏನು ಮಾಡುತ್ತೇವೋ ಅದೇ ಆಗಿರುತ್ತೇವೆಂಬುದನ್ನು ನಮ್ಮ ವಾಕ್ಯಭಾಗವು ಸೂಚ್ಯಾರ್ಥವಾಗಿ

ತಿಳಿಸುತ್ತದೆ ನಾವು ಕ್ರಿಸ್ತನಿಗೆ ವಿರುದ್ಧವಾದದ್ದನ್ನು ಅಭ್ಯಾಸಿಸುವದಾದರೆ, ನಾವು ಆತನನ್ನು ತೊರೆಯುವವರಾಗುತ್ತೇವೆ ಮತ್ತು ಜೀವಸ್ವರೂಪನಾದ ದೇವರನ್ನು ಬಿಟ್ಟು ಹೋಗುತ್ತೇವೆ. ಒಬ್ಬನು ತಾನು ಏನಾಗಿದ್ದಾನೆಂಬುದನ್ನು ತಾನು ಏನು ಮಾಡುತ್ತಾನೆಂಬುದರಿಂದ ಬೇರ್ಪಡಿಸುವದಕ್ಕೆ ಸಾಧ್ಯವಿಲ್ಲ. ಆ ವಿಧವಾದ ಕಾಲ್ಪನಿಕ ಯೋಚನೆಯು ಚಾಣಕ್ಷ್ಯವೆಂಬಂತೆ ತೋರುವದು ಆದರೆ ಅದಕ್ಕೆ ಯಾವದೇ ಬೈಬಲಾಧಾರಿತ ತಿರಳು ಇರುವದಿಲ್ಲ. ನಾವು "ಕ್ರಿಸ್ತನನ್ನು ತಿಳಿದಿರುವದನ್ನು" (2 ಕೊರಿಂಥ 5:16) ಹೇಗೆ ಜೀವಿಸಬೇಕೆಂಬ ಕುರಿತ ಆತನ ಉಪದೇಶದಿಂದ ಬೇರ್ಪಡಿಸುವದಕ್ಕೆ ಸಾಧ್ಯವಿಲ್ಲ.

ಇದುವರೆಗೂ ಇಬ್ರಿಯರಿಗೆ ಪತ್ರಿಕೆಯಲ್ಲಿ ಎರಡು ಎಚ್ಚರಿಕೆಗಳನ್ನು ನೋಡಿದ್ದೇವೆ. ಮೊದಲನೆಯದಾಗಿ, ತಪ್ಪಿಹೋಗುವದರ ಅಪಾಯದ ಕುರಿತು ಗಮನಿಸಿದೆವು, ಅದು ಅಸಡ್ಡೆತನವನ್ನು ಸೂಚಿಸುತ್ತದೆ (2:1-14). ಎರಡನೆಯ ಅಪಾಯವು ನಂಬಿಕೆಯ ಕೊರತೆ ಮತ್ತು ತತ್ಪರಿಣಾಮ ಬರುವ ಅವಿಧೇಯತೆ (3:12, 13).[15] ಇಬ್ರಿಯರ ಮೂಲಪಿತೃಗಳು ವಿರೋಧವನ್ನು ಮತ್ತಷ್ಟು ಮುಂದಕ್ಕೆ ಮಿತಿಮೀರಿಸಿದ್ದರು ಮತ್ತು ಅವರಿಗೆ ಸ್ಪಷ್ಟವಾಗಿ ಲಭ್ಯವಿದ್ದ ದೇವರ ಶಕ್ತಿಯನ್ನು ನಿರ್ಲಕ್ಷಿಸಿದ್ದರು. ಹಾಗೆ ಮಾಡುವ ಮೂಲಕ, ಅವರು ವಾಗ್ದಾನ ಮಾಡಲ್ಪಟ್ಟಿದ್ದ ಬಹುಮಾನವನ್ನು ಕಳಕೊಂಡಿದ್ದರು. ಅವರಲ್ಲಿದ್ದ ನಂಬಿಕೆಯ ಕೊರತೆಯು ಅವರನ್ನು ಅವಿಧೇಯತೆಗೆ ಮತ್ತು ಅವರ ಸ್ವಂತ ನಾಶನಕ್ಕೆ ನಡಿಸಿತ್ತು.

**ವಚನಗಳು 14, 15**. **ಕ್ರಿಸ್ತನಲ್ಲಿ ಪಾಲುಗಾರರಾಗಿ** (ವ. 14), ನಾವು ನಮ್ಮ ನಂಬಿಕೆಯನ್ನು ದೃಢವಾಗಿ ಹಿಡಿದುಕೊಳ್ಳುವ ಮೂಲಕ ವಾಸ್ತವಿಕವಾಗಿ ಕ್ರಿಸ್ತನಲ್ಲಿ "ಹಂಚಿಕೊಳ್ಳಬಹುದು" (NIV; RSV; ESV), ಅಥವಾ ಆತನೊಂದಿಗೆ "ಪಾಲುದಾರರು" ಆಗಬಹುದು (NRSV; ISV). ದೇವಜನರಾಗಿ, ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಒಂದಾಗಿರುವವರಾಗಿದ್ದು (ರೋಮಾ 6:3) ನಾವು ಆತ್ಮೀಕವಾಗಿ ರಕ್ಷಕನೊಂದಿಗೆ ಐಕ್ಯವಾಗಿರುತ್ತೇವೆ. ನಾವು ಕ್ರಿಸ್ತನೊಂದಿಗೆ ಆತನ ರಾಜ್ಯದ ಶ್ರೇಷ್ಠವಾದ ಆಶೀರ್ವಾದಗಳಲ್ಲಿ ಪಾಲುಗಾರರಾಗುತ್ತೇವೆ, ಆ ರಾಜ್ಯವನ್ನು ಯಾರೂ ಕದಲಿಸಲಾರರು (ಇಬ್ರಿಯ 12:28). ನಾವು ಈ ಗುರಿಯನ್ನು ಸಾಧಿಸುವದಾದರೆ ನಾವು 1 ಕೊರಿಂಥ 1:10ರಲ್ಲಿ ಹೇಳಲಾಗಿರುವ ಒಂದೇ ಮಾತು ಉಳ್ಳವರಾಗಿರಬೇಕು ಮತ್ತು ಆತ್ಮೀಕವಾಗಿ ಒಂದೇ ಆಗಿರಬೇಕೆಂಬ ಆಜ್ಞೆಗೆ ವಿಧೇಯರಾದವರಾಗುತ್ತೇವೆ.

ಯೇಸು ಅಪೊಸ್ತಲರಿಗಾಗಿ ಮತ್ತು ನಮಗಾಗಿ ಮಾಡಿದ ಪ್ರಾರ್ಥನೆಯಲ್ಲಿ, ಆತನು ಕ್ರೈಸ್ತರಿಗೆ "ನಮ್ಮಲ್ಲಿ" ಒಂದಾಗಿರಬೇಕೆಂಬ, ಅಂದರೆ ದೇವರಲ್ಲಿ ಮತ್ತು ಕ್ರಿಸ್ತನಲ್ಲಿ ಒಂದಾಗಿರಬೇಕೆಂಬ ಗುರಿಯೊಂದನ್ನು ವ್ಯಕ್ತಪಡಿಸುತ್ತಾನೆ (ಯೋಹಾನ 17:20, 21). ಧಾರ್ಮಿಕ ಜಗತ್ತಿನಲ್ಲಿರುವ ಭೇದಗಳು ಶಾಸ್ತ್ರಗಳ ವಿಷಯದಲ್ಲಿ ಸಭೆಯು ಅನುಸರಿಸುವ ದಾರಿಯು ತಪ್ಪಾದದ್ದೆಂದು ಅನೇಕರು ಊಹಿಸಿಕೊಳ್ಳುತ್ತಾರೆ. ಸಿದ್ಧಾಂತಿಕ ಭೇದಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಇರಬೇಕು ಮತ್ತು "ಕ್ಷುಲ್ಲಕ ವಿಚಾರಗಳನ್ನು" ನಿರ್ಲಕ್ಷಿಸಿ ಐಕ್ಯತೆಯಿಂದಿರಬೇಕು ಎಂಬ ಅಭಿಪ್ರಾಯವನ್ನು ಪ್ರತಿಪಾದಿಸುತ್ತಾರೆ. ಯೇಸು ತನ್ನ ಪ್ರಾರ್ಥನೆಯಲ್ಲಿ ಕಲ್ಪನೆ ಮಾಡಿಕೊಂಡ ಐಕ್ಯತೆಯು ಈ ವಿಧವಾದದ್ದೋ? ಸಾಮಾನ್ಯವಾಗಿ ಬೈಬಲಿಗೆ ಹೆಚ್ಚಿನದನ್ನು ಕೂಡಿಸುವ ಮೂಲಕವಾಗಿ ಭೇದಗಳು ಉಂಟಾಗುತ್ತವೆ. ಬೈಬಲಿನ ತಳಹದಿಯ ಮೇಲೆ ಮಾತ್ರವೇ, ನಾವು ಒಂದಾಗಿ ನಿಲ್ಲಬಲ್ಲೆವು ಮತ್ತು ಕ್ರಿಸ್ತನೊಂದಿಗೆ ಪೂರ್ಣವಾಗಿ ಪಾಲುಗಾರರಾಗಬಲ್ಲೆವು.

ಇಂದು ನಾವು ಪರೀಕ್ಷಾರ್ಥ ಹಂತದಲ್ಲಿದ್ದೇವೆ. "ಕ್ರಿಸ್ತನಲ್ಲಿ ಪಾಲುಗಾರರು" ಎಂಬುದರ ಸಕಲವನ್ನು ಅಂತಿಮವಾಗಿ ನಾವು ಹೊಂದಿಕೊಳ್ಳುತ್ತೇವೆಂಬ ನಿಶ್ಚಯತೆಯೊಂದಿಗೆ ಇರಬೇಕೆಂದರೆ, ನಾವು **ದೃಢವಾಗಿ ಹಿಡಿದುಕೊಳ್ಳಬೇಕು**. ಸುವಾರ್ತೆಯು ತನ್ನಲ್ಲಿ

ನೆಲೆಯಾಗಿರುವವರನ್ನು, ಅದನ್ನು ದೃಢವಾಗಿ ಹಿಡಿದುಕೊಳ್ಳುವವರನ್ನು, ಮತ್ತು ನಂಬಿಕೆಯನ್ನು ನಿರಾಧಾರವಾಗಿಸಿಕೊಳ್ಳದವರನ್ನು ರಕ್ಷಿಸುವದೆಂದು ಪೌಲನು ಭರವಸವನ್ನು ಕೊಡುತ್ತಾನೆ (1 ಕೊರಿಂಥ 15:1, 2). "ನಿರಾಧಾರವಾಗಿ" ನಂಬುವದೆಂದರೆ ತನ್ನ ನಂಬಿಕೆಯನ್ನು ಒಬ್ಬನು ಬಿಟ್ಟುಬಿಡುವನು ಅಥವಾ ಅಂತ್ಯದ ವರೆಗೂ ಅದನ್ನು ದೃಢವಾಗಿ ಹಿಡಿದುಕೊಳ್ಳುವದಿಲ್ಲ ಎಂದರ್ಥವಾಗತಕ್ಕದ್ದು. ನಾವು ಅಲಕ್ಷ್ಯ ಅಥವಾ ಅವಿಧೇಯತೆಯ ಮೂಲಕ ಕ್ರಿಸ್ತನೊಂದಿಗಿರುವ ಐಕ್ಯತೆಯನ್ನು ಕಳಕೊಳ್ಳಬಲ್ಲೆವು (ನೋಡಿರಿ 2:1; 3:12, 13). ನಾವು "ದೃಢವಾಗಿ ಹಿಡಿದುಕೊಳ್ಳಬೇಕು" ಇಲ್ಲವೆ ನಮ್ಮ ಕಿರೀಟವನ್ನು ಕಳಕೊಳ್ಳುತ್ತೇವೆ (ಪ್ರಕಟನೆ 3:11), ಯಾರಾದರೊಬ್ಬರು ನಮ್ಮ ಕಿರೀಟವನ್ನು ತೆಗೆದುಕೊಳ್ಳಬಲ್ಲರು ಎಂಬುದನ್ನು ಅದು ಪರೋಕ್ಷವಾಗಿ ಸೂಚಿಸುತ್ತದೆ.

ನಾವು ಏನನ್ನು "ದೃಢವಾಗಿ ಹಿಡಿದುಕೊಳ್ಳಬೇಕು"? ಇದು ಕೇವಲ ಧರ್ಮದ ಬಗ್ಗೆ ಮಾತಿನಲ್ಲಿ ಅರಿಕೆ ಮಾಡುವದಲ್ಲ – ಒಬ್ಬನು ಇದನ್ನು ತೋರ್ಪಡಿಸಬಹುದು ಮತ್ತು ನಿಜವಾದ ಭಕ್ತಿಯನ್ನು ಹೊಂದಿಲ್ಲದೆ ಇರಬಹುದು. ಇದು ಒಂದು ಪಕ್ಷ ಅಥವಾ ಪಂಥಕ್ಕಾಗಿ ವೈರಾಗ್ಯವಿರುವದಲ್ಲ. ಫರಿಸಾಯನಂತೆ ಒಬ್ಬನು ಆ ವಿಧವಾದ ವೈರಾಗ್ಯ (ಅಭಿಮಾನ) ವನ್ನು ಪ್ರದರ್ಶಿಸಬಹುದು, ಕೇವಲ ತನ್ನ ಸ್ಥಾನದ ಬಗ್ಗೆ ಮಾತ್ರವೇ ಕಳಕಳಿ ಹೊಂದಿದವನಾಗಿ ಕ್ರಿಸ್ತನಿಗಾಗಲಿ ಆತನ ಸಭೆಗಾಗಲಿ ಹಿತವಾಗುವ ಬಗ್ಗೆ ಚಿಂತೆಯಿಲ್ಲದಿರಬಹುದು. ಅದು ಕೇವಲ ಪ್ರಾಮಾಣಿಕತೆಯಷ್ಟೆ ಅಲ್ಲ, ಯಾಕೆಂದರೆ ಒಬ್ಬನು ವ್ಯಾಪಾರದ ಕಾರಣಗಳಿಗಾಗಿ ಪ್ರಾಮಾಣಿಕನಾಗಿರಬಲ್ಲನು ಮತ್ತು ಕರ್ತನಿಗೆ ಯಾವದೇ ಸಮರ್ಪಣೆಯನ್ನು ಹೊಂದದೆ ಇರಬಹುದು. ನ್ಯಾಯತೀರ್ಪಿನ ದಿನದಂದು ಕೆಲವರು ತಾವು ಸುಳ್ಳು ನಂಬಿಕೆಗಳಲ್ಲಿ ಪ್ರಾಮಾಣಿಕರಾಗಿದ್ದ ಕಾರಣದಿಂದ ದೇವರ ಚಿತ್ತಕ್ಕೆ ಅವಿಧೇಯರಾಗುವಂತಾಯಿತೆಂದು ಕರ್ತನ ಸಂಗಡ ವಾದಿಸುವರು, ಮತ್ತು ಕರ್ತನು ಅವರಿಗೆ, "ನಾನೆಂದೂ ನಿಮ್ಮ ಗುರುತು ಕಾಣೆನು" ಎಂದು ಹೇಳುವನು (ಮತ್ತಾಯ 7:21-23).

ಕ್ರೈಸ್ತರು ದೇವರ ಮತ್ತು ಕ್ರಿಸ್ತನ ಪ್ರೀತಿಯಲ್ಲಿ, ನಮ್ಮ ಹೃದಯಗಳನ್ನು ಜಾಗ್ರತೆಯಿಂದ ಕಾಪಾಡಿಕೊಳ್ಳುವದರಲ್ಲಿ, ದೇವರೊಂದಿಗೆ ಸಹವಾಸದಲ್ಲಿ, ಮತ್ತು ಜಾಗರೂಕತೆಯಿಂದ ಬೈಬಲ್ ಅಧ್ಯಯನ ಮಾಡುವದರಲ್ಲಿ ನಿಷ್ಠೆಯಿಂದ ಮುಂದುವರೆಯಬೇಕು. ನಾವು ನಮ್ಮ ಉದ್ವೇಗಗಳನ್ನು ನಿಗ್ರಹಿಸಿಕೊಳ್ಳಬೇಕು ಮತ್ತು ಆರಾಧನೆಯ ಸಮಯಗಳಿಗೆ ಕ್ರಮವಾಗಿ ಹಾಜರಾಗಬೇಕು. ನಾವು ಆಂತರ್ಯಕ್ಕೆ ಸಂಬಂಧಿಸಿದ ಕರ್ತವ್ಯಗಳಲ್ಲಿ ನಿಷ್ಠೆಯಿಂದ ಮುಂದುವರೆಯಬೇಕು, ಆದರೆ ಸಾರ್ವಜನಿಕ ಕರ್ತವ್ಯಗಳಲ್ಲಿ ಸಹ ಮುಂದುವರೆಯಬೇಕು. ಪ್ರಾಪಂಚಿಕತೆಯಿಂದ, ಜಾರತ್ವ, ಮತ್ತು ಅಪ್ರಾಮಾಣಿಕತೆಯಿಂದ ದೂರವಿರಬೇಕೆಂದು ನಮಗೆ ಕಲಿಸಲಾಗಿರುತ್ತದೆ. ಒಬ್ಬ ಎತ್ತರದ-ಕುಳ್ಳ ವ್ಯಕ್ತಿಯೆಂಬುದು ಹೇಗೆ ಇರುವದಿಲ್ಲವೋ ಅದೇ ರೀತಿಯಲ್ಲಿ "ಪ್ರಾಪಂಚಿಕ ಕ್ರೈಸ್ತ" ಎಂದು ಯಾವದೂ ಇರುವದಿಲ್ಲ. ಒಬ್ಬನು "ರಹಸ್ಯ ಶಿಷ್ಯ" ಆಗಿರಬಲ್ಲನು, ಅರಿಮತಾಯದ ಯೋಸೇಫನ ರೀತಿಯಲ್ಲಿ (ಯೋಹಾನ 19:38), ಆದರೆ ಆ ರಹಸ್ಯವು ದೀರ್ಘಕಾಲದ ತನಕ ಹಾಗೆಯೇ ಉಳಿಯುವದಕ್ಕೆ ಸಾಧ್ಯವಿಲ್ಲ.

"ಈಹೊತ್ತು" ಎಂಬ ಕಾಲವು ಇರುವ ತನಕ ನಮ್ಮ ದೃಢನಿಷ್ಠೆಯು ಉಳಿಯತಕ್ಕದ್ದು (ವ. 13), ಅದರರ್ಥವು ಜೀವವು ಇರುವ ತನಕವು ಎಂದಾಗಿದೆ (**ಅಂತ್ಯದವರೆಗೂ**; ವ. 14). ದೇವರು ಕರುಣೆಗೆ ದ್ವಾರವು ಅಷ್ಟೊಂದು ಕಾಲಾವಧಿಯ ತನಕ ತೆರೆದಿಡಲ್ಪಟ್ಟಿರುತ್ತದೆ. ನಮ್ಮ ಹೃದಯಗಳು ಕಠಿಣವಾಗುವಂತೆ ಅಥವಾ ಅಸಡ್ಡೆಯುಳ್ಳವುಗಳಾಗುವಂತೆ ಬೆಳೆಯುವದರಿಂದ ತಡೆಯುವದಕ್ಕೆ ನಾವು ನಿರಂತರವಾಗಿ ಪ್ರಯತ್ನವನ್ನು ಮಾಡುತ್ತಲಿರಬೇಕು. ಇಸ್ರಾಯೇಲ್ಯರಿಗೆ ಅರಣ್ಯದಲ್ಲಿ ಏನಾಯಿತೋ ಅದನ್ನು ನಮ್ಮಲ್ಲಿ ನಡೆಯದಂತೆ ಅದರಿಂದ ದೂರವಿರಬೇಕು

(ನೋಡಿರಿ ವ. 16).

**ವಚನಗಳು 16, 17.** ಅಂತ್ಯದ ವರೆಗೂ ನಂಬಿಗಸ್ತರಾಗಿ ಉಳಿಯುವ ಹೊರತು ಯಾವನೂ ದೇವರ ಕೋಪದಿಂದ ತಪ್ಪಿಸಿಕೊಳ್ಳಲಾರನು ಎಂಬುದನ್ನು ಇಬ್ರಿಯ ಕ್ರೈಸ್ತರು ಅರಿತುಕೊಳ್ಳಬೇಕೆಂಬದು ಲೇಖಕ ಬಯಕೆಯಾಗಿತ್ತು. ಇದನ್ನು ಸಾಭಿತುಪಡಿಸುವದಕ್ಕೆ, **ಅರಣ್ಯದಲ್ಲಿ** ಬಹಳಷ್ಟು ಸಂಖ್ಯೆಯಲ್ಲಿ **ಅವರ ಶವಗಳು ಬಿದ್ದವಲ್ಲಾ** ಎಂಬುದನ್ನು ಅವರಿಗೆ ಜ್ಞಾಪಿಸುತ್ತಾನೆ.

ದೇವರಿಗೆ ಅವರಿಗಾಗಿ ಎಷ್ಟೆಲ್ಲಾ ಮಾಡಿದ್ದಾಗ್ಯೂ ಇಸ್ರಾಯೇಲ್ಯರು ದೇವರಿಗೆ **ಕೋಪವನ್ನೆಬ್ಬಿಸಿದ್ದು** ಅವರಿಗೆ ಎಷ್ಟೊಂದು ದುರಂತರಕರವಾಗಿತ್ತು! ಅನೇಕರು ಗತಿಸಿ ಹೋದರು — ಬಹುಶಃ, ಒಂದು ಅಂದಾಜಿನ ಪ್ರಕಾರ, ದಿನಕ್ಕೆ ತೊಂಭತ್ತು ಜನರು ಸತ್ತರು![16]

ಆತನು **ಯಾರ ಮೇಲೆ . . . ಕೋಪಿಸಿಕೊಂಡನು**? ಯಾವಾಗಲೂ ನಡೆಯುವಂತೆಯೇ, ದೇವರು ಪಾಪ ಮಾಡುವವರಿಂದ ದುಃಖಕ್ಕೊಳಗಾಗುತ್ತಾನೆ. ಅರಣ್ಯದಲ್ಲಿ ಮರಣವನ್ನು ಅನುಭವಿಸಿದವರು ನಿರಪರಾಧಿಗಳಾದ ಯುವಕರಲ್ಲ; ಅವರಿಗೆ ವಾಗ್ದಾನ ದೇಶದಲ್ಲಿ ಪ್ರವೇಶಿಸಲು ಅನುಮತಿಸಲಾಯಿತು. ಬದಲಾಗಿ, ದೇವರ ಕೋಪವು ಗುಣಗುಟ್ಟುವರು ಮತ್ತು **ಪಾಪಮಾಡಿದವರ** ಹಾಗೂ ಬಿದ್ದು ಹೋದವರ ಕಡೆಗೆ ಆಗಿತ್ತು (1 ಕೊರಿಂಥ 10:6-13). ದೇವರ ಪ್ರೀತಿಯ ಮಾರ್ಗದರ್ಶನದ ಕುರಿತು ಹೆಚ್ಚು ತಿಳುಕೊಳ್ಳಲು ಅವರಿಗೆ ಸಕಲ ಸದವಕಾಶಗಳು ಇದ್ದವು, ಆದರೆ ಅವರು ಕಲಿತುಕೊಳ್ಳಲಿಲ್ಲ. ಅವರ ಅವಿಧೇಯತೆಯ ಕಾರಣದಿಂದ, ಅವರ "ಶವಗಳು" ಏಕಾಂಗಿಯಾದ ಅರಣ್ಯದಲ್ಲಿ ಬಿದ್ದು ಹೋದವು (ಅರಣ್ಯಕಾಂಡ 14:22-29).

ನಮ್ಮ ಪರಲೋಕದ ತಂದೆಗೆ ದುಃಖ ಅಥವಾ ಕೋಪವನ್ನೆಬ್ಬಿಸುವದು ಒಂದು ದುರಂತವಾಗಿದ್ದು ಅದಕ್ಕಾಗಿ ಬಹಳವಾದ ಬೆಲೆಯನ್ನು ತೆತ್ತಬೇಕಾಗುತ್ತದೆ. ಅಲ್ಲದೆ ನಾವು ನಮ್ಮ ಪಾಪದಿಂದ ಪವಿತ್ರಾತ್ಮನನ್ನು ಸಹ ದುಃಖಪಡಿಸಬಲ್ಲೆವು (ನೋಡಿರಿ ಎಫೆಸ 4:30). ನಂಬಿಕೆಯಿಲ್ಲದ ಇಸ್ರಾಯೇಲ್ಯರು, ಹನ್ನೆರಡು ಮಂದಿ ಗೂಢಾಚಾರರಲ್ಲಿ ಹತ್ತು ಮಂದಿಯ ರೀತಿಯಲ್ಲಿಯೇ, ತಕ್ಷಣದಲ್ಲಿ ಮರಣಿಸುವದಕ್ಕೆ ಯೋಗ್ಯರಾಗಿದ್ದರು (ಅರಣ್ಯಕಾಂಡ 14:36-38), ಆದರೆ ಕೆಲವರು ಅರಣ್ಯದಲ್ಲಿನ **ನಾಲ್ವತ್ತು ವರುಷಗಳ** ವೇಳೆಯಲ್ಲಿ ಸಹಜವಾದ ಮರಣವನ್ನು ಅನುಮತಿಸಿದನು. ತ್ವರಿತ ನಾಶನವನ್ನು ಮೋಶೆಯ ಪ್ರಾರ್ಥನೆಯು ತಡೆದಿತ್ತು (ಅರಣ್ಯಕಾಂಡ 14:13-19). ಇಸ್ರಾಯೇಲ್ಯರು ಮಾಡಿದ ಪ್ರಮಾದದಿಂದ ನಾವು ಕಲಿತುಕೊಳ್ಳತಕ್ಕದ್ದು.

**ವಚನಗಳು 18, 19.** 18ನೇ ವಚನವು ಕೀರ್ತನೆ 95:11ನ್ನು ಉಲ್ಲೇಖಿಸುತ್ತಿದೆ, ಅದು 3:11ರಲ್ಲಿ ಪ್ರಸ್ತಾಪಿಸಲ್ಪಟ್ಟಿತ್ತು. ಇಸ್ರಾಯೇಲ್ಯರು ಕಾನಾನ್ ದೇಶವನ್ನು **ಪ್ರವೇಶಿಸುವದೇ** ಇಲ್ಲವೆಂದು ದೇವರು ಧರ್ಮೋಪದೇಶಕಾಂಡ 1:34, 35ರಲ್ಲಿ ಪ್ರಮಾಣ ಮಾಡಿದನು. ಇಸ್ರಾಯೇಲ್ಯರನ್ನು ಕಾನಾನ್ ದೇಶದಿಂದ ಹೊರಗಿಟ್ಟ ಅದೇ ಪಾಪವು — ಭರವಸವಿಡುವ ನಂಬಿಕೆಯ ಕೊರತೆ — ನಮ್ಮನ್ನು ಪರಲೋಕದಿಂದ ಹೊರಗೆ ಇಡಬಲ್ಲದು. ಐಗುಪ್ತದಿಂದ ಹೊರಟಾಗ ಮತ್ತು ಅರಣ್ಯದಲ್ಲಿ ಸಂಭವಿಸಿದ ಇಸ್ರಾಯೇಲ್ಯರ ಎಲ್ಲಾ ಅನುಭವಗಳು ಮತ್ತು ಎಲ್ಲಾ ಅದ್ಭುತಗಳು ಯೋರ್ದಾನ್ ನದಿಯನ್ನು ದಾಟುವ ಮುನ್ನ ಮರಣದ ದಂಡನೆಯಿಂದ ಅವರನ್ನು ತಡೆಯುವದಕ್ಕೆ ಸಾಧ್ಯವಾಗಲಿಲ್ಲ. ಅದೇ ರೀತಿಯಲ್ಲಿಯೇ, ತನಗೆ ಒಂದು ಮಹಾನ್ "ಅನುಭವ" ಆಯಿತೆಂದು ಹೇಳಿಕೊಳ್ಳುವವನು ಕರ್ತನ ಆಜ್ಞೆಗಳಿಗೆ ವಿಧೇಯನಾಗುವ ತನಕ ಯಾವದೇ ನಿಜವಾದ ನಿಶ್ಚಯತೆಯನ್ನು ಹೊಂದಿರಲಾರನು.

ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತಾಡಲಾಗಿರುವ ಸಮಸ್ಯೆಯ ಕಾರಣವು ದೇವರಲ್ಲಿ ಮತ್ತು ಆತನಲ್ಲಿ ಅವರಿಗಿದ್ದ ನಂಬಿಕೆಯ ಕೊರತೆಯೇ ಆಗಿತ್ತು. ವಿಶ್ವಾಸದ ಕೊರತೆಯೇ ಇಂದು ನಮ್ಮ

ಜೀವಿತಗಳಲ್ಲಿನ ಬಹುಪಾಲು ಸಮಸ್ಯೆಗಳಿಗೆ ಕಾರಣವಾಗಿರುತ್ತದೆ. "ಮನುಷ್ಯನು ದೇವರಲ್ಲಿ ಭರವಸೆಯನ್ನು ಕಳೆದುಕೊಳ್ಳುವಾಗ, ಆತನು ಸುಳಿಗಳು, ಮತ್ತು ಬಂಡೆಗಳು, ಮತ್ತು ಕಳ್ಳುಸುಬುಗಳು ಇರುವಂತಹ ಒಂದು ದಡರಹಿತ ಸಮುದ್ರದಲ್ಲಿರುವವನಾಗಿದ್ದಾನೆ, ಮತ್ತು ಅಲ್ಲಿ ಸುರಕ್ಷಿತವಾಗಿ ಲಂಗರು ಹಾಕುವ ಸ್ಥಳವನ್ನು ಕಂಡುಕೊಳ್ಳುವದು *ಅಸಾಧ್ಯ*ವಾಗಿರುತ್ತದೆ."[17] ನಮ್ಮ ಸುತ್ತಲಿರುವ ಇತರರಿಗೆ ತಳಮಳಗೊಳ್ಳಬಹುದು, ಆದರೆ ನಾವು ಒಂದು ದೃಢವಾದ ನಂಬಿಕೆಯೊಂದಿಗೆ ಶಾಂತರಾಗಿರಬಲ್ಲೆವು.

ದೇವರ ಒಳ್ಳೇತನದಲ್ಲಿ ಪ್ರಾಚೀನ ಇಸ್ರಾಯೇಲ್ಯರ ಮೂರ್ಖತನ ಭರವಸೆಯ ಕೊರತೆಯ ಫಲಿತವೇನಾಗಿತ್ತೆಂದರೆ ಅವರು ದೇವರ **ವಿಶ್ರಾಂತಿ**ಯಲ್ಲಿ ಪ್ರವೇಶಿಸುವದಕ್ಕೆ ಸಾಧ್ಯವಾಗಲಿಲ್ಲ (ವ. 18). ಅವರಿಗಾದರೋ, ಕಾನಾನ್ ದೇಶವನ್ನು ಎಂದಿಗೂ ನೋಡದಿರುವಂತಾಗಿತ್ತು. ಅದರ ಅನ್ವಯವನ್ನು ನಮಗೆ ಮಾಡಿಕೊಳ್ಳುವಾಗ ನಮಗೆ ಪರಲೋಕವನ್ನು, ನಮ್ಮ ಅಂತಿಮ ವಿಶ್ರಾಂತಿಯನ್ನು ಪ್ರವೇಶಿಸುವದಕ್ಕೆ ವಿಫಲರಾಗುವದಕ್ಕೆ ಸಂಬಂಧಿಸಿರುತ್ತದೆ. ನಾವು ದೇವರ ವಾಕ್ಯದ ಸಂಪೂರ್ಣವಾದ ನಿಷ್ಕೃಷ್ಟತೆಯನ್ನು ಸಂಶಯಿಸಬಾರದು. **ತಿಳಿದುಕೊಳ್ಳುತ್ತೇವೆ** ಎಂಬ ಪದಗುಚ್ಛವನ್ನು ಬಳಸುವದರಲ್ಲಿ (ವ. 19), ಆತನ ವಾದವು ಸ್ವಯಂವ್ಯಕ್ತವಾಗಿರುತ್ತದೆ[18] ಎಂದು ಲೇಖಕನು ಊಹಿಸಿಕೊಂಡನೆಂಬುದು ಸ್ಪಷ್ಟವಾಗುತ್ತದೆ.

18ನೇ ವಚನದಲ್ಲಿ **ಅವಿಧೇಯರು** 19ನೇ ವಚನದಲ್ಲಿರುವ **ಅಪನಂಬಿಕೆಯಿಂದಲೇ** ಎಂಬುದಕ್ಕೆ ಸಮಾನವಾಗಿರುತ್ತದೆ. ಹೊಸ ಒಡಂಬಡಿಕೆಯು ಅನೇಕ ಸಾರಿ ವಿಧೇಯತೆಯನ್ನು ನಂಬಿಕೆಯೊಂದಿಗೆ ಮತ್ತು ಅವಿಧೇಯತೆಯನ್ನು ಅಪನಂಬಿಕೆಯೊಂದಿಗೆ ಸಮಾನಗೊಳಿಸುತ್ತದೆ. ಯೋಹಾನ 3:36ನೇ ವಚನವು "ನಂಬುವವನಿಗೆ" ಎಂಬುದನ್ನು "ಒಳಗಾಗದವನು" (ಅವಿಧೇಯನಾಗುವವನು) ಎಂಬುದರ ವಿರೋಧನ್ಯಾಸಗೊಳಿಸುತ್ತದೆ.[19] ಆತನ "ವಿಶ್ರಾಂತಿ"ಯನ್ನು ತಲುಪುವದಕ್ಕಾಗಿ ನಾವು ವಿಧೇಯರಾಗಿರುವದಕ್ಕೆ ಮತ್ತು ನಂಬಿಕೆಯಿಂದ ತುಂಬಿದವರಾಗಿರುವದಕ್ಕೆ ಪ್ರಯಾಸ ಪಡುತ್ತಲಿರೋಣ.

## ಅನ್ವಯಿಸುವಿಕೆ

### "ಪರಲೋಕದ ಕರೆ" (3:1)

ನಮ್ಮ ಕರೆಯುವಿಕೆಯು ನಮಗೆ ಸುವಾರ್ತೆಯ ಮೂಲಕ ಬಂದಿತು, ಮತ್ತು ಅದರ ಮೂಲಕ ನಾವು "ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಂಡೆವು" (2 ಥೆಸಲೋನಿಕ 2:13, 14). ಮೋಶೆಯು ಉರಿಯುವ ಪೊದೆಯ ಬಳಿಯಲ್ಲಿ ದೇವರಿಂದ ಒಂದು ನೇರವಾದ ಕರೆಯನ್ನು ಸ್ವೀಕರಿಸಿದನು (ವಿಮೋಚನಕಾಂಡ 3:1-6), ಆದರೆ ನಾವು ಅಂತಹ ಒಂದು ಕರೆಯನ್ನು ಎದುರುನೋಡಬಾರದು. ಅದ್ಭುತಕರವಾದ ಪ್ರಕಟನೆಯ ಯುಗವು ಶಾಸ್ತ್ರಗಳು ಪೂರ್ತಿಗೊಳ್ಳುವ ಮೂಲಕ ಅಂತ್ಯಗೊಂಡಿತು. ಬೈಬಲ್ ನಮ್ಮ ಅಗತ್ಯತೆಗಳನ್ನು ಪೂರ್ಣವಾಗಿ ಒದಗಿಸುತ್ತದೆ ಮತ್ತು "ದೇವರ ಮನುಷ್ಯ"ನನ್ನು ಸಕಲ ವಿಧವಾಗಿಯೂ ಬೋಧಿಸುವದಕ್ಕಾಗಿ ಸನ್ನದ್ಧಗೊಳಿಸುತ್ತದೆ (2 ತಿಮೊಥೆ 3:16, 17).

ಸುವಾರ್ತೆಯನ್ನು ಕೇಳಿ, ಕಿವಿಗೊಟ್ಟು, ಅದಕ್ಕೆ ವಿಧೇಯರಾಗುವಾಗ ಆ ಸುವಾರ್ತೆಯೇ ನಂಬಿಕೆಯ ಮೂಲಕ ರಕ್ಷಣೆಯನ್ನು ತರುವದಾಗಿರುತ್ತದೆ (ರೋಮಾ 10:17). ನಾವು "ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ" ಜೀವಿಸಬೇಕಾಗಿರುತ್ತದೆ (ಎಫೆಸ 4:1). ಸುವಾರ್ತೆಗೆ ಸರಿಯಾಗಿ ಜೀವಿಸುವದಕ್ಕೆ ವಿಫಲನಾಗುವವನು "ಅಯೋಗ್ಯವಾದ ರೀತಿಯಲ್ಲಿ"

ಜೀವಿಸುವವನಾಗಿರುತ್ತಾನೆ. ಸುವಾರ್ತೆಯು ಪರಲೋಕದಲ್ಲಿರುವ ನಮ್ಮ ಕರ್ತನಿಂದ ಬಂದದ್ದಾಗಿದೆ, ಮತ್ತು ಆ ಅರ್ಥದಲ್ಲಿ ನಾವು "ಪರಲೋಕದ ಕರೆ"ಯನ್ನು ಹೊಂದಿಕೊಂಡಿದ್ದೇವೆ. ಹೇಗೂ, ಇಂದು ಯಾವನೂ ಪವಿತ್ರಾತ್ಮನಿಂದ, ತಂದೆಯಿಂದ, ಅಥವಾ ಯೇಸುವಿನಿಂದ ಒಂದು ನೇರವಾದ ಕರೆಯನ್ನು ಸ್ವೀಕರಿಸುವದಿಲ್ಲ. ನಮಗೆ ಅಗತ್ಯವಿರುವ ಎಲ್ಲಾ ಎಚ್ಚರಿಕೆಗಳು ಮತ್ತು ಬುದ್ಧಿವಾದಗಳು ಶಾಸ್ತ್ರಗಳಲ್ಲಿರುತ್ತವೆ, ಮತ್ತು ನಾವು ಅವುಗಳಿಗೆ ಕಿವಿಗೊಡಬೇಕು. ವಾಕ್ಯಕ್ಕೆ ಕಿವಿಗೊಡದಿರುವದೆಂದರೆ ದೇವರ ಕರೆಯನ್ನು ಕಿವಿಯ ಮೇಲೆ ಹಾಕಿಕೊಳ್ಳದಿರುವದು ಎಂದಾಗುತ್ತದೆ.

### ಸಾಯುವ ತನಕವೂ ನಂಬಿಗಸ್ತರಾಗಿರುವದು (3:1)

ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತರಿಗೆ ಹಿಂಸೆಯಾಗುತ್ತಿದ್ದ ದಿನಗಳಲ್ಲಿ ಅವರು *Kurios Kaisar* ("ಕೈಸರನು ಕರ್ತನು") ಎಂದು ಒಪ್ಪಿಕೊಂಡರೆ ಅವರನ್ನು ಬಿಡುಗಡೆ ಮಾಡಲಾಗುವದೆಂದು ಹೇಳಲಾಗುತ್ತಿತ್ತು. ಒಬ್ಬ ವಿಗ್ರಹಾರಾಧಕ ಯಾಜಕನು ಕೆಲವರನ್ನು ದಂಡನೆಯನ್ನು ವಿಧಿಸುವದಕ್ಕೆ ಹೊತ್ತೊಯ್ಯುತ್ತಿದ್ದ ಸಾಗಣೆಯ ಬಂಡಿಯ ಬದಿಯಲ್ಲಿ ನಡೆಯುತ್ತಾ, "ಕೇವಲ ಒಂದೇ ಒಂದು ಚಿಟಿಕೆ ಧೂಪವನ್ನು ತೆಗೆದುಕೊಂಡು ಕರ್ತನೆಂದು ಕೈಸರಿಗೆ ನಿಷ್ಠೆಯನ್ನು ತೋರಿಸಿರಿ, ನೀವು ಬಿಡುಗಡೆಗೊಳಿಸಲ್ಪಡುವಿರಿ" ಎಂದು ಹೇಳುತ್ತಿದ್ದನು. ಅವರಲ್ಲಿ ಬಹತೇಕರು "*Kurios Christos* [ಕ್ರಿಸ್ತನು ಕರ್ತನು]" ಎಂದು ಪ್ರತ್ಯುತ್ತರ ಕೊಡುತ್ತಿದ್ದರು. ಈ ಚಿಕ್ಕದೆಂದು ತೋರುತ್ತಿದ್ದ ಆಚರಣೆಯಲ್ಲಿ ತಮ್ಮನ್ನು ಒಪ್ಪಿಸಿಕೊಳ್ಳುವ ಶೋಧನೆಯಯು ಅತ್ಯಂಥ ಬೃಹತ್ ಆಗಿರಬಹುದಾಗಿದೆ. ಒಬ್ಬನು ಹೀಗೆ ವಾದ ಮಾಡಬಹುದು, "ನಾನು ನನ್ನ ಬಾಯಿಂದ ಕೈಸರನನ್ನು ಒಪ್ಪಿಕೊಳ್ಳುತ್ತಿದ್ದಾಗ್ಯೂ, ಈಗಲೂ ನನ್ನ ಹೃದಯದಲ್ಲಿ ಕರ್ತನಾದ ಯೇಸುವೇ ನನ್ನ ಏಕೈಕ 'ನಾಯಕ' ಎಂದು ನಂಬುತ್ತೇನೆ." ಅದಕ್ಕೆ ತದ್ವಿರುದ್ಧವಾಗಿ, ಹೊರಗೆ ಒಪ್ಪಿಕೊಳ್ಳುವದು ಮತ್ತು ಹೃದಯದಲ್ಲಿರುವಂಥದ್ದು ನಂಬಿಕೆಗೆ ಅಥವಾ ಅರಿಕೆಯು ನಿಜವಾದದ್ದೆಂಬುದಕ್ಕೆ ತಾಳೆಯಾಗತಕ್ಕದ್ದು.

ಯೆಹೂದಿ ದೇವಜನರು, "ಪರಿಶುದ್ಧರಾದ ಸಹೋದರರೇ" ಎಂದು ಬುದ್ಧಿವಾದ ಹೇಳಲ್ಪಟ್ಟವರಾಗಿದ್ದು, ಅವರು ಯೆಹೂದಿಮತಕ್ಕೆ ಹಿಂದಿರುಗುವಂತೆ ಅಷ್ಟೇ ಪ್ರಮಾಣದ ದೊಡ್ಡ ಒತ್ತಡವನ್ನು ಎದುರಿಸಿದರು. ಬಹುಶಃ ಅವರಿಗೆ ಅದೇ ರೀತಿಯ ಆಯ್ಕೆಯನ್ನು ಕೊಟ್ಟಿರಬಹುದಾಗಿದೆ. ಕನಿಷ್ಠ, ತಮ್ಮ ಜೀವಗಳು ಗಂಡಾಂತರದಲ್ಲಿರುತ್ತವೆಂಬುದನ್ನು ಅವರು ಗ್ರಹಿಸಿಕೊಂಡಿರಬೇಕು. "ನಾವು ಪ್ರತಿಜ್ಞೆಮಾಡಿ ಒಪ್ಪಿಕೊಂಡಿರುವ ಮಹಾಯಾಜಕನಾದ" ಯೇಸು, ತಾನು ಯಾರಾಗಿದ್ದಾನೆಂಬುದನ್ನು ಒಪ್ಪಿಕೊಂಡಿದ್ದಕ್ಕೋಸ್ಕರ ಮರಣಿಸಬೇಕಾಯಿತು ಎಂಬುದನ್ನು ಲೇಖಕನು ಅವರಿಗೆ ಜ್ಞಾಪಿಸುತ್ತಾನೆ. ಖಂಡಿತವಾಗಿಯೂ, ಇದು ಅವರನ್ನು ಆತನ ಮಾದರಿ ಅನುಸರಿಸುವಂತೆ – ಅವಶ್ಯವಾದರೆ, ಮರಣಕ್ಕೊಳಗಾದರೂ – ಪ್ರೋತ್ಸಾಹವನ್ನು ಉಂಟು ಮಾಡಿರಬಹುದು.

ಸತ್ಯವೇನೆಂದರೆ, ಅವರು ಕ್ರಿಸ್ತನಿಗೆ ನಂಬಿಗಸ್ತರಾಗಿ ಉಳಿಯದಿದ್ದರೆ ಮರಣವನ್ನು ಅನುಭವಿಸುವ ಅತ್ಯಂಥ ದೊಡ್ಡ ಅಪಾಯದಲ್ಲಿರುತ್ತಿದ್ದರು! ಯೇಸು ಶೀಘ್ರದಲ್ಲಿ ಸಂಭವಿಸಲಿದ್ದ ಘಟನೆಗಳನ್ನು ಮುಂತಿಳಿಸಿದ್ದನು. ಮತ್ತಾಯ 24, ಮಾರ್ಕ 13, ಮತ್ತು ಲೂಕ 21ರಲ್ಲಿನ ಸೂಚನೆಗಳು ಕ್ರಿ.ಶ. 66ರಲ್ಲಿ ಬಂಡಾಯವು ಆರಂಭವಾಗಿ ರೋಮನ್ ಸೈನ್ಯವು ಯೆರೂಸಲೇಮನ್ನು ಸಮೀಪಿಸುತ್ತಿದ್ದಂತೆ ಸಂಭವಿಸುವದಕ್ಕೆ ಆರಂಭಗೊಂಡಿದ್ದವು. ಭಕ್ತಿಯುಳ್ಳ ಯೆಹೂದ್ಯರು ಪಟ್ಟಣದಲ್ಲಿ ಅಥವಾ ಹತ್ತಿರದಲ್ಲಿ ಉಳಿಯುತ್ತಿದ್ದರು, ಯೆರೂಸಲೇಮಿನಲ್ಲಿ ಸ್ವಲ್ಪ

ಕಾಲ ಸೈನ್ಯವು ಕಾಣಿಸಿಕೊಳ್ಳುವಿಕೆಯು ದೇವರಿಂದ ಬಿಡುಗಡೆ ಬರಲಿದೆ ಎಂಬುದಕ್ಕೆ ಸಂಕೇತವೆಂದು ಯೋಚಿಸುತ್ತಿದ್ದರು. ನಂಬಿಗಸ್ತರಾದ ಕ್ರೈಸ್ತರಿಗೆ ಅದಕ್ಕೆ ವಿರುದ್ಧವಾದದ್ದರ ಬಗ್ಗೆ ಗೊತ್ತಿತ್ತು. ಆದುಕೊಳ್ಳಲ್ಪಟ್ಟವರಿಗೋಸ್ಕರವಾಗಿ "ದಿನಗಳು ಕಡಿಮೆ ಮಾಡಲ್ಪಡುವವು" ಎಂದು ಯೇಸು ಹೇಳಿದ್ದನು (ಮತ್ತಾಯ 24:22). ರೋಮನ್ನರ ಆಕ್ರಮಣವನ್ನು ಸ್ವಲ್ಪ ಹೊತ್ತು ನಿಲ್ಲಿಸಿದ್ದರಿಂದ ಪಟ್ಟಣವು ನಾಶಗೊಳಿಸಲ್ಪಡುವದಕ್ಕೆ ಮುಂಚೆ ಅಲ್ಲಿಂದ ಓಡಿ ತಪ್ಪಿಸಿಕೊಳ್ಳಲು ಅವರಿಗೊಂಡು ಅವಕಾಶವನ್ನು ಒದಗಿಸಿತ್ತು.

ಸದವಕಾಶಗಳು ಬರುತ್ತವೆ ಮತ್ತು ಹೋಗುತ್ತವೆ. ಕರ್ತನ ಬರೋಣದ ವೇಳೆ ನಾವು ಅಪನಂಬಿಗಸ್ತರಾಗಿ ಕಂಡು ಬರುವದಾದರೆ, ಪುನಃ ಮಂದೆಯನ್ನು ಸೇರಿಕೊಳ್ಳುವದು ಮತ್ತು ವಿಮೋಚಿಸಲ್ಪಟ್ಟವರ ಸಂಗಡ ಮಹಿಮೆಗೆ ಕೊಂಡೊಯ್ಯಲ್ಪಡುವದಕ್ಕೆ ಬಹಳ ತಡವಾಗಿ ಹೋಗುವದು. ಹಳೆಯ ವ್ಯವಸ್ಥೆಯಲ್ಲಿದ್ದ ಯಾವದೇ ಸೌಂದರ್ಯದ ಶ್ರೇಯಸ್ಸು ಕ್ರಿಸ್ತನಿಗೆ ಸಲ್ಲಬೇಕು, ಹೊರತು ಮೋಶೆಗಲ್ಲ ಎಂಬುದನ್ನು ಯೆರೂಸಲೇಮಿನಿಂದ ಓಡಿ ಹೋದ ಕ್ರೈಸ್ತರಿಗೆ ಜ್ಞಾಪಿಸುವ ಅಗತ್ಯವಿತ್ತು.

## "ಆತನನ್ನು ನೇಮಿಸಿದಾತನು" (3:2)

"ನೇಮಿಸಿದಾತನು" ಎಂಬುದಕ್ಕಿರುವ ποιέω (*poieō*) ಎಂಬುದಾಗಿದ್ದು, ಇದರರ್ಥವು "ಮಾಡುವದು" ಎಂದಾಗಿರಬಲ್ಲದು. ನಾಲ್ಕನೆಯ ಶತಮಾನದ ಒಂದು ಪಂಥವಾಗಿರುವ Arians (ಎರಿಯನ್ನರು), ಈ ಪದವನ್ನು ಹಿಡಿದುಕೊಂಡು ಅದನ್ನು "ಮಾಡಿದನು" ಎಂದು ಅನುವಾದಿಸಿದರು, ಯೇಸುವು ತಂದೆಯೊಂದಿಗೆ ಶಾಶ್ವತವಾಗಿ ಅಸ್ತಿತ್ವದಲ್ಲಿರುವವನಲ್ಲ, ಆತನು "ಮಾಡಲ್ಪಟ್ಟ" ಅಥವಾ "ಸೃಷ್ಟಿಸಲ್ಪಟ್ಟಿರುವ" ಜೀವಿಯೆಂದು ವಾದಿಸುತ್ತಿದ್ದರು. ಅದು ಹೆಚ್ಚು ಅಕ್ಷರಶಃ ಅನುವಾದವೆಂಬಂತೆ ತೋರುತ್ತದೆ. ಪ್ರಾಚೀನ ವ್ಯಾಖ್ಯಾನಕಾರರು ಈ ಹೇಳಿಕೆಯನ್ನು ಕ್ರಿಸ್ತನ ಮಾನವ ಬದಿಗೆ ಅನ್ವಯ ಮಾಡಿದ್ದು ಮತ್ತು ಆತನ ನಿತ್ಯವಾದ ದೇವತ್ವಕ್ಕೆ ಅನ್ವಯಗೊಳಿಸದಿರುವದು ಸರಿಯಾಗಿಯೇ ಇರುತ್ತದೆ (ನೋಡಿರಿ ಯೋಹಾನ 1:1-3). ಯೇಸು ಸಕಲ ಕಾರ್ಯಗಳ ಸೃಷ್ಟಿಯಲ್ಲಿ ಪಾಲ್ಗೊಂಡನಾದ್ದರಿಂದ (ಯೋಹಾನ 1:3), ಆತನು ಸ್ವತಃ ಒಬ್ಬ ಸೃಷ್ಟಿಸಲ್ಪಟ್ಟ ಜೀವಿಯಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಇದು ಯೇಸುವಿನ ಪೂರ್ಣ ದೇವತ್ವವನ್ನು ಅಲ್ಲಗಳೆದ ಹದಿನಾರನೆಯ ಶತಮಾನದ ತತ್ವಜ್ಞಾನಿಯಾದ Sociniusನನ್ನು ತಪ್ಪೆಂದು ಖಂಡಿಸುತ್ತದೆ. ಅಲ್ಲದೆ ಯೇಸುವು ಸೃಷ್ಟಿಸಲ್ಪಟ್ಟ ಜೀವಿ ಮತ್ತು ಯಾವಾಗಲೂ ತಂದೆಗೆ ಅಧೀನದಲ್ಲಿದ್ದನು ಎಂದು ಹೇಳುವ Arian ಬೋಧನೆಗೆ ವಿರುದ್ಧವಾಗಿರುತ್ತದೆ.

ಖಂಡಿತವಾಗಿಯೂ, ಕ್ರಿಸ್ತನಿಗೆ ಒಂದು ದೇಹವು "ಸಿದ್ಧಮಾಡಿ ಕೊಡಲ್ಪಟ್ಟಿತ್ತು," ಇಲ್ಲವಾದರೆ ಆತನು ನಮ್ಮ ಪಾಪಗಳಿಗೋಸ್ಕರ ಮರಣಿಸಿರುವದಕ್ಕೆ ಆಗುತ್ತಿರಲಿಲ್ಲ (ಇಬ್ರಿಯ 10:5). ದೈವಿಕ ಮಗನು ಮರಣಕ್ಕೆ ಅಧೀನವಾದ ರೂಪದಲ್ಲಿ ಭೂಮಿಗೆ ಬರದೆ ಹೋಗಿದ್ದರೆ ಆತನು ನಮಗೋಸ್ಕರ ಮರಣಿಸುವದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇದರ ಕಾರಣದಿಂದಾಗಿ, ಆತನು ನಮ್ಮೊಂದಿಗೆ ಪಾಲುಗಾರನೆಂಬುದನ್ನು ನಾವು ತಿಳುಕೊಳ್ಳುವಂತಾಗಲು ಆತನು ನಮ್ಮ ನೋವು ಹಾಗೂ ಬಾಧೆಗಳನ್ನು ಅನುಭವಿಸುವದಕ್ಕೆ ಶಕ್ತನಾದನು (2:14). ಅಲ್ಲದೆ ನಾವು "ಆತನ ಪರಿಶುದ್ಧತೆಯಲ್ಲಿ ಪಾಲುಗಾರರು" ಆಗುತ್ತೇವೆ (12:10).

## "ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿದ್ದಾನೆ" (3:4)

ಮೊದಲ ಕಾರಣದ ತತ್ವವು "ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿದ್ದಾನೆ" ಎಂಬ

ಹೇಳಿಕೆಯಲ್ಲಿ ಅಡಕವಾಗಿರುತ್ತದೆ. ಈ ಲೋಕವಾಗಲಿ, ಅಥವಾ ಒಬ್ಬ ವ್ಯಕ್ತಿಯಾಗಲಿ ತನ್ನಷ್ಟಕ್ಕೆ ತಾನೇ ಅಸ್ತಿತ್ವಕ್ಕೆ ಬಂದಿರುವದಕ್ಕೆ ಸಾಧ್ಯವಿಲ್ಲ. ಮನುಷ್ಯನು ಕೇವಲ ಆಕಸ್ಮಿಕವಾಗಿ ರೂಪಗೊಂಡನೆಂಬ ವಾದವನ್ನು ಒಬ್ಬನು ಅಂಗೀಕರಿಸಿಕೊಳ್ಳುವವನಿಗೆ ಬಹಳಷ್ಟು ಸಮಸ್ಯೆಗಳು ಎದುರಾಗುತ್ತವೆ. ಯಾವದೇ ಜೀವಿಸುವ ಸಂಗತಿಯು ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬರುವದು ಅಸಾಧ್ಯವಾದದ್ದೆಂಬುದನ್ನು ಗಣಿತಜ್ಞರ ಲೆಕ್ಕಾಚಾರಗಳು ತೋರಿಸುತ್ತವೆ. ಆದದರಿಂದ, ಯಾರೋ ಒಬ್ಬ "ಕಟ್ಟುವಾತನು" ನಮ್ಮನ್ನು ಮತ್ತು ಪ್ರಪಂಚವನ್ನು ನಿರ್ಮಿಸಿದನು. Cornell Universityಯಲ್ಲಿ ಖಗೋಳಶಾಸ್ತ್ರಜ್ಞನಾಗಿರುವ Carl Saganನು, ವಿಶ್ವದ ಆಚೆ ಯಾವದೂ ಅಸ್ತಿತ್ವದಲ್ಲಿರುವದಿಲ್ಲ – ಅಗೋಚರವಾದ ಜಗತ್ತಿನಲ್ಲಿ ದೇವರಿರುವ ಬಗ್ಗೆ ಯಾವದೇ ಪುರಾವೆ ಇರುವದಿಲ್ಲವೆಂದು – ನಂಬಿದ್ದನು. ಬಹಳಷ್ಟು ವಿಕಾಸವಾದಿಗಳಂತೆಯೇ, ಮನುಷ್ಯನು ಎಲ್ಲಾ ಜೀವಿಗಳಿಗಿಂತಲೂ ಅತ್ಯಂಥ ಜ್ಞಾನಿ ಮತ್ತು ಬುದ್ಧಿಶಕ್ತಿಯುಳ್ಳವನೆಂದು ಯೋಚಿಸುವವನಾಗಿ ಆತನು ಸಹ ಒಬ್ಬ ಮಾನವವಾದಿಯಾಗಿದ್ದನು. ಆತನ ಮನವೋಲಿಕೆಯ ಕಲ್ಪನೆಗಳಲ್ಲಿ ಇನ್ನೊಂದು ಸಂಗತಿಯೆಂದರೆ ನಮ್ಮ ಸೌರಮಂಡಲದ ಆಚೆಯಲ್ಲಿರುವ ಜೀವಿಗಳು ಇನ್ನು ಅಧಿಕವಾದ ಬುದ್ಧಿಶಕ್ತಿಯುಳ್ಳವುಗಳಾಗಿರಬಲ್ಲವು ಎಂಬುದೆ. ಎಷ್ಟು ವಿಚಿತ್ರ! Saganನು ಕೇವಲ ಯಾವದೇ ಆಕಸ್ಮಿಕತೆಯಿಂದ ಸಂಭವಿಸಿರುವದಕ್ಕೆ ಸಾಧ್ಯವಿಲ್ಲದ ಮನುಷ್ಯನೊಳಗಿರುವ ಕ್ಲಿಷ್ಟತೆಗಳನ್ನು ನೋಡಿದ್ದಾಗಿದ್ದರೆ, ಆತನು ತನ್ನ ಕುರಿತ ಪ್ರಪಂಚದ ವಿನ್ಯಾಸ ಮತ್ತು ತನ್ನ ಸ್ವಂತ ಮಾನವ ಶರೀರದ ರಚನೆಯಲ್ಲಿ ದೇವರನ್ನು ಕಂಡುಕೊಂಡಿರಬಹುದಿತ್ತು. ಸೃಷ್ಟಿಕರ್ತನಲ್ಲಿ ನಂಬಿಕೆಯಿಡುವದಕ್ಕೆ ಇದ್ದ ಪುರಾವೆಗಳು ಆತನ ಸುತ್ತಲಿನಲ್ಲೇ ಇದ್ದವು.

### "ನಾವು ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ . . ." (3:6)

ಒಬ್ಬ ವ್ಯಕ್ತಿಯು ದೇವರ ಕೃಪೆಯಿಂದ ಬಿದ್ದು ಹೋಗುವದಾದರೆ, ಆತನು ಎಂದಿಗೂ ರಕ್ಷಣೆಯನ್ನು ಹೊಂದಿರಲಿಲ್ಲ ಎಂಬುದನ್ನು ಅದು ಸಾಭಿತುಪಡಿಸುತ್ತದೋ? ಕೃಪೆಯಿಂದ ಬಿದ್ದು ಹೋಗುವ ವ್ಯಕ್ತಿಯು ಮೊಟ್ಟಮೊದಲು ಕ್ರಿಸ್ತನವನಾಗಿ ನಿಜವಾಗಿಯೂ ಪರಿವರ್ತನೆಯನ್ನನು ಹೊಂದಿರಲೇ ಇಲ್ಲ ಮತ್ತು ರಕ್ಷಣೆ ಹೊಂದುವ ಅವಕಾಶವನ್ನು ಹೊಂದಿರಲೇ ಇಲ್ಲ ಎಂದು ಹೇಳುವದಕ್ಕೆ ಕೆಲವೊಂದು ವೈಶಿಷ್ಟ್ಯವಾದ ನಿರ್ಧಾರಗಳಿಗೆ ಬರಬೇಕಾಗುತ್ತದೆ: ಪೇತ್ರನು ಹೇಳಿದಂತೆ, ಮೊದಲು "ಲೋಕದ ಮಲೀನತ್ವಗಳಿಗೆ ತಪ್ಪಿಸಿಕೊಂಡವನೇ" ಆಗಿರದವನು *ತಿರಿಗಿ* ಅವುಗಳಲ್ಲಿ ಸಿಕ್ಕಿಕೊಳ್ಳುವದಕ್ಕೆ ಮತ್ತು "ಸೋತುಹೋಗುವದಕ್ಕೆ" ಸಾಧ್ಯವೇ ಇರುವದಿಲ್ಲ (2 ಪೇತ್ರ 2:20-22). ಆತನು ಆ ಮಲೀನತ್ವಗಳಿಗೆ ಎಂದಿಗೂ ತಪ್ಪಿಸಿಕೊಳ್ಳಲೇ ಇಲ್ಲವಾದ್ದರಿಂದ "ತಿರಿಗಿ" ಬಿದ್ದು ಹೋಗುವದು ಎಂಬುದಿರುವದಿಲ್ಲ. 3:12ರಲ್ಲಿರುವ "ಬಿಟ್ಟು ಹೋಗುವ" ಎಂಬ ಮಾತು ಬಳಸುವದಕ್ಕೆ ಅರ್ಥಹೀನವಾಗುವದು. ಅಂಥ ವ್ಯಕ್ತಿಯು ಲೋಕದ ಪಾಪಭರಿತ ಮಲೀನವನ್ನು ತಪ್ಪಿಸಿಕೊಳ್ಳುವವನಂತೆ "ಕಂಡಿರಬೇಕು" ಅಷ್ಟೇ ಮತ್ತು ಬಿದ್ದು ಹೋಗುವಂತೆ "ಕಾಣಿಸಿಕೊಂಡಿರಬೇಕು," ಆದರೆ ಪೇತ್ರನು "ತಪ್ಪಿಸಿಕೊಂಡವರು" ಎಂದು ಹೇಳುತ್ತಾನೆ! ಒಂದು ಅನಿಶ್ಚಿತವಾದ ರಕ್ಷಣೆಯು ಅಲ್ಪ ಆದರಣೆಯನ್ನು ಒದಗಿಸುವದು.

"ದೇವಜನರ ದೃಢನಿಷ್ಠೆಯ" ("ಒಮ್ಮೆ ರಕ್ಷಿಸಲ್ಪಟ್ಟರೆ ಯಾವಾಗಲೂ ರಕ್ಷಿಸಲ್ಪಟ್ಟಂತೆ") ಸಿದ್ಧಾಂತವು 6bನೇ ವಚನದ ಶರತ್ತುಬದ್ಧ ಹೇಳಿಕೆಯನ್ನು ಅನಾವಶ್ಯಕಗೊಳಿಸುವದು. ಖಂಡಿತವಾಗಿಯೂ, ಕೆಲವು ಹೀಗೆ ಪ್ರತ್ಯುತ್ತರ ನೀಡುವರು, "ನಮ್ಮ ಹೊಸಜನ್ಮದ ಅನುಭವವು ನಮ್ಮ ರಕ್ಷಣೆಗೆ ಪುರಾವೆಯಾಗಿದೆ." ನಾನು ಆಗಾಗ್ಗೆ ನನ್ನ ವಿದ್ಯಾರ್ಥಿಗಳಿಗೆ, "ನಿಮಗೆ ರಕ್ಷಣೆಯ ಕುರಿತು ನಿಶ್ಚಯತೆಯಿದೆ ಎಂದು ಅನ್ನಿಸುವದಾದರೆ, ನಿಮಗೆ ಒಂದು

ಅನಿಸಿಕೆಯಿರುತ್ತದೆಂಬುದಕ್ಕೆ ಸಂಪೂರ್ಣವಾದ ಪುರಾವೆಯು ಇರುತ್ತದೆ! ನಿಮಗಿರುವದು ಅದಷ್ಟೇ!" ಎಂದು ಹೇಳುತ್ತಿರುತ್ತೇನೆ. ಈಗ ನಾವು ನಮ್ಮ ರಕ್ಷಣೆಯ ನಿಶ್ಚಯತೆಯನ್ನು ಹೊಂದಿರಬಲ್ಲೆವು, ಆದರೆ ನಾವು ಆತ್ಮೀಕ ಪರಿಪಕ್ವತೆಯಲ್ಲಿ ನಿರಂತರವಾಗಿ ಬೆಳೆಯುತ್ತಲಿರಬೇಕು (2 ಪೇತ್ರ 1:5-11). ನಾವು "ನಮ್ಮ ಧೈರ್ಯವನ್ನೂ ನಮ್ಮ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ದೃಢವಾಗಿ ಹಿಡಿದುಕೊಂಡವರಾದಾಗ" ಮತ್ತು ಹಿಡಿದುಕೊಳ್ಳುವದಾದರೆ ಮಾತ್ರವೇ ನಿತ್ಯಜೀವದ ಸಂಪೂರ್ಣವಾದ ವಾಸ್ತವಿಕತೆಯನ್ನು ಪಡೆದುಕೊಳ್ಳುವೆವು (ವ. 6). ಅದರ ಮಧ್ಯದಲ್ಲಿ, ನಾವು "ನಿತ್ಯಜೀವದ ನಿರೀಕ್ಷೆ"ಯಲ್ಲಿ ಇರುತ್ತೇವೆ (ತೀತನಿಗೆ 1:2). ದೇವರ ವಾಗ್ದಾನದಲ್ಲಿ ನಮ್ಮ ನಂಬಿಕೆಯಿಟ್ಟಿರುವದು ನಮಗೆ ಬರಲಿರುವ ಜೀವನದ ನಿಶ್ಚಯತೆಯನ್ನು ಕೊಡುತ್ತದೆ. ಈ ನಿರೀಕ್ಷೆಯನ್ನೇ ತನ್ನ ವಾಚಕರು ಎಸೆದು ಬಿಡುವರೆನೋ ಎಂದು ಲೇಖಕನು ಹೆದರಿದ್ದನು (10:23; 6:11). ನಾವು ನಿರೀಕ್ಷೆಯ ಪೂರ್ಣ ನಿಶ್ಚಯತೆಯನ್ನು ಸಾಕಾರಗೊಳಿಸಿಕೊಳ್ಳಲು "ಕಡೇ ತನಕ" ಎಚ್ಚರದಿಂದಿರತಕ್ಕದ್ದು.

"ನಾವು ಬಿದ್ದುಹೋದರೆ, ನಾವು ನಿಜವಾಗಿಯೂ ಪರಿವರ್ತನೆಗೊಂಡಿರಲೇ ಇಲ್ಲ" ಎಂಬ ಭಾವನೆಗೆ ಸಂಬಂಧಿಸಿದಂತೆ, ಯೋಹಾನ 15:1-6ರ ವಾಕ್ಯಭಾಗವು ಯೇಸುವಿಗೆ ಅಂತಹ ಯಾವದೇ ಸಿದ್ಧಾಂತದ ಬಗ್ಗೆ ಏನನ್ನೂ ಬಲ್ಲವನಾಗಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಆ ವಚನಗಳು ಫಲ ಕೊಡದಿರುವ ಕಾರಣದಿಂದ "ದ್ರಾಕ್ಷಾ ಬಳ್ಳಿಯಲ್ಲಿ"ದ್ದ ಒಬ್ಬನನ್ನು ಕಡಿದು ಸುಡುವದಕ್ಕೆ ಬೆಂಕಿಯಲ್ಲಿ ಹಾಕುವ ಕುರಿತು ಮಾತಾಡುತ್ತವೆ. ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ಇರಲೇ ಇಲ್ಲವಾದರೆ, ನಿಜವಾಗಿಯೂ ಪರಿವರ್ತನೆಗೊಂಡವನು, ಮತ್ತು ನಿಜವಾಗಿಯೂ ಒಬ್ಬ ಕ್ರೈಸ್ತನೇ ಆಗಿರಲಿಲ್ಲವಾದರೆ, "ದ್ರಾಕ್ಷಾ ಬಳ್ಳಿಯಲ್ಲಿ" ಇರುವಿಕೆಯ ಚಿತ್ರಣವು ಅರ್ಥಹೀನವಾಗುತ್ತದೆ. ಅದೇ ರೀತಿಯಲ್ಲಿ, ಫಲಕೊಡದವನಾಗುವ ಕ್ರೈಸ್ತನು ನಾಶನಕ್ಕೆ ಹೋಗಬಲ್ಲನು! "ಮತಭ್ರಷ್ಟತೆಯ ಅಸಾಧ್ಯತೆ"ಯ ಅನುಯಾಯಿಗಳು "ಆತನು ಕೇವಲ ದ್ರಾಕ್ಷಾ ಬಳ್ಳಿಯಲ್ಲಿ ಇರುವಂತೆ ಕಾಣಿಸುತ್ತಾನಷ್ಟೇ" ಎಂದು ಹೇಳಿಕೊಳ್ಳತಕ್ಕದ್ದು, ಯೋಹಾನ ಸುವಾರ್ತೆಯಲ್ಲಿನ ವಾಕ್ಯಭಾಗವಂತೂ ಹಾಗೆ ಹೇಳುವದಿಲ್ಲ.

ಕೆಲವರು ದೇವರ ವಾಗ್ದಾನವನ್ನು ಎಷ್ಟೊಂದು ಒತ್ತಿ ಹೇಳುತ್ತಾರೆ ಮತ್ತು ಮನುಷ್ಯನ ವಿಫಲತೆಗಳನ್ನು ನಿರ್ಲಕ್ಷಿಸುತ್ತಾರೆಂದರೆ ಅವರು ಯಾವದೇ ಶರತ್ತುಗಳಿರುವದಿಲ್ಲವೇನೋ ಎಂಬಂತೆ ಮಾತಾಡುತ್ತಾರೆ. ಇನ್ನೊಂದು ಅತಿರೇಕದ ಅಭಿಪ್ರಾಯವು ಕ್ರೈಸ್ತರನ್ನು ರಕ್ಷಿಸಲ್ಪಟ್ಟವರಾಗಿ ಕಾಪಾಡುವದಕ್ಕೆ ಯಾವದೇ ದೈವಿಕ ಶಕ್ತಿಯು ಇರುತ್ತದೆಂಬುದನ್ನು ಹೆಚ್ಚುಕಡಿಮೆ ನಿರಾಕರಿಸುವಷ್ಟರ ಮಟ್ಟಿಗೆ ಮಾನವನ ಬಲಹೀನತೆಗಳನ್ನು ಒತ್ತಿ ಹೇಳುವದಾಗಿದೆ. ನಾವು "ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯನ್ನು . . . ದೊರೆಯಬೇಕೆಂದು ದೇವರು [ನಮ್ಮನ್ನು] ತನ್ನ ಬಲದಿಂದ ಕಾಯುತ್ತಾನೆ" ಎಂದು ಪೇತ್ರನು ಹೇಳುತ್ತಾನೆ (1 ಪೇತ್ರ 1:5). ಆ ನಂಬಿಕೆಯನ್ನು ಕಾಪಾಡಿಕೊಂಡು ಹೋಗುವ ಹೊರತು, ನಾವು ಈಗ ಸಹ ನಿತ್ಯಜೀವದ ಮೇಲಿನ ನಮ್ಮ ಹಿಡಿತವನ್ನು ಕಳಕೊಳ್ಳುವೆವು. ನಾವು ವಿಶ್ವಾಸಿಸುವ, ವಿಧೇಯತೆಯುಳ್ಳ ವಿಶ್ವಾಸಿಗಳಾಗಿ ಮುಂದುವರೆಯುವದಾದರೆ ಕ್ರಿಸ್ತನಲ್ಲಿ ಭದ್ರವಾಗಿರುತ್ತೇವೆ. ಈಗ ನಮಗೆ "ನಿತ್ಯಜೀವ" ಇರುತ್ತದೆಂದು ಹೇಳುವಂತಹ ಯೋಹಾನ 5:24ರ ರೀತಿಯ ವಾಕ್ಯಭಾಗಗಳು, "ನಂಬುವದು" ಎಂಬುದಕ್ಕೆ ಗ್ರೀಕ್ ಕಾಲರೂಪವೊಂದನ್ನು ಬಳಸುತ್ತವೆ, ಅದು ವರ್ತಮಾನಕಾಲ ಮುಂದುವರೆದ ಕ್ರಿಯೆಯನ್ನು ಸೂಚಿಸುತ್ತದೆ. ನಮ್ಮ ನಂಬಿಕೆಯು ಮುಂದುವರೆಯುವಷ್ಟು ಕಾಲ ನಾವು ಸುಭದ್ರವಾಗಿರುವದನ್ನು ಮುಂದುವರೆಸುತ್ತೇವೆ. ರಕ್ಷಕನ ಕೈಯೊಳಗಿಂದ ಕಸಿದುಕೊಳ್ಳಲ್ಪಡಲು ಸಾಧ್ಯವಿಲ್ಲದವರು ಆತನ "ಹಿಂದೆ ಬರುವವರು" (ಇದು

ಸಹ ವರ್ತಮಾನಕಾಲ ಸಕ್ರಿಯ ನಿಶ್ಚಯಾರ್ಥಕ ರೂಪದಲ್ಲಿರುತ್ತದೆ; ಯೋಹಾನ 10:27, 28). ನಾವು ಎಡವಿ ಬೀಳದಂತೆ ಆತ್ಮೀಕವಾಗಿ ಬೆಳೆಯುವ ಮತ್ತು 2 ಪೇತ್ರ 1:5-11ರಲ್ಲಿರುವ "ಕ್ರೈಸ್ತೀಯ ಸದ್ಗುಣಗಳನ್ನು" ಕೂಡಿಸಿಕೊಳ್ಳುವ ಅಗತ್ಯವಿರುತ್ತದೆ! ವಾಕ್ಯದ ನಂಬಿಗಸ್ತರಾದ ಸೇವಕರಾಗಿ, ನಂಬಿಕೆಯನ್ನು ಮಾತ್ರವಲ್ಲದೆ ದೇವರ ದೈವಿಕ ಸಹಾಯವನ್ನು ಕಾಪಾಡಿಕೊಳ್ಳುವದಕ್ಕೆ ಮನುಷ್ಯನಿಗೆ ಇರುವ ಜವಾಬ್ದಾರಿಯ ಕುರಿತು ಉಪದೇಶಿಸಬೇಕು.

"ಒಮ್ಮೆ ರಕ್ಷಣೆ ಹೊಂದಿದರೆ, ಎಂದಿಗೂ ಬೀಳುವದಿಲ್ಲ" ಎಂದು ಬೋಧಿಸುವವರು ಶಾಸ್ತ್ರಗಳಲ್ಲಿರುವ ಸರಳವಾದ ಹೇಳಿಕೆಯನ್ನು ತಿರಸ್ಕರಿಸುವದಕ್ಕೆ ನಡಿಸಲ್ಪಟ್ಟವರು. ಉದಾಹರಣೆಗೆ, ಗಲಾತ್ಯ 5:4ನೇ ವಚನವು ಕೆಲವರು "ಕೃಪಾಶ್ರಯೊಳಗಿಂದ ಬಿದ್ದುಹೋದರು" ಎಂದು ಹೇಳುತ್ತದೆ. ಯಾವಾಗೆಲ್ಲಾ ಒಂದು ಸಿದ್ಧಾಂತವು ಬೈಬಲಿನ ವಾಕ್ಯಭಾಗವೊಂದರ ಸರಳವಾದ ಅರ್ಥವನ್ನು ಉಲ್ಲಂಘಿಸುತ್ತದೋ, ಅದು ಸತ್ಯವಾಗಿರಲು ಸಾಧ್ಯವಿಲ್ಲ! Philip Edgcumbe Hughes ಹೀಗೆ ಬರೆಯುತ್ತಾನೆ, "ಆದರೆ ಒಬ್ಬನ ನಂಬಿಕೆಯನ್ನು ಅರಿಕೆ ಮಾಡುವದು ಆತನ ಜೀವನದ ಗುಣಮಟ್ಟಕ್ಕೆ ತದ್ವಿರುದ್ಧವಾಗಿರುವಾದರೆ ತಾನು ನಿಜಕ್ಕೂ ಕ್ರೈಸ್ತನೋ ಎಂಬುದಾಗಿ ತನ್ನನ್ನು ಪರೀಕ್ಷಿಸಿಕೊಳ್ಳಬೇಕೆಂಬ ಅರ್ಥವನ್ನಂತೂ ಅದು ಕೊಡುತ್ತದೆ [2 ಕೊರಿಂಥ 13:5]."[20] ಆತನ ತಾತ್ಪರ್ಯವು ಏನಾಗಿತ್ತೆಂದರೆ ಒಬ್ಬನು ಈಗ ಸದ್ಯಕ್ಕೆ "ನಂಬಿಕೆಯಲ್ಲಿ" ಇದ್ದಾನೋ ಎಂದು ಪರೀಕ್ಷಿಸಿಕೊಳ್ಳಬೇಕು ಎಂಬದೆ. ಪೌಲನು ತಾನು ಬರೆಯುವ ಕಾಲದಲ್ಲಿ ನಂಬಿಕೆಯಲ್ಲಿದ್ದಂಥ ಕೊರಿಂಥದ "ದೇವಜನರಿಗೆ" ಬರೆಯುತ್ತಿದ್ದಾನೆ (1 ಕೊರಿಂಥ 1:2; 2 ಕೊರಿಂಥ 1:1). ಈ ಸಹೋದರರು ಎಂದಿಗೂ ಕ್ರಿಸ್ತನಲ್ಲಿ ಇರುವವರಾಗಿ ಇರಲೇ ಇಲ್ಲವೆಂಬ ಅರ್ಥದಲ್ಲಿ ಆತನು ಹೇಳಿರುವದಕ್ಕೆ ಸಾಧ್ಯವಿಲ್ಲ. ಆತನು "ದೇವ ಮನುಷ್ಯ" ಎಂಬ ಬಿರುದು ಕೊಡುವದರಲ್ಲಿ ಅವರಲ್ಲಿ ಯಾವನನ್ನಾದರೂ ಅಥವಾ ಎಲ್ಲರನ್ನೂ ಅಪಾರ್ಥಮಾಡಿಕೊಂಡಿದ್ದನೋ? ಅವರು ಎಂದಿಗೂ ಬೀಳದವರಾಗಿದ್ದಲ್ಲಿ, ಆತನು ಅವರಿಗೆ "ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ" ಎಂದು ಏಕೆ ಅವರಿಗೆ ಆಜ್ಞಾಪಿಸಿದನು (2 ಕೊರಿಂಥ 13:5)? ಆತನು ಏಕೆ ಅವರಿಗೆ, "ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ" ಎಂದು ಹೇಳಿದನು (1 ಕೊರಿಂಥ 10:12)?

## ಪವಿತ್ರಾತ್ಮನು ಹೇಗೆ ಮಾತಾಡುತ್ತಾನೆ (3:7-11)

ಪವಿತ್ರಾತ್ಮನು ತನ್ನ ಸ್ವವಾಕ್ಯದ ಮೂಲಕ ಕಾರ್ಯಮಾಡುತ್ತಾನೆಂಬುದನ್ನು ಸ್ಪಷ್ಟವಾಗಿ ನೋಡುತ್ತೇವೆ. "ಪವಿತ್ರಾತ್ಮನು ಹೇಳುವ ಪ್ರಕಾರ" ಎಂಬ ವರ್ತಮಾನಕಾಲರೂಪವು (ವ. 7) ಈಗಲೂ ಆತನು ತನ್ನ ವಾಕ್ಯದ ಮೂಲಕ ಮಾತಾಡುತ್ತಾನೆಂಬುದನ್ನು ತೋರಿಸುತ್ತದೆ. ವರ್ತಮಾನಕಾಲರೂಪವು "ಈಹೊತ್ತು" ಎಂಬುದಕ್ಕೆ ಸಂಬಂಧಿಸಿದ ಬುದ್ಧಿವಾದಕ್ಕೆ ಬಲವನ್ನು ಒದಗಿಸುತ್ತದೆ.

ಅನೇಕ ಸಾರಿ ಒಬ್ಬನು ಸುವಾರ್ತೆಯನ್ನು ಕೇಳಿಸಿಕೊಂಡು ಅದರಿಂದ ಆಳವಾಗಿ ಪರಿಣಾಮಕ್ಕೊಳಗಾಗುತ್ತಾನೆ, ಆದಾಗ್ಯೂ ಆತನು ಅದಕ್ಕೆ ವಿಧೇಯನಾಗಲು ನಿರಾಕರಿಸುವಂತದ್ದು ಸಂಭವಿಸುತ್ತಲೇ ಇರುತ್ತದೆ. ಆತನು ನಂತರದ ವರ್ಷಗಳಲ್ಲಿ ಸುವಾರ್ತೆಗೆ ಸ್ಪಂದಿಸುವದು ಇನ್ನಷ್ಟು ಕಠಿಣವಾಗುವದು. ಕ್ರಿಸ್ತನ ಪಾಪಪ್ರಾಯಶ್ಚಿತ್ತದ ಕೊಡುಗೆಯನ್ನು ಮೊಂಡುತನದಿಂದ ತಿರಸ್ಕರಿಸುವವನು ಒಂದು ದಿನ, ಇನ್ನೂ ಈ ಜೀವನದಲ್ಲಿರುವ ವೇಳೆ ಹಿಂದಿರುಗಿ ಬರಲಾರದ ಹಂತವನ್ನು ತಲುಪಬಹುದಾಗಿದೆ (ಇಬ್ರಿಯ 10:26). "ನಿಮ್ಮ

ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ" (ವ. 8) ಎಂಬದು ಬೇಡಿಕೊಳ್ಳುವಿಕೆಯಾಗಿದೆ. ನಾವು ಸುವಾರ್ತೆಯ ಬುದ್ಧಿವಾದಗಳನ್ನು ತಿರಸ್ಕರಿಸುವ ಮೂಲಕ ನಮ್ಮನ್ನು ಕಠಿಣ ಮಾಡಿಕೊಳ್ಳುತ್ತೇವೆ. ಕೆಲವರು ದೇವರ ವಾಕ್ಯವನ್ನು ವಿರೋಧಿಸುವದಕ್ಕೆ ಮತ್ತು ಪಾಪದಲ್ಲಿ ಜೀವಿಸುವದನ್ನು ಮುಂದುವರೆಸುವದಕ್ಕಾಗಿ ಇಚ್ಛಾಪೂರ್ವಕವಾಗಿಯೇ ತಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳುತ್ತಾರೆ.

ಇಲ್ಲಿ ಉಲ್ಲೇಖಿಸಲಾಗಿರುವ ಕೀರ್ತನೆ 95 ಪ್ರೇರಿತವಾಗಿತ್ತು ಮತ್ತು ಅವರ ಅಪನಂಬಿಗಸ್ತರಾದ ಮೂಲಪಿತೃಗಳು ಜೀವಿಸಿದ್ದ ರೀತಿಯಲ್ಲಿ ಜೀವಿಸಬಾರದೆಂಬ ಕಠೋರವಾದ ಎಚ್ಚರಿಕೆಯನ್ನು ಕೊಡುವದಕ್ಕೆ ಇಬ್ರಿಯರಿಗೆ ಪತ್ರಿಕೆಯಲ್ಲಿ ತಿಳಿಸಲ್ಪಟ್ಟಾಗ ಸಹ ಅದು ಪ್ರೇರಿತವಾಗಿತ್ತು. ಪವಿತ್ರಾತ್ಮನು ಈಗಲೂ ವಾಕ್ಯದ ಮೂಲಕ ಮಾತಾಡುತ್ತಾನೆ ಮತ್ತು ಕಾರ್ಯಮಾಡುತ್ತಾನೆಂಬುದನ್ನು ಹೊಸ ಒಡಂಬಡಿಕೆಯು ತೋರಿಸುತ್ತದೆ. ಒಬ್ಬನು ಶಾಸ್ತ್ರಗಳಲ್ಲಿ ದಾಖಲಿಸಲ್ಪಟ್ಟಿರುವ ಪವಿತ್ರಾತ್ಮನ ಸಂದೇಶವನ್ನು ಗಮನವಿಟ್ಟು ಕೇಳಿಸಿಕೊಳ್ಳುವಾಗ ದೇವರ ಸಂದೇಶವನ್ನು ಗ್ರಹಿಸಿಕೊಳ್ಳುವದಕ್ಕೆ ಸಕಲ ಸಹಾಯವನ್ನು ಪಡೆದುಕೊಳ್ಳುವವನಾಗಿರುತ್ತಾನೆ. ಯೆಹೂದಿ ನಾಯಕರು ಸ್ತೇಫನನ ಪ್ರಸಂಗವನ್ನು ಧಿಕ್ಕರಿಸಿದಾಗ ಅವರು ಪವಿತ್ರಾತ್ಮನನ್ನು ಎದುರಿಸಿದವರಾಗಿದ್ದರು (ಅಪೊಸ್ತಲರ ಕೃತ್ಯಗಳು 7:51). ಪ್ರಕಟನೆ 2 ಮತ್ತು 3 ಅಧ್ಯಾಯಗಳು ವಾಚಕರಿಗೆ "ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕೇಳಲಿ" ಎಂದು ಆದೇಶಿಸಿದವು. ಆಗ ಸತ್ಯವಾಗಿದ್ದ ಪ್ರಕಾರವೇ, ಬರೆಯಲ್ಪಟ್ಟಿರುವದಕ್ಕೆ ನಾವು ಕಿವಿಗೊಡಬೇಕೆಂಬುದು ಈ ದಿನವೂ ಅಷ್ಟೆ ಸತ್ಯವಾಗಿದೆ (ಪ್ರಕಟನೆ 2:7, 11, 17, 29; 3:6, 13, 22). ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಕೊಡಲ್ಪಟದ್ದಿರುವ ನಿರ್ದೇಶನಗಳು ಸಭೆಯ ಪ್ರತಿಯೊಂದು ಪೀಳಿಗೆಗೂ ಅಗತ್ಯವಿರುತ್ತದೆ. ಪ್ರತಿಯೊಂದು ಸಭೆಗೆ ಕೊಡಲ್ಪಟ್ಟ ಸಂದೇಶವು ಆ ಅಸ್ತಿತ್ವದಲ್ಲಿದ್ದ ಎಲ್ಲಾ ಸಭೆಗಳ ಪ್ರಯೋಜನಾರ್ಥವಾಗಿತ್ತು, ಮಾತ್ರವಲ್ಲದೆ ಇಂದು ಪ್ರಕಟನೆ ಪುಸ್ತಕದ ಏಳು ಪತ್ರಿಕೆಗಳನ್ನು ಓದುವವರ ಪ್ರಯೋಜನಾರ್ಥವಾಗಿಯೂ ಇರುತ್ತದೆ.

ಪವಿತ್ರಾತ್ಮನು ತನ್ನ ಪ್ರಕಟಿಸಲ್ಪಟ್ಟ ಮತ್ತು ಲಿಖಿತ ವಾಕ್ಯದಲ್ಲಿ ಮಾತಾಡುತ್ತಾನೆ, ಅದನ್ನು ನಾವು ಈಗಲೂ ಕೇಳಿಸಿಕೊಳ್ಳಬಹುದು, ಅರ್ಥಮಾಡಿಕೊಳ್ಳಬಹುದು, ಮತ್ತು ವಿಧೇಯರಾಗಬಹುದು. ನಮಗೆ ಸತ್ಯವನ್ನು ತಿಳಿದುಕೊಳ್ಳುವ ಬಯಕೆಯಿದ್ದರೆ ಅದನ್ನು ಮಾಡುವದಕ್ಕೆ ನಮಗೆ ವಿಶೇಷ ಸಹಾಯದ ಅಗತ್ಯವಿಲ್ಲ. ನಾವು ಜ್ಞಾನಿಗಳಾಗಿರುವದಕ್ಕೆ ಬಯಸಿದರೆ, ಕರ್ತನ ಚಿತ್ತವೇನೆಂಬುದನ್ನು ಅರ್ಥಮಾಡಿಕೊಳ್ಳುವೆವು (ಎಫೆಸ 5:17); ಅದು ಅರ್ಥಮಾಡಿಕೊಳ್ಳಬೇಕೆಂಬ ಆಜ್ಞೆಯಾಗಿರುತ್ತದೆ! "ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ" (ವ. 8) ಎಂಬ ಆಜ್ಞೆಯು ಅನೇಕ ಸಾರಿ ಉಲ್ಲಂಘಿಸಲ್ಪಡುತ್ತದೆ. ಜನರು ಹೀಗೆ ಹೇಳುತ್ತಾರೆ, "ನಮಗೆ ಬೈಬಲ್ ಅರ್ಥಮಾಡಿಕೊಳ್ಳುವದಕ್ಕೆ ಸಾಧ್ಯವಿಲ್ಲ!" ಇಲ್ಲ, ಅವರಿಗೆ ಅದು ಹೇಳುವದನ್ನು ಕೈಕೊಂಡು ನಡೆಯುವದಕ್ಕೆ ಇಷ್ಟವಿರುವದಿಲ್ಲ, ಆದ್ದರಿಂದ ಅವರು ಅದರ ಅರ್ಥವನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸುವದಿಲ್ಲ. ಅವರಿಗೆ ಯಾವದು ಅರ್ಥವಾಗುತ್ತದೋ ಅದನ್ನು ಅವರು ಮಾಡುವದಕ್ಕೆ ಬಯಸುವದಿಲ್ಲ! ಅಜ್ಞಾನವು ಅಜ್ಞಾನವನ್ನು ಹುಟ್ಟಿಸುತ್ತದೆ. ನಾವು ಕೇಳಿಸಿಕೊಳ್ಳಲು ನಿರಾಕರಿಸುವಾಗ, ನಾವು ಕ್ರಮೇಣದಲ್ಲಿ ಕೇಳಿಸಿಕೊಳ್ಳಲು ಅತ್ಯಂಥ ತಡವಾಗಿ ಹೋಗುವಷ್ಟರ ತನಕ ಹೆಚ್ಚು ಕಠಿಣ ಹೃದಯಿಗಳಾಗುತ್ತೇವೆ. ಅಷ್ಟರ ಹೊತ್ತಿಗೆ ಆತ್ಮೀಕವಲ್ಲದ ಕಸವು ಸತ್ಯದ ತಾಜಾ ಪರಮಳವನ್ನು ಕೊಂದಿರುತ್ತದೆ.

### "ನೀವು ಈಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ" (3:7-11)

ಇಬ್ರಿಯ 3ನೇ ಅಧ್ಯಾಯದಲ್ಲಿ "ಈಹೊತ್ತು" ಎಂಬುದನ್ನು ಸತತವಾಗಿ ಒತ್ತಿ ಹೇಳಿರುವಿಕೆಯು ನಮ್ಮ ಬೋಧನೆಯ ಮೇಲೆ ಬಹು ದೊಡ್ಡ ಪ್ರಭಾವವನ್ನು ಬೀರತಕ್ಕದ್ದು. "ನನ್ನ ಚಿತ್ತಕ್ಕೆ ವಿಧೇಯರಾಗಲು ನಾಳೆ ತನಕ ಕಾಯಿರಿ" ಎಂದು ದೇವರು ಎಂದಿಗೂ ಆಜ್ಞಾಪಿಸಲಿಲ್ಲ. ಆತನು ಇದರ ನಂತರ ಈಹೊತ್ತು ಕಾರ್ಯಪ್ರವೃತ್ತರಾಗುವದಕ್ಕೆ ಕಾರಣಗಳ ಪಟ್ಟಿಯನ್ನು ಕೊಡುತ್ತಾನೆ: (1) ಬಹಳಷ್ಟು ಮಂದಿ ಈಗಾಗಲೆ ಸಾಕಷ್ಟು ದೀರ್ಘಕಾಲದ ವರೆಗೆ ಕಾಯ್ದುಕೊಂಡಿದ್ದಾರೆ. (2) ನಾಳೆ ಎಂಬುದು ಎಂದಿಗೂ ಬರದೆ ಇರಬಹುದು. (3) ಕಾಲವು ಗತಿಸಿದಂತೆ ಪಶ್ಚಾತ್ತಾಪ ಪಡುವದು ಮತ್ತು ವಿಧೇಯರಾಗುವದು ಹೆಚ್ಚೆಚ್ಚು ಕಠಿಣಗೊಳ್ಳುತ್ತದೆ. (4) ದೇವರು ಈಗಲೇ ವಿಧೇಯರಾಗಬೇಕೆಂದು ಆಜ್ಞಾಪಿಸಿದ್ದಾನೆ (2 ಕೊರಿಂಥ 6:2). (5) ವಿಧೇಯನಾಗಬೇಕೆಂಬ ಒಬ್ಬನ ತುಡಿತವು ಸಮಯ ಕಳೆದ ಹಾಗೆ ಕಡಿಮೆಗೊಳ್ಳುವದು. (6) ಅನಂತರದಲ್ಲಿ ವಿಧೇಯರಾಗುವದು ಮೊದಲಿನಷ್ಟು ಪ್ರಯೋಜನಕರವಾಗಿ ಇರಲಾರದೆ ಹೋಗಬಹುದು. (7) ವಿಧೇಯರಾಗುವದಕ್ಕೆ ಈಹೊತ್ತು ಎಂಬುದಕ್ಕಿಂತಲೂ ಉತ್ತಮ ಸಮಯವು ಬೇರೊಂದು ಎಂದಿಗೂ ಇರಲಾರದು.[21]

### ಅಪನಂಬಿಕೆಯುಳ್ಳ ಕೆಟ್ಟ ಹೃದಯ (3:12, 13)

ಒಂದು ಕೆಟ್ಟ ಹೃದಯವು ಅಪನಂಬಿಕೆಯಿಂದ ಸೃಷ್ಟಿತಗೊಂಡಿರುತ್ತದೆ ಹೊರತು ಕೆಲವರು ಹೇಳುವ ಪ್ರಕಾರ ಒಂದು "ಪಾಪಭರಿತ ಸ್ವಭಾವ"ದಿಂದಲ್ಲ. ಯಾವನೂ ಸಹ ತಾನು ದೇವರ ಅಸ್ತಿತ್ವದ ಪುರಾವೆಗಳನ್ನು ತಿರಸ್ಕರಿಸುವ ಕಾರಣದಿಂದ ತನ್ನನ್ನು ಬುದ್ಧಿಶಕ್ತಿಯುಳ್ಳವನೆಂದು ಪರಿಗಣಿಸಿಕೊಳ್ಳಬಾರದು. ಆತನ ಹೃದಯವು "ಕೆಟ್ಟದ್ದು" ಆಗಿರುವದರಿಂದ ಆತನು ಹಾಗೆ ಮಾಡುತ್ತಾನೆ, ಮತ್ತು ತನ್ನ ಹೃದಯವನ್ನು ದೇವರ ಕಡೆಗೆ ತಿರುಗಿಸಿಕೊಳ್ಳದ ಕಾರಣ ಆತನು ನಿರಂತರವಾಗಿ ಕೆಳಮುಖವಾಗಿ ಸಾಗುತ್ತಾನೆ. ಉದಾಹರಣೆಗೆ, ಒಬ್ಬ ಮನುಷ್ಯನು ಕಾಮೋದ್ರೇಕ ಸಾಹಿತ್ಯ, ಸಿನಿಮಾಗಳಲ್ಲಿ ಮಗ್ನನಾಗುವಾಗ, ಆತನ ದುರಿಚ್ಛೆಗಳು ಹೆಚ್ಚಾಗುವವನು. ಒಬ್ಬನ ಹೃದಯವು ಪಾಪದಿಂದ ಹೆಚ್ಚೆಚ್ಚಾಗಿ ಕಠಿಣಗೊಳ್ಳುತ್ತಾ ಸಾಗುತ್ತದೆ. ಬಿದ್ದುಹೋಗುವಿಕೆಯ ಪ್ರಕ್ರಿಯೆಯನ್ನು ಹೀಗೆ ಬಣ್ಣಿಸಲಾಗಿರುತ್ತದೆ:

> 12 ಮತ್ತು 13 ವಚನಗಳು ಜೊತೆಯಾಗಿ ಯಾವಾಗ ಪರಸ್ಪರ ಪ್ರಬೋಧಿಸಿಕೊಳ್ಳುವಿಕೆಯು ಇರುವದಿಲ್ಲವೋ – ಆರಂಭದಲ್ಲಿ ಯಾರೇ ನೋಡುವದಾರೆ ಕಾಣಿಸುವಂತಹ ಒಂದು ಪ್ರಕ್ರಿಯೆ – ಆಗ ಒಬ್ಬ ಮನುಷ್ಯನ ಆಳದೊಳಗೆ ನಡೆಯುವಂತಹ ಪ್ರಕ್ರಿಯೆಯನ್ನು ಬಣ್ಣಿಸುತ್ತವೆ. ಮೊದಲ ಅಪನಂಬಿಕೆಯ ಕೀಟಾಣುವನ್ನು ಮೊಳಕೆಯೊಡೆಯುವದಕ್ಕೆ ಅನುಮತಿಸಲಾಗುತ್ತದೆ, ನಂತರ ಕೆಟ್ಟ ಹಾಗೂ ಬಂಡಾಯವೇಳುವ ಆಲೋಚನೆಗಳು ಹರಡಿಕೊಳ್ಳುತ್ತವೆ. ಇವುಗಳು ಕ್ರಮೇಣದಲ್ಲಿ ಇಡೀ ಮನೋಭಾವದ ಮೇಲೆ ಪ್ರಾಬಲ್ಯ ಸಾಧಿಸುವವು, ಸಂಪೂರ್ಣ ಗುಣಸ್ವಭಾವವು ಬದಲಾಗುವ ತನಕ ಇದು ಸಾಗುವದು . . . ದೇವರಿಗೆ ಆತನ ಪ್ರಾಥಮಿಕವಾದ ಪ್ರತ್ಯುತ್ತರವು ಇಲ್ಲ ಎಂದಾಗಿರುತ್ತದೆ. ಈಗ ಆತನು ತನ್ನ ದೀಕ್ಷಾಸ್ನಾನದ ವೇಳೆಯಲ್ಲಿ ಅರಿಕೆ ಮಾಡಿದ ಅಧೀನಪಡಿಸಿಕೊಳ್ಳುವ ಹೌದು ಎಂಬದು ಇನ್ನು ಮೇಲೆ ಇರುವದಿಲ್ಲ.[22]

ಅದರ ಫಲಿತವು "ಬಿಟ್ಟುಹೋಗುವಿಕೆ" (ἀφίστημι, *aphistēmi*), ಅದು ಜೀವಸ್ವರೂಪನಾದ ದೇವರಿಂದ ವಿಮುಖರಾಗಬೇಕೆಂಬ ಉದ್ದೇಶಪೂರ್ವಕವಾದ ಇಂಗಿತವನ್ನು ಸೂಚಿಸುತ್ತದೆ. ಅದೊಂದು ಮತಭ್ರಷ್ಟತೆಯ ಕ್ರಿಯೆಯಾಗಿರುತ್ತದೆ, ಅದರಲ್ಲಿ ಒಬ್ಬ ವ್ಯಕ್ತಿಯು

ಒಂದು ಕಾಲದಲ್ಲಿ ಹಿಡಿದುಕೊಂಡದ್ದನ್ನು ತೊರೆದು ಬಿಡುವ ವೈಯಕ್ತಿಕ ಕ್ರಿಯೆಯು ಸೇರಿರುತ್ತದೆ. ಅದು ದೇವರ ಮತ್ತು ಕ್ರಿಸ್ತನ ವಿರುದ್ಧವಾಗಿ ಹಿಂದಿರುಗಿ ಬರುವ ಉದ್ದೇಶವಿಲ್ಲದೆ ಬಂಡಾಯವೇಳುವದಾಗಿರುತ್ತದೆ.

ಬಿಟ್ಟುಹೋಗುವ ಅಪಾಯದಲ್ಲಿರುವ ಜನರಿಗೆ ಜೊತೆಯ ಕ್ರೈಸ್ತರಿಂದ ಪ್ರತಿನಿತ್ಯವೂ ಎಚ್ಚರಿಸಲ್ಪಡುವ ಅಗತ್ಯವಿರುತ್ತದೆ (ವ. 13). ಇದು ಹಿಂದೆಂದಿಗಿಂತಲೂ ಇಂದು ಸಭೆಯಲ್ಲಿ ಹೆಚ್ಚು ಅಗತ್ಯವಾಗಿರುತ್ತದೆ. ಲೋಕದ ಪ್ರಲೋಭನೆಗಳು ಮನಸ್ಸುಗಳನ್ನು ವಂಚಿಸುತ್ತವೆ ಮತ್ತು ಮುಂಚೆ ಸಮರ್ಪಣೆಯುಳ್ಳವರಾಗಿದ್ದ ಜನರು ಈಗ ಇನ್ನು ಮೇಲೆ ನಮಗೆ ಸಭೆಯಾಗಲಿ ಅಥವಾ ಕ್ರಿಸ್ತನಾಗಲಿ ಅಗತ್ಯವಿಲ್ಲವೆಂದು ಯೋಚಿಸುವ ತನಕ ಅವರ ಹೃದಯಗಳನ್ನು ಕಠಿಣಗೊಳಿಸುತ್ತದೆ. ಅದರ ಪರಿಣಾಮಕ್ಕೊಳಗಾದವರು ಇನ್ನು ಮೇಲೆ ಸರಿಯಾಗಿ ನೋಡಲಾರರು, ಯಾಕೆಂದರೆ ಅದು ಒಂದು ರೀತಿಯಲ್ಲಿ ಆತ್ಮದ ದೃಷ್ಟಿನರವನ್ನು ಕತ್ತರಿಸಿದಂತೆ ಆಗಿರುತ್ತದೆ.[23] ನಾವು ನಮಗೆ ಪ್ರೋತ್ಸಾಹಗೊಳಿಸುವ ಅನ್ಯೋನ್ಯತೆಯ ಅಗತ್ಯವಿಲ್ಲವೆಂದು ಯೋಚಿಸಬಹುದು, ಆದರೆ ಹೃದಯವು ಅದಕ್ಕಾಗಿ ಹಂಬಲಿಸುತ್ತದೆ.

## ದಿನದಿಂದ ದಿನಕ್ಕೆ ಪ್ರೋತ್ಸಾಹಿಸುವದು (3:13)

ಒಂದು ಸ್ಥಳೀಯ ಸಭೆಯೊಂದಿಗೆ ಸಂಬಂಧವಿಟ್ಟುಕೊಳ್ಳದೆ, ಒಬ್ಬ ಏಕಾಂಗಿ ಕ್ರೈಸ್ತನಾಗಿರಬೇಕೆಂದು ಬಯಸುವ ವ್ಯಕ್ತಿಯು ತನ್ನ ಅಭಿಪ್ರಾಯಕ್ಕೆ ಇಬ್ರಿಯರಿಗೆ ಪತ್ರಿಕೆಯಲ್ಲಿ ಯಾವದೇ ಬೆಂಬಲವನ್ನು ಕಾಣುವದಿಲ್ಲ. ದೇಹದಲ್ಲಿರುವ ಜೊತೆಯ ಸದಸ್ಯರಿಂದ ಸಿಕ್ಕುವ ಪ್ರೋತ್ಸಾಹವು ಒಬ್ಬನು ಆರಂಭದಲ್ಲಿ ಕಾಣುವದಕ್ಕಿಂತಲೂ ಅಧಿಕವಾದ ಸಹಾಯವಾಗಿರುತ್ತದೆ. ದೇವಜನರೊಂದಿಗೆ ನಿಯತಕ್ರಮವಾಗಿ ಆರಾಧನೆಯನ್ನು ಮಾಡುವವರಾದ ನಾವು ನಮ್ಮ ಜೀವಿತಗಳಲ್ಲಿ ಬೇರೆಯವರ ಪ್ರಭಾವವನ್ನು ಲಕ್ಷಿಸದೆ ಸಹ ಇರಬಹುದಾಗಿದೆ. ಯಾರು ಏಕಾಂಗಿಯಾಗಿ ನಿಲ್ಲುವದಕ್ಕೆ ಸಾಧ್ಯ? ಯೇಸುವು "*ದೇಹವಾಗಿ* ಆರಾಧಿಸುವದರ" ಮಹತ್ವವನ್ನು ಬಲ್ಲವನಾಗಿದ್ದನು ಮತ್ತು ಅದನ್ನು ಒದಗಿಸುವದಕ್ಕೆ ಸಭೆಯನ್ನು ಪ್ರತಿಷ್ಠೆಗೊಳಿಸಿದನು. ನಮಗೆ ಸ್ನೇಹಿತರಿಂದ ಮತ್ತು ಜೊತೆಯ ಕ್ರೈಸ್ತರಿಂದ ನಿಯತಕ್ರಮವಾದ ಮತ್ತು ನಿರಂತರವಾದ ಪ್ರೋತ್ಸಾಹ ಸಿಕ್ಕಲಿಲ್ಲವಾದರೆ ನಾವು "ಪಾಪದಿಂದ ಮೋಸಹೋಗು ಕಠಿಣರಾಗಿ" ಹೋಗಬಹುದು.

"ಪ್ರೋತ್ಸಾಹಿಸಿರಿ [ಎಚ್ಚರಿಸಿರಿ]" ಎಂಬುದಕ್ಕೆ ಗ್ರೀಕ್ ಪದವು παρακαλέω (*parakaleō*), ಇದು ಒಂದು ಬಲವಾದ ಪ್ರೋತ್ಸಾಹಗೊಳಿಸುವಿಕೆ ಎಂಬುದನ್ನು ಸೂಚಿಸುತ್ತದೆ. ಅದು ಸೈನಿಕರಲ್ಲಿ ಧೈರ್ಯವನ್ನು ಪ್ರಚೋದಿಸುವದಕ್ಕೆ ಒಬ್ಬ ಗ್ರೀಕ್ ಸೇನಾಧಿಪತಿಯಿಂದ ಕೊಡಲ್ಪಟ್ಟ ಒಂದು ಆದೇಶವನ್ನು ಬಣ್ಣಿಸುವದಾಗಿದೆ. ಈ ವಿಧದಲ್ಲಿ ಉತ್ತೇಜನಗೊಳಿಸಲ್ಪಟ್ಟ ಬಳಿಕ, ಸೈನಿಕರು ಹೆಚ್ಚು ವಿರೋಚಿತವಾಗಿ ಯುದ್ಧ ಮಾಡುತ್ತಿದ್ದರು.

"ಎಷ್ಟು ಸಾರಿ ಸಭೆಯ ಸದಸ್ಯರು ಯಾವದೇ ಪ್ರೋತ್ಸಾಹ ಅಥವಾ ಬುದ್ಧಿವಾದವಿಲ್ಲದ ಕಾರಣ ಜೊತೆಯ ಸದಸ್ಯನೊಬ್ಬನು ದಾರಿ ತಪ್ಪಿಹೋಗುವದನ್ನು ಕಾಣುತ್ತಾರೆ!"[24] ನಾವು ಅನುದಿನವೂ ನಮ್ಮ ಸಹೋದರರು ಮತ್ತು ಸಹೋದರಿಯರನ್ನು ಪ್ರೋತ್ಸಾಹಿಸಬೇಕು. ದೇವರು ಜೊತೆಯಿರುವವರಾಗಿ, ನಾವು ಅಂತ್ಯವನ್ನು ಆರಂಭದಿಂದಲೇ ನೋಡಬಲ್ಲೆವು; ನಾವು ಮುಂದೆ ಹೊಂದಲಿರುವ ಮಹಿಮೆಗೆ ಹೋಲಿಸಿದರೆ ನಮ್ಮ ಈಗಿನ ಕಷ್ಟಗಳು ಅಲ್ಪವೇ ಆಗಿರುತ್ತವೆ (2 ಕೊರಿಂಥ 4:16-18). ಆತನು ತನ್ನನ್ನು ಪ್ರೀತಿಸುವವರ "ಹಿತಕ್ಕಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲಗೊಳಿಸುತ್ತಾನೆ" (ರೋಮಾ 8:28). ಈ ಕಾರ್ಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವದು

ನಮ್ಮ ಜೀವಿತದಲ್ಲಿ ಅತ್ಯಂಥ ಅಗ್ರಮಾನ್ಯ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ನಮಗೆ ಅವುಗಳನ್ನು ಎಷ್ಟು ಸಾರಿ ಜ್ಞಾಪಕಪಡಿಸಿಕೊಂಡರೂ ಅದು ಅಧಿಕವಾಗುವದಕ್ಕೆ ಸಾಧ್ಯವಿಲ್ಲ. ಒಂದು ಕುಟುಂಬವು ಒಟ್ಟಾಗಿ ಆರಾಧನೆಯನ್ನು ಮಾಡುವಾಗ, ಅದು ವಿಚ್ಛೇಧನದಿಂದ ಮುರಿದು ಬೀಳುವ ಸಾಧ್ಯತೆಯು ಅತ್ಯಂಥ ಕಡಿಮೆಯಾಗಿರುತ್ತದೆ. ಒಬ್ಬ ತಂದೆಯು ಆರಾಧನೆಗೋಸ್ಕರ ಸಭೆಯ ಕೂಟಕ್ಕೆ ಕುಟುಂಬವನ್ನು ನಿಯತಕ್ರಮವಾಗಿ ಕರೆದುಕೊಂಡು ಹೋಗುವಾಗ, ಮಕ್ಕಳು ಬಾಲಾಪರಾಧಕ್ಕಾಗಿ ನ್ಯಾಯಲಯಕ್ಕೆ ಕರೆದುಕೊಂಡು ಹೋಗಲ್ಪಡುವ ಸಾಧ್ಯತೆಯು ಇರುವದಿಲ್ಲ.

ಭೂಮಿಯ ಮೇಲೆಯೇ ಅತ್ಯಂಥ ಶ್ರೇಷ್ಠವಾದ ಅನ್ಯೋನ್ಯತೆಯಲ್ಲಿ ದೇವರ ವಾಕ್ಯದ ಮೇಲೆ ಧ್ಯಾನವನ್ನು ಮಾಡುವದು ನಂಬಿಕೆಯ ಮೂಲಕ ಭಾರವನ್ನು ತೆಗೆದು ಹಾಕುವದಾಗಿದೆ. ಮೊದಲ ಶತಮಾನದ ಯೆಹೂದಿ ಕ್ರೈಸ್ತ ಶಿಷ್ಯನು ಅಬ್ರಹಾಮನಲ್ಲಿ ತಮ್ಮ ಸಹೋದರರ ಜೊತೆಗಿನ ಸಂಬಂಧದಿಂದ ಕಡಿದುಕೊಂಡವನಾಗಿರಬಹುದು ಅಥವಾ ಬಹಿಷ್ಕಾರಕ್ಕೊಳಗಾಗುವ ಬೆದರಿಕೆ ಒಳಗಾಗಿರಬಹುದು, ಆದರೆ ಆತನ ಮುಂಚಿನ ನಂಬಿಕೆಯ ಬದಲಾಗಿ ಈಗ ಇದ್ದ ನಂಬಿಕೆಯು ಅದೆಲ್ಲಕ್ಕಿಂತ ಬೆಲೆಯುಳ್ಳದ್ದನ್ನಾಗಿ ಮಾಡಿತ್ತು.

## ಕ್ರಿಸ್ತನಲ್ಲಿ ಪಾಲುಗಾರರು (3:14)

"ಕ್ರಿಸ್ತನಲ್ಲಿ ಪಾಲುಗಾರರಾಗಿರುವದು" ಎಂಥ ಒಂದು ಆಶೀರ್ವಾದವಾಗಿರುತ್ತದೆ! 14ನೇ ವಚನದಲ್ಲಿನ ಪದಗುಚ್ಛವು "ಕ್ರಿಸ್ತನೊಂದಿಗೆ" ಅಥವಾ "ಕ್ರಿಸ್ತನಲ್ಲಿ" ಎಂದು ಅನುವಾದಿಸಲ್ಪಟ್ಟಿದ್ದರೂ ಸರಿಯೇ, ಅಥವಾ "ಕ್ರಿಸ್ತನ" ಎಂದಿದ್ದರೂ ಸರಿಯೇ, ಅದೇನೂ ಅಷ್ಟು ಮಹತ್ವವಲ್ಲ ಯಾಕೆಂದರೆ ಯೇಸುವಿನೊಂದಿಗೆ ಮಾತ್ರವೇ ನಾವು ನಿತ್ಯವಾದ ಪ್ರಭಾವದಲ್ಲಿ ಪಾಲುಗಾರರಾಗುತ್ತೇವೆಂಬುದನ್ನು ಪ್ರತಿಯೊಂದು ಪದಗುಚ್ಛವು ವಿವರಿಸುವದಾಗಿದೆ. ಈ ವಚನವು ನಮ್ಮ ಕರ್ತನಾಗಿರುವ ಕ್ರಿಸ್ತನ ಸಂಗಡದ ಆತ್ಮೀಕ ಐಕ್ಯತೆಯನ್ನು ಸೂಚಿಸುತ್ತದೆ. ಕೆಲವರು ಸಿದ್ಧಾಂತಿಕ ವಿಷಯಗಳನ್ನು ಅಲಕ್ಷ್ಯ ಮಾಡುವದಾದರೆ ಅಥವಾ ಒಂದು ಪ್ರಶ್ನೆಯನ್ನು ಒಂದು "ತಿರುಳಿನ ವಿಷಯ"ವನ್ನಾಗಿ ಮಾಡಿ, ಅದೇ ವೇಳೆಯಲ್ಲಿ ಇತರ ಕಳಕಳಿಗಳನ್ನು "ಅಪ್ರಧಾನ" ಅಥವಾ "ಅಪ್ರಾಮುಖ್ಯ" ಎಂದು ತೀರ್ಪುಮಾಡುವ ತನಕ ನಾವು "ಕ್ರಿಸ್ತನಲ್ಲಿ ಪಾಲುಗಾರರಾಗಿ" ಎಂದಿಗೂ ಐಕ್ಯತೆಯನ್ನು ಹೊಂದುವದಕ್ಕೆ ಸಾಧ್ಯವಿಲ್ಲ. ಈ ವಿಧವಾದ ಯೋಚಿಸುವಿಕೆಯು ವೈಯಕ್ತಿಕ ಮತ್ತು ಒಬ್ಬನು ತಾನು ಇಷ್ಟ ಪಡುವದನ್ನು ಆರಿಸಿಕೊಂಡು ದೇವರ ಕೇಳಿರಬೇಕಾಗಿತ್ತೆಂಬ ಕುರಿತ ಅವನ ಸ್ವಂತ ಅಭಿಪ್ರಾಯಗಳಿಗೆ ಹೊಂದಿಕೆಯಾಗದ್ದನ್ನು ಬಿಟ್ಟು ಬಿಡುವದರಲ್ಲಿ ಫಲಿತಗೊಳ್ಳುತ್ತದೆ.

ನಿಜವಾದ ಐಕ್ಯತೆಯನ್ನು ಹೊಂದಬೇಕಾದರೆ, ನಾವು ಮೊದಲು ಕ್ರಿಸ್ತನು ನೇಮಿಸಿದ ದಾರಿಯಲ್ಲಿ – ವಿಧೇಯತೆಯುಳ್ಳ ನಂಬಿಕೆ ಮತ್ತು ದೀಕ್ಷಾಸ್ನಾನ (ಗಲಾತ್ಯ 3:26, 27) – ಕ್ರಿಸ್ತನೊಳಗೆ ಪ್ರವೇಶಿಸಬೇಕು. ನಾವು ನಂಬಿಕೆಯ ಆ ಮೂಲಭೂತವಾದ ಅಸ್ತಿವಾರವನ್ನು ಅಂಗೀಕರಿಸಿಕೊಳ್ಳುವದಾದರೆ ಮತ್ತು ಅದನ್ನು ಹಿಡಿದುಕೊಳ್ಳುವದಾದರೆ, ನಾವು ನಮ್ಮ ರಕ್ಷಕನೊಂದಿಗೆ ಮತ್ತು ಕ್ರಿಸ್ತನಲ್ಲಿರುವ ನಮ್ಮ ಸಹೋದರರು ಹಾಗೂ ಸಹೋದರಿಯ ಸಂಗಡ ಸಂಪೂರ್ಣ ಒಂದಾಗುವ ದಾರಿಯಲ್ಲಿಯೇ ಸಾಗುತ್ತಿರುವವರಾಗುತ್ತೇವೆ. ನಾವು ಬೆಳಕಿನಲ್ಲಿ ನಡೆಯುವಾಗ ಬೇರೆಯವರೊಂದಿಗೆ "ಅನ್ಯೋನ್ಯತೆ"ಯನ್ನು ಸಹ ಹೊಂದುವವರಾಗುತ್ತೇವೆ, ಮತ್ತು ಯೇಸುವಿನ ರಕ್ತವು ನಿರಂತರವಾಗಿ ನಮ್ಮನ್ನು ಎಲ್ಲಾ ಪಾಪಗಳಿಂದ ಶುದ್ಧಮಾಡುತ್ತದೆ (1 ಯೋಹಾನ 1:7). ಶುದ್ಧಪಡಿಸುವದರ ಜೊತೆಯಲ್ಲಿ ಅನ್ಯೋನ್ಯತೆಯು

ಮುಂದುವರೆಯುವದಿಲ್ಲವೋ? ನಮ್ಮ ಅನ್ಯೋನ್ಯತೆಯನ್ನು ನಾವು ನಿಯಂತ್ರಿಸುತ್ತೇವೆ, ಆದರೆ ತನ್ನ ದೇಹದಲ್ಲಿನ ಸದಸ್ಯತ್ವವನ್ನು ದೇವರು ನಿಯಂತ್ರಿಸುತ್ತಾನೆ. ಆತನಿಗೆ ನಮ್ಮ ಸಲಹೆಯ ಅಗತ್ಯವಿಲ್ಲ.

ನಾವು ಆಜ್ಞೆಗಳನ್ನು ನಮ್ಮಿಷ್ಟದಂತೆ ಎತ್ತಿ ಆರಿಸಿಕೊಳ್ಳುವ, ಬೇರೆಯವರಿಗೆ ತೀರ್ಪು ಮಾಡುವ, ಮತ್ತು ದೇವರಿಗೆ ಸಲಹೆ ನೀಡುವ ನಮ್ಮ ಮಾನವ ಪ್ರವೃತ್ತಿಯನ್ನು ಬಿಟ್ಟು ಬಿಡಬೇಕು. ನಮ್ಮ ದೃಢವಾದ ಹಿಡಿತವು ಕ್ರಿಸ್ತನ ಮತ್ತು ಆತನ ಸತ್ಯದ ಮೇಲೆ ಇರತಕ್ಕದ್ದು-ಮತ್ತು ನಾವು ಅಂತ್ಯದ ವರೆಗೂ “ಹಿಡಿದುಕೊಂಡಿರಬೇಕು” (ವ. 14).

## ನಾವು ದೇವರಿಗೆ ಕೋಪವನ್ನೆಬ್ಬಿಸಬಲ್ಲೆವು (3:16, 17)

“ಕೋಪವನ್ನೆಬ್ಬಿಸು” (παραπικραίνω, *parapikrainō*), ಎಂಬದರ ಅರ್ಥವು “ಕಹಿಭಾವನೆಗಳನ್ನು ಪ್ರಚೋದಿರು,” ಅಥವಾ “ಕೆರಳಿಸು” ಎಂದಾಗಿರುತ್ತದೆ. ಹೌದು, ನಾವು ಆತನ ವಾಕ್ಯದಿಂದ ದೂರ ಹೋಗಿ ನಮ್ಮ ಹೃದಯಗಳನ್ನು ಕಠಿಣಗೊಳ್ಳುವಂತೆ ಅನುಮತಿಸುವದಾದರೆ, ಅಂತಿಮವಾಗಿ ನಾವು ಕರ್ತನ ಕರುಣೆಯನ್ನು ಮುಗಿದು ಹೋಗುವಂತೆ ಮಾಡಬಲ್ಲೆವು ಮತ್ತು ದೇವರ ದೀರ್ಘಶಾಂತಿಯನ್ನು ಕೆರಳಿಸಬಲ್ಲೆವು. ಒಬ್ಬನು ಇಬ್ರಿಯ 6:4-6ರಲ್ಲಿ ಪಟ್ಟಿ ಮಾಡಲಾಗಿರುವ ಎಲ್ಲಾ ಆಶೀರ್ವಾದಗಳನ್ನು ಸ್ವೀಕರಿಸಿಕೊಂಡವನಾಗಿ ಬಳಿಕ ಬಿದ್ದು ಹೋಗುವದಾದರೆ, ಆತನು ತನ್ನನ್ನು ದೇವರ ಕೋಪಕ್ಕೆ ಯೋಗ್ಯನನ್ನಾಗಿಸಿಕೊಳ್ಳುತ್ತಿದ್ದಾನೆ. ಅರಣ್ಯದಲ್ಲಿ ಇಸ್ರಾಯೇಲ್ಯರು ಪಾಪ ಮಾಡಿದಾಗ, ಅವರು ಬಿದ್ದು ಹೋದರು ಮತ್ತು ಅವರ ಶವಗಳು ಧಗಿಸುವ ಸೂರ್ಯನ ಬಿಸಿಲಲ್ಲಿ ಕೊಳೆತು ಹೋದವು. ದೇವರು ಅವರ ವಿಷಯದಲ್ಲಿ ನಾಲ್ವತ್ತು ವರ್ಷಗಳ ಕಾಲ ಕೋಪದಿಂದಿದ್ದನು, ಮತ್ತು ಆತನ ಕೋಪವು ಯೋಗ್ಯವಾದದ್ದೇ ಆಗಿತ್ತು. ಆತನು ಅವರ ಮೇಲೆ ಆಶೀರ್ವಾದಗಳನ್ನು ಸುರಿಸಿದ್ದನು, ಅವರನ್ನು “ಹದ್ದು ತನ್ನ ಮರಿಗಳನ್ನು ಹೊತ್ತುಕೊಳ್ಳುವಂತೆ” ಅವರನ್ನು ಐಗುಪ್ತದಿಂದ ಹೊತ್ತುಕೊಂಡು ಬಂದು ಬಿಡಿಸಿದ್ದನು (ವಿಮೋಚನಕಾಂಡ 19:4). ಆತನು ಅವರಿಗೆ ತಂದೆಯಂತಿದ್ದನು, ಅವರಿಗೆ ಮನ್ನಾವನ್ನು ರೊಟ್ಟಿಯಾಗಿ, ಮಾಂಸಕ್ಕೆ ಲಾವಕ್ಕಿಗಳನ್ನು ಕೊಟ್ಟನು, ಬಂಡೆಗಳಿಂದ ನೀರನ್ನು ಒದಗಿಸಿದನು, ಮತ್ತು ತನ್ನಲ್ಲಿ ಒಬ್ಬ ಮಹಾ ವಿಶ್ವಾಸಿಯಾಗಿ ನಾಯಕತ್ವವನ್ನು ಒದಗಿಸಿದ್ದನು. ಜನರು ಆತನನ್ನು ತಿರಸ್ಕರಿಸಿದಾಗ ದೇವರು ಹೇಗೆ ಕೋಪಗೊಳ್ಳದೆ ಇರುವದಕ್ಕೆ ಸಾಧ್ಯ? ಆತನು ಖಂಡಿತವಾಗಿಯೂ ನಾಲ್ವತ್ತು ವರ್ಷಗಳ ಕಾಲ ಕೋಪದಿಂದಿದ್ದನು! ನಾವು ದೇವರಿಗೆ ಕೋಪವನ್ನೆಬ್ಬಿಸುತ್ತಿದ್ದೇವೆಂಬುದನ್ನು ಕಾಣುವದಾದರೆ ನಮ್ಮನ್ನು ಪರೀಕ್ಷಿಸಿಕೊಳ್ಳೋಣ ಮತ್ತು ತ್ವರೆಯಾಗಿ ನಮ್ಮನ್ನು ಬದಲಾಯಿಸಿಕೊಳ್ಳೋಣ.

## ಅಪನಂಬಿಕೆಯುಳ್ಳವರ ಅವಿಧೇಯತೆ (3:18, 19)

ವಿಧೇಯರಾಗುವದನ್ನು ಮುಂದುವರೆಸದವರು ದೇವರ ಕೋಪವನ್ನು ಪಡೆದುಕೊಂಡರು. ಇಸ್ರಾಯೇಲ್ಯರು ತನ್ನ ಪ್ರಯಾಣವನ್ನು ಬಹಳ ಉತ್ಸಾಹದೊಂದಿಗೆ ಆರಂಭಿಸಿದ್ದರು, ಆದರೆ ಯಾವಾಗಲೂ ಒಂದೇ ವಿಧವಾದ ಆಹಾರವನ್ನು ಸೇವಿಸಿದ್ದು ಅವರು ಐಗುಪ್ತದವರಿಂದ ತಮ್ಮ ಮೇಲೆ ಹೇರಲಾಗುತ್ತಿದ್ದ ಭಯಂಕರವಾದ ನಿಂದನೆಯನ್ನು ಮರೆತು ಬಿಟ್ಟು ಅವರ ಹೊಟ್ಟೆಗಳು ಅಲ್ಲಿ ಎಷ್ಟು ಚೆನ್ನಾಗಿ ತುಂಬಿಸಲ್ಪಡುತ್ತಿದ್ದವೆಂಬುದನ್ನು ಕುರಿತು ಯೋಚಿಸುವಂತೆ ಮಾಡಿತ್ತು (ಅರಣ್ಯಕಾಂಡ 11:5). ದೇವರ ಜನರು ತಮ್ಮ ಮುಂಚಿನ ದಾಸತ್ವವನ್ನು ಹೇಸುವದಕ್ಕಿಂತಲೂ ಅಧಿಕವಾಗಿ ಅಲ್ಲಿ ಸಿಕ್ಕುತ್ತಿದ್ದ ಬೆಳ್ಳುಳ್ಳಿಯನ್ನು ನೆನಪಿಸಿಕೊಂಡರು.

ನಾವು ನಮ್ಮ ಪಾಪಗಳ ಬಗ್ಗೆ ಎಷ್ಟೋ ಸ್ವಸಂತೃಪ್ತಿಯುಳ್ಳವರಾಗಿ ಬದಲಾವಣೆಯನ್ನು ಎದುರುಗೊಳ್ಳುವದಕ್ಕೆ ಬಯಸದವರಾಗಬಹುದು. ಬಹುಶಃ ನಮ್ಮ ಸುತ್ತಲಿನವರು ಪಶ್ಚಾತ್ತಾಪ ಪಡುವಂತೆ ಕರ್ತನು ನೀಡಿರುವ ಆಜ್ಞೆಗೆ ವಿಧೇಯರಾಗುವದನ್ನು ನಮಗೆ ಕಠಿಣಗೊಳಿಸಬಹುದು. ಅವಿಧೇಯತೆಗೆ ದಾರಿ ಮಾಡುವ ಯಾವದನ್ನೇ ಆಗಲಿ ಜಯಿಸತಕ್ಕದ್ದು, ಇಲ್ಲವಾದರೆ ನಮ್ಮ ಮೇಲೆ ದೇವರ ಕೋಪವು ಬರುವದು.

ಇಬ್ರಿಯರಿಗೆ ಪತ್ರಿಕೆಯಲ್ಲಿ ವಿಧೇಯತೆಯು ಮುಖ್ಯವಾದ ಯೋಚನೆಯಾಗಿರುತ್ತದೆ. ಅಂತಿಮ ದಿನದ ಕೋಪವು "ಸುವಾರ್ತೆಗೆ ವಿಧೇಯರಾಗದವರ" ಮೇಲೆ ಇರುತ್ತದೆಂಬುದನ್ನು ನೆನಪಿಸಿಕೊಳ್ಳಿರಿ (2 ಥೆಸಲೋನಿಕ 1:7-9). ವಿಧೇಯರಾಗುವವರಿಗೆ ಮಾತ್ರವೇ ರಕ್ಷಣೆ ಕೊಡಲ್ಪಡುತ್ತದೆ (ಇಬ್ರಿಯ 5:8, 9). ಅಪನಂಬಿಕೆ ಮತ್ತು ಅವಿಧೇಯತೆಗಳು ಇಬ್ರಿಯರಿಗೆ ಪತ್ರಿಕೆಯಲ್ಲಿ ಸಮಾನಗೊಳಿಸಲ್ಪಟ್ಟಿರುತ್ತವೆ, 18 ಮತ್ತು 19 ವಚನಗಳಲ್ಲಿ, ಅದೇ ರೀತಿಯಾಗಿ ಯೋಹಾನ 3:36ರಲ್ಲಿ ದೃಷ್ಟಾಂತಪಡಿಸಲ್ಪಟ್ಟಿರುವ ಪ್ರಕಾರವೇ. ನಂಬಿಕೆ ಮತ್ತು ವಿಧೇಯತೆ ಅನೇಕ ಸಾರಿ ಹೊಸ ಒಡಂಬಡಿಕೆಯಲ್ಲಿ ಪರ್ಯಾಯವಾಗಿ ಬಳಸಲ್ಪಟ್ಟಿರುತ್ತವೆ. ನಂಬಿಗಸ್ತಿಕೆಯು ರಕ್ಷಣೆಗೆ ಜೀವಾಳವಾಗಿರುತ್ತದೆ; "ಶರತ್ತುರಹಿತ ನಿತ್ಯವಾದ ಭದ್ರತೆ" ಎಂಬ ವಿಚಾರವೇ ಶಾಸ್ತ್ರಗಳಿಗೆ ಒಂದು ಅಪರಿಚಿತವಾದ ಭಾವನೆಯಾಗಿರುತ್ತದೆ.

---

## ಅಡಿಟಿಪ್ಪಣಿಗಳು

[1]James Burton Coffman, *Commentary on Hebrews* (Austin, Tex.: Firm Foundation Publishing House, 1971), 67–69ರಲ್ಲಿ ಯೇಸು ಮತ್ತು ಮೋಶೆಯ ನಡುವಿನ ಹೋಲಿಕೆಗಳು ಹಾಗೂ ವಿರುದ್ಧ ಹೋಲಿಕೆಗಳ ದೊಡ್ಡದಾದ ಒಂದು ಪಟ್ಟಿಯು ಕೊಡಲ್ಪಟ್ಟಿರುತ್ತದೆ. [2]ಕೆಲವು ನಂತರ ಹಸ್ತಪ್ರತಿಗಳು 1 ಥೆಸಲೋನಿಕ 5:27ರಲ್ಲಿ "ಪರಿಶುದ್ಧ ಸಹೋದರರೇ" ಎಂದು ಹೊಂದಿರುತ್ತವೆ. KJV ಮತ್ತು NKJV ತರ್ಜುಮೆಗಳಲ್ಲಿ ಹಾಗೆ ಇರುತ್ತದೆ, ಆದರೆ ASV, NASB, NIV, ಮತ್ತು RSV "ಪರಿಶುದ್ಧ" ಎಂಬುದನ್ನು ಕೈ ಬಿಡಲಾಗಿರುತ್ತದೆ, ಯಾಕೆಂದರೆ ಉತ್ತಮವಾದ ಹಸ್ತಪ್ರತಿಗಳಲ್ಲಿ ಅದು ಇರುವದಿಲ್ಲ. [3]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 122. [4]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 127. [5]James Thompson, *The Letter to the Hebrews*, The Living Word Commentary (Austin, Tex.: R. B. Sweet Co., 1971), 49. [6]"ಸೇವಕ" ಎಂಬುದಕ್ಕಿರುವ ನಿರ್ದಿಷ್ಟವಾದ ಗ್ರೀಕ್ ಪದವು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಬಳಸಲ್ಪಟ್ಟಿರುತ್ತದೆ, ಆದರೆ LXX ನಲ್ಲಿ ಅದು ಸತತವಾಗಿ ಕಾಣಿಸಿಕೊಳ್ಳುತ್ತದೆ. ಅದು θεράπων (*therapōn*) ಎಂಬ ಪದ, ಇದು ತನ್ನ ಮೇಲಿನವನಿಗಿಂತ ಕಡಿಮೆಯಾದವನು ಎಂಬುದನ್ನು ಸೂಚಿಸುತ್ತದೆ. [7]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 78. [8]Hughes, 139. [9]Thompson, 54. [10]Thomas Hewitt, *The Epistle to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 82.

[11]Raymond Brown, *The Message of Hebrews: Christ Above All*, The Bible Speaks Today (Downers Grove, Ill.: Inter-Varsity Press, 1982), 84. [12]Thompson, 55. [13]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 109. [14]Thompson, 55-56. [15]Merrill C. Tenney, *New Testament Survey* (Grand Rapids, Mich.: Wm. B. Eerdmans Publishing Co., 1961), 361. [16]Simon J. Kistemaker, *Exposition of the Epistle to the Hebrews,* New Testament Commentary (Grand Rapids, Mich.: Baker Book House, 1984), 97. [17]Albert Barnes, *Notes on the New Testament: Hebrews to Jude* (London: Blackie & Son, 1884-85; reprint, Grand Rapids,

Mich.: Baker Book House, 1985), 90. [18]Guthrie, 110. [19]ಪದಗಳ ಬಳಕೆಯು NASB, ASV, ISV, ಮತ್ತು NRSV ತರ್ಜುಮೆಗಳಲ್ಲಿ ಒಂದೇ ಆಗಿರುತ್ತದೆ. NIVಯಲ್ಲಿ "ನಂಬುವವನು" ಮತ್ತು "ತಿರಸ್ಕರಿಸುತ್ತಾನೆ" ಎಂದಿರುತ್ತದೆ. [20]Hughes, 139.

[21]Coffman, 70. [22]Gerald F. Hawthorne, "Hebrews," in *The New International Bible Commentary*, ed. F. F. Bruce, H. L. Ellison, and G. C. D. Howley (Grand Rapids, Mich.: Zondervan Publishing House, 1986), 1511-12; Hawthorne's comment was based on Johannes Schneider, *The Letter to the Hebrews* (Grand Rapids, Mich.: Wm. B. Eerdmans Publishing Co., 1957), 31-32. [23]Gareth L. Reese, *A Critical and Exegetical Commentary on the Epistle to the Hebrews* (Moberly, Mo.: Scripture Exposition Books, 1992), 49. [24]Barnes, 85.